

ವೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಸೆಪ್ಟೆಂಬರ್ 13 ಬುಧವಾರ 2023

ಸಂಪುಟ: 44 | ಸಂಚಿಕೆ: 149 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮುಂಗಾರು ವೈಫಲ್ಯ ಹಿನ್ನೆಲೆ



ನಾಳೆ ಬರ ಸಂಬಂಧ ಮಹತ್ವದ ನಿರ್ಧಾರ

- 154 ತಾಲೂಕು ಬರಪೀಡಿತ; ಅಧಿಕಾರಿಗಳ ವರದಿ
- ಅಗತ್ಯ ಕ್ರಮ ಕೈಗೊಳ್ಳಲು ಆಯಾಯ ಜಿಲ್ಲಾಡಳಿತಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ
- ಆಹಾರ ಧಾನ್ಯದ ಕೊರತೆ ಆಗದಂತೆ ಎಚ್ಚರ ವಹಿಸಿ
- ಇಂದು ಕಂದಾಯ ಸಚಿವ ಕೃಷ್ಣಭೈರೇಗೌಡರ ನೇತೃತ್ವದ ಉಪಸಮಿತಿ ಸಭೆಯಲ್ಲಿ 154ಕ್ಕೆ ಇನ್ನೂ 4 ತಾಲೂಕು ಸೇರಿಸುವ ಸಾಧ್ಯತೆ
- ಗುರುವಾರ ನಡೆಯುವ ಸಂಪುಟ ಸಭೆಯಲ್ಲಿ ನಿರ್ಧರಿಸಿ ಅಧಿಕೃತವಾಗಿ ಘೋಷಣೆ



ಬೆಂಗಳೂರು, ಸೆ.12(ಕೆಎಂಶಿ)–ಮುಂಗಾರು ಮಳೆ ವೈಫಲ್ಯದಿಂದ ತೀವ್ರ ಸಂಕಷ್ಟ ಪರಿಸ್ಥಿತಿಗೀಡಾಗಿರುವ ರಾಜ್ಯದ 154 ತಾಲೂಕುಗಳನ್ನು ಬರಪೀಡಿತವೆಂದು ಘೋಷಿಸಲು ರಾಜ್ಯ ಸರ್ಕಾರ ಕೊನೆಗೂ ಸಜ್ಜಾಗಿದೆ.

ಮಳೆ ಕೊರತೆಯಿಂದ ಆಹಾರ ಧಾನ್ಯದ ಕೊರತೆ ಅದರಲ್ಲೂ ಬತ್ತ ಹಾಗೂ ರಾಗಿ ದಾಸ್ತಾನು ಬಗ್ಗೆ ಎಚ್ಚರ ವಹಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾಡಳಿತಗಳಿಗೆ ಆದೇಶ ನೀಡಿದ್ದಾರೆ. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮಂಗಳವಾರ ನಡೆದ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಬರ ಘೋಷಣೆಯ ತೀರ್ಮಾನ ಪ್ರಕಟಿಸಿದ್ದಾರೆ. ಕಳೆದ ನಾಲ್ಕೈದು ವಾರಗಳಿಂದ ▶ 5ನೇ ಪುಟಕ್ಕೆ

ರೈತರ, ಬಡವರ ಕೆಲಸ ಮಾಡದ ಅಧಿಕಾರಿಗಳು ಮನುಷ್ಯತ್ವ ಇಲ್ಲದವರು...

- ಅಧಿಕಾರಿ ವರ್ಗಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಿಡಿಶಾಪ!
- ಐಟಿ–ಬಿಟಿ ಅವರ ರೀತಿ ಮನೆಯಲ್ಲಿ ಕುಳಿತು ಕೆಲಸ ಮಾಡಬೇಡಿ; ಕಚೇರಿ, ಕ್ಷೇತ್ರಕ್ಕೆ ಹೋಗಿ ಜನರ ಸಮಸ್ಯೆ ಪರಿಹರಿಸಿ
- ವಾರಕ್ಕೊಮ್ಮೆ ತಾಲೂಕು ಮಟ್ಟದಲ್ಲಿ ಸಚಿವರು, ಶಾಸಕರೊಂದಿಗೆ ಜನಸಂಪರ್ಕ ಸಭೆ ಮಾಡಿ ಜನರ ಸಮಸ್ಯೆ ಆಲಿಸಿ

ಬೆಂಗಳೂರು, ಸೆ.12(ಕೆಎಂಶಿ)– ರೈತರ, ಬಡವರ ಕೆಲಸಗಳನ್ನು ಮಾಡದ ಅಧಿಕಾರಿಗಳು ಮನುಷ್ಯತ್ವ ಇಲ್ಲದವರು. ಇಂಥವರು ಸಾರ್ವಜನಿಕ ಸೇವೆಗೆ ಬರಬೇಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಶಾಹಿಗೆ ಎಚ್ಚರಿಕೆ ಸಂದೇಶ ನೀಡಿದ್ದಾರೆ ಐಟಿ, ಬಿಟಿ ಉದ್ಯೋಗಿಗಳಂತೆ ನೀವು ಮನೆಯಲ್ಲಿ ಕುಳಿತು ಕೆಲಸ ಮಾಡುವುದನ್ನು ಬಿಡಿ. ಕಚೇರಿ ಮತ್ತು ಕ್ಷೇತ್ರದಲ್ಲಿ ಜನರ ಸಮಸ್ಯೆಗಳನ್ನು ಆಲಿಸಿ ಪರಿಹಾರಕ್ಕೆ ಮುಂದಾಗಿ.

ಮನೆಯಲ್ಲಿ ಕುಳಿತು ಕೆಲಸ ಮಾಡಲು ನಾವು ಸಂಬಳ ಕೊಡುತ್ತಿಲ್ಲ. ಸರ್ಕಾರವೆಂದರೆ ನಂಬಿಕೆ. ನಾಡಿನ ಜನರ ಸೇವೆಗೆ ನಾವಿದ್ದೇವೆ ಎಂಬುದನ್ನು ನೆನಪಿನಲ್ಲಿಟ್ಟು ಕೆಲಸ ಮಾಡಿ ಎಂದು ಖಾರವಾಗಿ ತಿಳಿಸಿದ್ದಾರೆ. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು ನಡೆದ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು, ಸ್ಥಳೀಯ ಸಮಸ್ಯೆಗಳಿಗೆ ನೀವು ಸ್ಪಂದಿಸದಿರುವುದರಿಂದ ಜನರು ನಮ್ಮ ಹಾಗೂ ವಿಧಾನಸೌಧದ ಬಾಗಿಲು ತಟ್ಟುತ್ತಿದ್ದಾರೆ. ▶ 5ನೇ ಪುಟಕ್ಕೆ

ತಮಿಳುನಾಡಿಗೆ ಮತ್ತೆ ನೀರು ಹರಿಸಲು ಆದೇಶ ಹಿನ್ನೆಲೆ

ಮಂಡ್ಯದಲ್ಲಿ ಭುಗಿಲೆದ್ದ ರೈತರ ಆಕ್ರೋಶ: ಹೋರಾಟ ಆರಂಭ



ಮಂಡ್ಯ, ಸೆ.12– ಕೆಆರ್‌ಎಸ್‌ನಿಂದ ತಮಿಳುನಾಡಿಗೆ ಮತ್ತೆ 15 ದಿನಗಳ ಕಾಲ ನಿತ್ಯವೂ 5 ಸಾವಿರ ಕ್ಯುಸೆಕ್ ನೀರು ಬಿಡಬೇಕೆಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಸೂಚನೆ ನೀಡಿರುವುದರಿಂದ ಮಂಡ್ಯ ಜಿಲ್ಲೆ ಸೇರಿದಂತೆ ಕಾವೇರಿ ಕೊಳ್ಳದ ರೈತರ ಆಕ್ರೋಶ ಭುಗಿಲೆದ್ದಿದ್ದು, ಮತ್ತೆ ರೈತರು ಹಾಗೂ ಪ್ರಗತಿಪರ ಸಂಘಟನೆಗಳು ಹೋರಾಟ ಆರಂಭಿಸಿವೆ.

ಈ ಕುರಿತು ಮಂಡ್ಯದಲ್ಲಿ ಮಾತನಾಡಿದ ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಕಾವೇರಿ ಜಲಾನಯನ ಪ್ರದೇಶದಲ್ಲಿ ಶೇ.63ರಷ್ಟು ಮಳೆ ಕೊರತೆಯಾಗಿದೆ. ಇದರ ನಡುವೆಯೂ ತಮಿಳುನಾಡಿಗೆ 36 ಟಿಎಂಸಿ ನೀರು ಬಿಡಲಾಗಿದೆ. ಕಾವೇರಿ ಪ್ರಾಧಿಕಾರ ಹಾಗೂ ಸಮಿತಿ ನೀಡಿದ ಎಲ್ಲಾ ಸೂಚನೆ ಪಾಲಿಸಲಾಗಿದೆ. ಆದರೆ ಇಂದು ಮತ್ತೆ ನೀರು ಬಿಡಿ ಎಂದು ಹೇಳಿರುವುದು ಸರಿ ಇಲ್ಲ ಎಂದರು.

ವ್ಯತಿರಿಕ್ತ ಸೂಚನೆ ಬಂದಿರುವುದರಿಂದ ಸರ್ಕಾರ ದಿಟ್ಟ ನಿರ್ಧಾರ ತೆಗೆದುಕೊಳ್ಳಬೇಕು. ಯಾವುದೇ ಕಾರಣಕ್ಕೂ ಮತ್ತೆ ತಮಿಳುನಾಡಿಗೆ ನೀರು ಬಿಡಬಾರದು. ಮತ್ತೆ ನೀರು ಬಿಟ್ಟಿದ್ದೇ ಆದರೆ ಸರ್ಕಾರದ ವಿರುದ್ಧ ಉಗ್ರ ಹೋರಾಟ ಮಾಡುತ್ತೇವೆ ಎಂದು ಹೇಳಿದರು. ಹಿತರಕ್ಷಣಾ ಸಮಿತಿಯ ಸುನಂದಾ ಜಯರಾಂ ಮಾತನಾಡಿ, ಪ್ರಾಧಿಕಾರ ನಿತ್ಯ ತಮಿಳುನಾಡಿಗೆ 5 ಸಾವಿರ ಕ್ಯೂಸೆಕ್ ನೀರು ಬಿಡಿ ಎಂದು ನೀಡಿರುವ ಸೂಚನೆಯನ್ನು ▶ 6ನೇ ಪುಟಕ್ಕೆ

ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ವಿಶೇಷ ತುರ್ತು ಸಭೆ

ಬೆಂಗಳೂರು, ಸೆ.12– ತಮಿಳುನಾಡಿಗೆ 5 ಸಾವಿರ ಕ್ಯುಸೆಕ್ ನೀರನ್ನು ಬಿಡುವಂತೆ ಕಾವೇರಿ ನದಿ ನೀರು ಪ್ರಾಧಿಕಾರ ಸೂಚಿಸಿರುವ ಹಿನ್ನೆಲೆಯಲ್ಲಿ ನಾಳೆ ಮಧ್ಯಾಹ್ನ 12.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ವಿಶೇಷ ತುರ್ತು ಸಭೆ ಕರೆಯಲಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಾವೇರಿ ಜಲಾನಯನ ಪ್ರದೇಶದ ವ್ಯಾಪ್ತಿಯ ಸಚಿವರುಗಳು, ಎಲ್ಲಾ ಪಕ್ಷಗಳ ಮಾಜಿ ಮುಖ್ಯಮಂತ್ರಿಗಳು, ರಾಜ್ಯ ಸಚಿವ ಸಂಪುಟದ ಹಿರಿಯ ಸಚಿವರು, ಲೋಕಸಭೆ ಮತ್ತು ರಾಜ್ಯಸಭಾ ಸದಸ್ಯರುಗಳು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಅಪಘಾತದ ನೆಪದಲ್ಲಿ ಮೈಸೂರಲ್ಲಿ ವಯೋವೃದ್ಧ ಕಾರು ಚಾಲಕರ ಸುಲಿಗೆ; ಖದೀಮನ ಬಂಧನ

- ಇತ್ತೀಚೆಗೆ ನಿವೃತ್ತ ಎಎಸ್‌ಐ ದೋಚಿದ್ದ
- ಹಲವರನ್ನು ಬೆದರಿಸಿ ಸುಲಿಗೆ ಸಾಧ್ಯತೆ



ಜಮೀಲ್

ಮೈಸೂರು, ಸೆ.12(ಎಸ್‌ಬಿಡಿ)– ಅಪಘಾತ ಮಾಡಿರುವುದಾಗಿ ವಯೋವೃದ್ಧ ಕಾರು ಚಾಲಕರನ್ನು ಹೆದರಿಸಿ, ಹಣ ದೋಚುತ್ತಿದ್ದ ಖತರ್ನಾಕ್ ಖದೀಮನನ್ನು ಮೈಸೂರಿನ ಕುವೆಂಪುನಗರ ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ. ಮೈಸೂರಿನ ಕೆಸರೆ 6ನೇ ಕ್ರಾಸ್ ನಿವಾಸಿ ಜಮೀಲ್ ಖಾನ್ ಅಲಿಯಾಸ್ ಜಮೀಲ್(32) ಬಂಧಿತನಾಗಿದ್ದು, ಈತ ದೋಚಿದ್ದ 40 ಸಾವಿರ ರೂ. ಹಣ, ಕೃತ್ಯಕ್ಕೆ ಬಳಸುತ್ತಿದ್ದ ಹೋಂಡಾ ಆಕ್ಟೀವಾ ಸ್ಕೂಟರ್ ಹಾಗೂ ಮೊಬೈಲ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಮ್ಮ ಕಚೇರಿಯ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಿವೃತ್ತ ಎಎಸ್‌ಐ ದೋಚಿದ್ದ: ಕೆಎಸ್‌ಆರ್‌ಪಿ ನಿವೃತ್ತ ▶ 8ನೇ ಪುಟಕ್ಕೆ

ಜೆಡಿಎಸ್–ಬಿಜೆಪಿ ಮೈತ್ರಿ ಬಗ್ಗೆ ಮೋದಿ, ಶಾ ನಿರ್ಧಾರ

ಇಂದು ದೆಹಲಿಗೆ ಯಡಿಯೂರಪ್ಪ; ವರಿಷ್ಠರ ಭೇಟಿ




ಬೆಂಗಳೂರು: 2024ರ ಲೋಕಸಭೆ ಚುನಾವಣೆಗೆ ಜೆಡಿಎಸ್ ಜೊತೆ ಬಿಜೆಪಿ ಮೈತ್ರಿ ಸಂಬಂಧ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಪಕ್ಷದ ಕೇಂದ್ರ ನಾಯಕತ್ವ ನಿರ್ಧರಿಸಲಿದೆ ಎಂದು ಬಿಜೆಪಿ ಹಿರಿಯ ನಾಯಕ ಬಿಎಸ್ ಯಡಿಯೂರಪ್ಪ ಮಂಗಳವಾರ ಹೇಳಿದ್ದಾರೆ.

ಪಕ್ಷದ ಚುನಾವಣಾ ಸಮಿತಿ ಸಭೆಯಲ್ಲಿ ಪಾಲ್ಗೊಳ್ಳಲು ದೆಹಲಿಗೆ ತೆರಳುವುದಾಗಿ ಹೇಳಿರುವ ಯಡಿಯೂರಪ್ಪ, ರಾಜ್ಯದ ರಾಜಕೀಯ ಪರಿಸ್ಥಿತಿ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಹೇಳಿದರು. ಬಿಜೆಪಿ–ಜೆಡಿಎಸ್ ಮೈತ್ರಿ ಬಗ್ಗೆ ನನಗೆ ಇದುವರೆಗೆ ಯಾವುದೇ ಹೆಚ್ಚಿನ ಮಾಹಿತಿ ಇಲ್ಲ, ಮೈತ್ರಿ ▶ 8ನೇ ಪುಟಕ್ಕೆ

ದಸರಾದಲ್ಲಿ ಒಂದಂಶದ ಕನ್ನಡ ಕಾರ್ಯಕ್ರಮ ಘೋಷಿಸಬೇಕು

ಸರ್ಕಾರಕ್ಕೆ ಮೈಸೂರು ದಸರಾ ಉದ್ಘಾಟಕರಾದ ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಒತ್ತಾಯ



- ಕನ್ನಡ ಅನಾಥವಾಗುವುದೆಂಬ ಆತಂಕ ಎಲ್ಲರಲ್ಲಿದೆ
- ನಮಗೆ ದೆಹಲಿ ಬೇಕು; ದೆಹಲಿಗರಿಗೆ ಕನ್ನಡ ಬೇಕಿಲ್ಲ
- ಎಡ, ಬಲ, ಮಧ್ಯವೆಂಬ ವಿಂಗಡಣೆಯ ಕವಿ ಪಟ್ಟ ಬೇಕಿಲ್ಲ
- ಸ್ಮಾರ್ಟ್ ಸಿಟಿ ಬದಲು, ವಿಲೇಜ್ ಸಿಟಿ ಮಾಡಲಿ



ಮೈಸೂರು, ಸೆ.12(ಬಿಎಲ್‌ಯು)– ಅನ್ಯ ಭಾಷೆಯ ಪ್ರಭಾವವನ್ನು ಮೆಟ್ಟಿ ನಿಲ್ಲುವ ಸಲುವಾಗಿ ಒಂದಂಶದ ಕನ್ನಡ ಕಾರ್ಯಕ್ರಮವನ್ನು ದಸರಾ ವೇಳೆ ಸರ್ಕಾರ ಘೋಷಣೆ ಮಾಡಲಿ ಎಂದು ಈ ಬಾರಿಯ ಮೈಸೂರು ದಸರಾ ಮಹೋತ್ಸವದ ಉದ್ಘಾಟಕರೂ ಆದ ಖ್ಯಾತ ಚಿತ್ರ ಸಂಗೀತ ನಿರ್ದೇಶಕ ಹಂಸಲೇಖ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಮೈಸೂರಿನ ಪತ್ರಕರ್ತರ ಭವನದಲ್ಲಿ ಇಂದು ಜಿಲ್ಲಾ ಪತ್ರಕರ್ತರ ಸಂಘ ಆಯೋಜಿಸಿದ್ದ ಪತ್ರಿಕಾ ಸಂವಾದದಲ್ಲಿ ಮಾತನಾಡಿದ ಅವರು, ತಮಿಳು, ತೆಲುಗು, ಹಿಂದಿ, ಇಂಗ್ಲಿಷ್ ಸೇರಿದಂತೆ ಇತರೆ ಭಾಷೆಗಳ ಭರಾಟೆಯನ್ನು ಮೆಟ್ಟಿ ನಿಲ್ಲುವ ಸಲುವಾಗಿ ಕನ್ನಡ ಭಾಷೆ ಪ್ರಬಲವಾಗಿ ತನ್ನ ಹಕ್ಕು ಸಾಧಿಸಲು ಒಂದಂಶದ ಕನ್ನಡ ಕಾರ್ಯಕ್ರಮ ರೂಪಿಸುವ ಅನಿವಾರ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

ಕನ್ನಡ ಉಳಿಸದಿದ್ದರೆ ಉಳಿಗಾಲವಿಲ್ಲ: ನಾಲ್ಕಾರು ಭಾಷೆಗಳ ವಿರುದ್ಧ ಕನ್ನಡ ಭಾಷೆ ಸೆಣಸಬೇಕಿದೆ. ಕನ್ನಡ ಭಾಷೆ ಉಳಿಸದಿದ್ದರೆ ಕನ್ನಡದ ಆಸ್ತಿ, ಸಂಪತ್ತು ಕೈ ತಪ್ಪುವ ಆತಂಕವಿದೆ. ಈ ಮೂಲಕ ಕನ್ನಡ ತನ್ನ ಹಕ್ಕು ಸಾಧಿಸಲು ಸಾಧ್ಯವಾಗದ ಪರಿಸ್ಥಿತಿ ಎದುರಾಗುತ್ತದೆ. ಅಂತಿಮವಾಗಿ ಕರ್ನಾಟಕದಲ್ಲಿ ಕನ್ನಡಿಗರು ಅನಾಥರಾಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆಯ ಉಳಿವಿಗಾಗಿ, ಸಂರಕ್ಷಣೆಗಾಗಿ ಒಂದಂಶದ ಕನ್ನಡ ಕಾರ್ಯಕ್ರಮ ರೂಪಿಸಬೇಕಿದೆ ಎಂದು ಹಂಸಲೇಖ ಹೇಳಿದರು.

ಹಿಂದಿ ಹೇರಿಕೆ ಇವತ್ತು ನಿನ್ನೆಯದ್ದಲ್ಲ. ಹಿಂದಿನಿಂದಲೂ ಬಲವಂತವಾಗಿ ಹಿಂದಿ ಹೇರುವ ಪ್ರಯತ್ನಗಳು ನಡೆಯುತ್ತಲೇ ಇದೆ. ಆದರೆ ಇತ್ತೀಚೆಗೆ ಹಿಂದಿ ಹೇರಿಕೆಯ ಒತ್ತಡ ಹೆಚ್ಚಾಗುತ್ತಿದೆ. ರಾಷ್ಟ್ರ ರಾಜಧಾನಿ ದೆಹಲಿ ನಮಗೆ ಬೇಕು. ಆದರೆ ದೆಹಲಿಯವರಿಗೆ ಕನ್ನಡ ಬೇಕಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವಿದ್ದೇವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇಂಗ್ಲಿಷ್ ಭಾಷೆ ಕಲಿತವರಿಗೆ ಉದ್ಯೋಗ ▶ 6ನೇ ಪುಟಕ್ಕೆ


ಮೈಸೂರಲ್ಲಿ ಫಿಲ್ಮ್ ಸಿಟಿ ನಿರ್ಮಾಣದ ಹೊಣೆಯನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡಬೇಡಿ, ದಿಕ್ಕು ತಪ್ಪಿಸಬೇಡಿ...!

- ರಾಜ ವಿನ್ಯಾಸದಲ್ಲಿ ಫಿಲ್ಮ್ ಸಿಟಿ ನಿರ್ಮಿಸಿ
- ಮೈಸೂರಿನ ಪಾರಂಪರಿಕ ನಿರ್ಮಾಣಗಳ ಉಳಿಸಿ
- ಚಲನಚಿತ್ರ ರಂಗ ಚುಕ್ಕಾಣಿ ಇಲ್ಲದ ಹಡಗಾಗಿದೆ

ಮೈಸೂರು, ಸೆ12(ಬಿಎಲ್‌ಯು)– ಮೈಸೂರಿನಲ್ಲಿ ಸ್ಥಾಪಿಸುತ್ತಿರುವ ಫಿಲ್ಮ್ ಸಿಟಿ ನಿರ್ಮಾಣ ಕಾರ್ಯವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡಿ, ದಿಕ್ಕು ತಪ್ಪಿಸಬಾರದು ಎಂದು ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಬೆಂಗಳೂರಿನಲ್ಲಿ ಫಿಲ್ಮ್ ಸಿಟಿ ನಿರ್ಮಾಣ ಅಸಾಧ್ಯ. ಅಲ್ಲಿ ವಿಶಾಲವಾದ ಜಾಗವೇ ಇಲ್ಲ. ಆದರೆ ಫಿಲ್ಮ್ ಸಿಟಿ ನಿರ್ಮಾಣಕ್ಕೆ ಮೈಸೂರು ಹೇಳಿ ಮಾಡಿಸಿದ ಸ್ಥಳ. ಈ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ರಾಜ ವಿನ್ಯಾಸದಲ್ಲಿ ಅತ್ಯಾಧುನಿಕ ಫಿಲ್ಮ್ ಸಿಟಿ ನಿರ್ಮಿಸಬೇಕು ಎಂದು ಒತ್ತಾಯಿಸಿದರು. ದೇಶದಲ್ಲಿರುವ ಹಲವು ಸ್ಟುಡಿಯೋ ಮಾಲೀಕರು ಹಾಗೂ ತಜ್ಞರ ಸಲಹೆ ಪಡೆದು ಫಿಲ್ಮ್ ಸಿಟಿ ನಿರ್ಮಿಸಬೇಕು. ಆದರೆ ಯಾವುದೇ ಕಾರಣಕ್ಕೂ ಬಹುರಾಷ್ಟ್ರೀಯ ಕಂಪನಿಗಳಿಗೆ ಫಿಲ್ಮ್ ಸಿಟಿ ನಿರ್ಮಾಣ ಕಾರ್ಯದ ಜವಾಬ್ದಾರಿ ನೀಡಬಾರದು ಎಂದು ಹಂಸಲೇಖ ಸರ್ಕಾರಕ್ಕೆ ಮನವಿ ಮಾಡಿದರು.

ಮೈಸೂರಿನ ಪಾರಂಪರಿಕ ಕಟ್ಟಡಗಳು ಉಳಿಯಬೇಕು: ಮೈಸೂರಿನ ದೇವರಾಜ ಮಾರುಕಟ್ಟೆಯನ್ನು ನೆಲಸಮ ಮಾಡಲು ಮುಂದಾಗಿರುವ ಸರ್ಕಾರದ ಕ್ರಮಕ್ಕೆ ಪ್ರತಿಕ್ರಿಯೆ ನೀಡಿದ ಹಂಸಲೇಖ, ಮೈಸೂರಿನ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸಬೇಕು. ಮೈಸೂರಿನ ರಾಜ ವಿನ್ಯಾಸವನ್ನು ಹಾಗೆಯೇ ಉಳಿಸಬೇಕು. ರಾಜ ಪರಂಪರೆ ಇರುವ ಮೈಸೂರಿನಲ್ಲಿ ರಾಜ ವಿನ್ಯಾಸದ ಕಟ್ಟಡಗಳನ್ನು ಉಳಿಸಲು ಇಂಜಿನಿಯರ್‌ಗಳು ಬದ್ಧತೆ ತೋರಬೇಕು ಎಂದು ಸಲಹೆ ನೀಡಿದರು. ಚಲನಚಿತ್ರ ವಾಣಿಜ್ಯ ಮಂಡಳಿ ಚುಕ್ಕಾಣಿ ಇಲ್ಲದ ಹಡಗಿನಂತಾಗಿದೆ. ಚಿತ್ರರಂಗದಲ್ಲಿ ಭಿನ್ನಾಭಿಪ್ರಾಯ ಬಂದಾಗ ಮುಂದೆ ▶ 6ನೇ ಪುಟಕ್ಕೆ



ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಲೋಕನಾಥ್ ನೇಮಕಾತಿ ರದ್ದು

- ಹೈಕೋರ್ಟ್ ಮಹತ್ವದ ತೀರ್ಪು
- ಕುಲಪತಿ ನೇಮಕಾತಿಗೆ ಹೊಸದಾಗಿ ಪ್ರಕ್ರಿಯೆ ಆರಂಭಿಸಲು ಸರ್ಕಾರಕ್ಕೆ ನಿರ್ದೇಶನ



ಮೈಸೂರು, ಸೆ.12(ಬಿಎಲ್‌ಯು)– ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ನೇಮಕಾತಿಯನ್ನು ಹೈಕೋರ್ಟ್ ರದ್ದುಪಡಿಸಿದೆ.

ನ್ಯಾಯಮೂರ್ತಿ ಎನ್.ಎಸ್. ಸಂಜಯ್‌ಗೌಡ ನೇತೃತ್ವದ ಏಕ ಸದಸ್ಯ ಪೀಠ ಈ ಮಹತ್ವದ ತೀರ್ಪು ನೀಡಿದೆ.

ಪ್ರೊ.ಲೋಕನಾಥ್ ಅವರನ್ನು ಕುಲಪತಿಯಾಗಿ ನೇಮಕ ಮಾಡಿರುವುದು ಯುಜಿಸಿಯ ನಿಯಮಾವಳಿಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಈ ಹಿನ್ನೆಲೆಯಲ್ಲಿ ಅವರ ನೇಮಕವನ್ನು ಅಸಿಂಧುಗೊಳಿಸುವಂತೆ ಕುಲಪತಿ ಹುದ್ದೆಯ ಆಕಾಂಕ್ಷಿಯಾಗಿದ್ದ ಪ್ರೊ.ಶರತ್ ಅನಂತಮೂರ್ತಿ ಅವರು ಹೈಕೋರ್ಟ್‌ಗೆ ಆಕ್ಷೇಪಣಾ ಅರ್ಜಿ ಸಲ್ಲಿಸಿದ್ದರು. ಪ್ರೊ.ಶರತ್ ಅನಂತಮೂರ್ತಿ ಅವರ ಪರವಾಗಿ ಹಿರಿಯ ನ್ಯಾಯವಾದಿ ಪ್ರೊ.ರವಿವರ್ಮ ಕುಮಾರ್ ವಾದ ಮಂಡಿಸಿದ್ದರು. ಕುಲಪತಿಯಾಗಿ ನನ್ನ ನೇಮಕ ಕಾನೂನು ಬದ್ಧವಾಗಿದೆ ಎಂದು ಪ್ರೊ.ಲೋಕನಾಥ್ ಕೂಡ ಪ್ರತಿಪಾದಿಸಿದ್ದರು. ಈ ಸಂಬಂಧ ವಾದ–ಪ್ರತಿವಾದ ▶ 8ನೇ ಪುಟಕ್ಕೆ



ಏಕಬಳಕೆ ಪ್ಲಾಸ್ಟಿಕ್ ಅತ್ಯಂತ ಹಾನಿಕಾರಕ...!

ಸೈಕಲ್ ಯಾತ್ರೆ ಮೂಲಕ ಮಧ್ಯಪ್ರದೇಶದ ಯುವಕನಿಂದ ದೇಶದಾದ್ಯಂತ ಜಾಗೃತಿ

ಮೈಸೂರು,ಸೆ.12(ಜಿಎ)–ಸೈಕಲ್ ಮೂಲಕ ದೇಶದಾದ್ಯಂತ ಏಕಬಳಕೆಯ ಪ್ಲಾಸ್ಟಿಕ್ ಮುಕ್ತ ಭಾರತ ಸಂದೇಶ ಸಾರುತ್ತಿರುವ ಸೈಕ್ಲಿಸ್ಟ್ ಬ್ರಿಜೇಶ್ ಶರ್ಮಾ, ಈಗ ಸಾಂಸ್ಕೃತಿಕ ನಗರಿ ಮೈಸೂರಿಗೆ ಆಗಮಿಸಿದ್ದು, ತಿಂಗಳ ಕಾಲ ಮೈಸೂರಲ್ಲೇ ಇದ್ದು, ಏಕಬಳಕೆಯ ಪ್ಲಾಸ್ಟಿಕ್ ಬಗ್ಗೆ ಜಾಗೃತಿ ಮೂಡಿಸಲಿದ್ದಾರೆ.

ಸೈಕ್ಲಿಸ್ಟ್ ಬ್ರಿಜೇಶ್ ಶರ್ಮಾ ಮೂಲತಃ ಮಧ್ಯಪ್ರದೇಶದ ಮೊರೆನಾ ನಿವಾಸಿಯಾಗಿದ್ದು, ಕಳೆದ 4 ವರ್ಷಗಳಿಂದ ಸೈಕಲ್ ಮೇಲೆ ದೇಶದಾದ್ಯಂತ ಸಂಚರಿಸುತ್ತಿದ್ದಾರೆ. 916 ದಿನಗಳನ್ನು ಪೂರ್ಣಗೊಳಿಸಿದ್ದಾರೆ.

2019ರ ಸೆ.17ರಂದು ಗುಜರಾತ್‌ನ ಗಾಂಧಿನಗರದಿಂದ ತಮ್ಮ ಸೈಕಲ್ ಯಾತ್ರೆ ಆರಂಭಿಸಿದ್ದ ಬ್ರಿಜೇಶ್ ಶರ್ಮಾ ಅವರು, ಈಗಾಗಲೇ 38,000 ಕಿ.ಮೀ. ಪೂರ್ಣಗೊಳಿಸಿದ್ದು, ಈ ಪಯಣದಲ್ಲಿ 275 ನಗರಗಳು ಮತ್ತು 8500 ಕ್ಕೂ ಹೆಚ್ಚು ಹಳ್ಳಿಗಳನ್ನು ತಲುಪಿದ್ದಾರೆ. ಜೊತೆಗೆ 39 ಲಕ್ಷ ಶಾಲಾ–ಕಾಲೇಜು ವಿದ್ಯಾರ್ಥಿಗಳಲ್ಲಿ ಏಕಬಳಕೆಯ ಪ್ಲಾಸ್ಟಿಕ್‌ನಿಂದ ಉಂಟಾಗುವ ಹಾನಿಯ ಬಗ್ಗೆ ಅರಿವು ಮೂಡಿಸಿದ್ದಾರೆ.

ತಮ್ಮ ಸೈಕಲ್ ಯಾತ್ರೆ ಸಮಯದಲ್ಲಿ ಎದುರಾಗುವ ಬಿಡಾಡಿ ಪ್ರಾಣಿಗಳಿಗೆ ಆಹಾರವನ್ನು ನೀಡುತ್ತಾ ಬಂದಿದ್ದಾರೆ. ಅವರು ಈ ಪ್ರಯಾಣದಲ್ಲಿ ಗುಜರಾತ್, ರಾಜಸ್ಥಾನ, ಹರಿಯಾಣ, ದೆಹಲಿ, ಉತ್ತರಪ್ರದೇಶ, ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಗೋವಾ ನಂತರ ಕರ್ನಾಟಕವು 9ನೇ ರಾಜ್ಯವಾಗಿದೆ. ಬ್ರಿಜೇಶ್ ಅವರ ಸಹೋದರರು ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ತಾವೂ ಸೇನೆ ಸೇರಿ ದೇಶಸೇವೆ ಮಾಡಬೇಕೆಂದು ಬಿಎಸ್‌ಎಫ್ ಆಯ್ಕೆ ಶಿಬಿರದಲ್ಲಿ ಪಾಲ್ಗೊಂಡರೂ ಬಲಗಾಲಿಗೆ ಪೆಟ್ಟು ಬಿದ್ದ ಹಿನ್ನೆಲೆಯಲ್ಲಿ ಅವರಿಗೆ ಸೇನೆಯಲ್ಲಿ ಅವಕಾಶ ದೊರೆಯಲಿಲ್ಲ. ಏಕಬಳಕೆ ಪ್ಲಾಸ್ಟಿಕ್‌ನಿಂದ ಪ್ರಾಣಿ, ಪಕ್ಷಿ ಸಂಕುಲ ಸಂಕಷ್ಟಕ್ಕೆ ತುತ್ತಾಗಿರುವುದರ ಬಗ್ಗೆ ಜಾಗೃತಿ ಮೂಡಿಸಲು ದೇಶದಾದ್ಯಂತ ಸೈಕಲ್ ಯಾತ್ರೆ ಕೈಗೊಂಡಿದ್ದಾರೆ.



> “ಏಕಬಳಕೆ ಪ್ಲಾಸ್ಟಿಕ್‌ನಿಂದ ಪ್ರಾಣಿ, ಪಕ್ಷಿ ಸಂಕುಲ ನಶಿಸುತ್ತಿದೆ. ಇದರ ಬಗ್ಗೆ ದೇಶದಾದ್ಯಂತ ಸೈಕಲ್ ಮೂಲಕ ಜಾಗೃತಿ ಮೂಡಿಸುತ್ತಿದ್ದು, ಈಗ ಮೈಸೂರಿಗೆ ಆಗಮಿಸಿದ್ದೇನೆ. ಮುಂದೆ ಕೇರಳಕ್ಕೆ ತೆರಳಲಿದ್ದೇನೆ. –ಬ್ರಿಜೇಶ್ ಶರ್ಮಾ, ಸೈಕ್ಲಿಸ್ಟ್

ಕರ್ನಾಟಕದಲ್ಲಿ ಸುಮಾರು ಒಂದು ವರ್ಷದಿಂದ ಸಂಚರಿಸುತ್ತಿದ್ದು, ಕಳೆದ 2 ತಿಂಗಳು ಬೆಂಗಳೂರಿನಲ್ಲಿದ್ದು, ಅಲ್ಲಿನ ಶಾಲಾ–ಕಾಲೇಜು, ವಿಶ್ವವಿದ್ಯಾನಿಲಯಗಳಲ್ಲಿ ಏಕಬಳಕೆಯ ಪ್ಲಾಸ್ಟಿಕ್‌ನಿಂದಾಗುವ ಹಾನಿಯ ಕುರಿತು ಜಾಗೃತಿ ಮೂಡಿಸಿದ್ದಾರೆ. ಅವರ ಕಾರ್ಯಗಳನ್ನು ಮೆಚ್ಚಿದ ಕರ್ನಾಟಕದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ತಮ್ಮ ಕಚೇರಿಗೆ ಕರೆಸಿಕೊಂಡು ಅಭಿನಂದಿಸಿದ್ದಾರೆ. ಹಾಗೇ ಬೆಂಗಳೂರು ಪೊಲೀಸ್ ಆಯುಕ್ತ ಬಿ.ದಯಾನಂದ ಮತ್ತು ಸಂಸದ ತೇಜಸ್ವಿ ಸೂರ್ಯ ಸಹ ಇವರ ಕಾರ್ಯವನ್ನು ಶ್ಲಾಘಿಸಿದ್ದಾರೆ.

ಸೆ.7ರಂದು ಮೈಸೂರಿಗೆ ಆಗಮಿಸಿರುವ ಬ್ರಿಜೇಶ್, ದಸರಾ ಮಹೋತ್ಸವ ಮುಗಿಯುವವರೆಗೂ ನಗರದಲ್ಲಿನ ವಿವಿಧ ಶಾಲೆ–ಕಾಲೇಜು ಮತ್ತು ಸಂಘ–ಸಂಸ್ಥೆಗಳ ಜೊತೆಗೂಡಿ ಏಕಬಳಕೆ ಪ್ಲಾಸ್ಟಿಕ್ ಬಗ್ಗೆ ಜಾಗೃತಿ ಮೂಡಿಸಲಿದ್ದು, ಅದರಂತೆ ಇಂದು ಮೈಸೂರು ಮಹಾನಗರ ಪಾಲಿಕೆ ಕಚೇರಿಗೆ ಭೇಟಿ ನೀಡಿ ಆಯುಕ್ತರನ್ನು ಭೇಟಿ ಮಾಡಿ ತಮ್ಮ ಜಾಗೃತಿ ಕಾರ್ಯಗಳ ಬಗ್ಗೆ ತಿಳಿಸಿ, ಅವರಿಂದಲೂ ಸಹಕಾರ ಕೋರಿದರು.

ಬ್ರಿಜೇಶ್, ಮೈಸೂರಿನ ಅಂಬಾ ವಿಲಾಸ ಅರಮನೆಯಲ್ಲಿ ರಾಜವಂಶಸ್ಥರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭೇಟಿ ಮಾಡಿದರು. ಈ ವೇಳೆ ಬ್ರಿಜೇಶ್‌ರ ಜಾಗೃತಿ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಪಡೆದ ಯದುವೀರ್ ತಾವೂ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ. ಹಾಗೇ ದಸರಾ ಮಹೋತ್ಸವದಲ್ಲಿ ಅರಮನೆಯಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಲು ಸೂಚಿಸಿದ್ದು, ಸೂಕ್ತ ವ್ಯವಸ್ಥೆ ಕಲ್ಪಿಸಲು ಅವರ ಆಪ್ತ ಸಹಾಯಕರಿಗೆ ತಿಳಿಸಿದ್ದಾರೆ.

ಸಂಸದ ಪ್ರತಾಪ ಸಿಂಹರಿಗೆ ದೊಡ್ಡ ಗೌಡರ ಆಶೀರ್ವಾದ...



ಮೈಸೂರಿನ ಹೆಬ್ಬಾಳಲ್ಲಿ ಭಾನುವಾರ ನಡೆದ ಆದಿಚುಂಚನಗಿರಿ ಮಹಾ ಸಂಸ್ಥಾನದ ಮೈಸೂರು ಶಾಖೆಯ ಕಟ್ಟಡಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮೈಸೂರು–ಕೊಡಗು ಸಂಸದ ಪ್ರತಾಪ ಸಿಂಹ ಅವರು ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ವರಿಷ್ಠರಾದ ಹೆಚ್.ಡಿ.ದೇವೇಗೌಡರ ಆಶೀರ್ವಾದ ಪಡೆದರು. ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಉಪಸ್ಥಿತರಿದ್ದಾರೆ.

ಆಧ್ಯಾತ್ಮಿಕ, ಧಾರ್ಮಿಕ ಆಚರಣೆಯಿಂದ ಆರೋಗ್ಯ ವೃದ್ಧಿ: ಪೇಜಾವರ ಶ್ರೀ



ಮೈಸೂರು,ಸೆ.12–ಲೋಕ ಕಲ್ಯಾಣಾರ್ಥಕ್ಕಾಗಿ ಶ್ರೀರಾಮತಾರಕ ಹೋಮ ಮತ್ತು ಪವಮಾನ ಹೋಮವನ್ನು, ಪೇಜಾವರ ಶ್ರೀಗಳ ಸಾನ್ನಿಧ್ಯದಲ್ಲಿ ದಸರಾ ವಸ್ತು ಪ್ರದರ್ಶನ ಆವರಣದಲ್ಲಿರುವ ಶ್ರೀವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಸೇವಾ ಭಕ್ತ ಮಂಡಳಿ ವತಿಯಿಂದ ಹಮ್ಮಿಕೊಳ್ಳಲಾಗಿತ್ತು.

ಶ್ರೀ ವೀರಾಂಜನೇಯಸ್ವಾಮಿಗೆ ಪಂಚಾಮೃತ ಅಭಿಷೇಕ, ತುಳಸಿ ಅಲಂಕಾರ, ಹನುಮಾನ್ ಚಾಲೀಸ ಪಾರಾಯಣ, ವಿಶೇಷ ಪೂಜಾ ಕೈಂಕರ್ಯ, ಭಕ್ತರಿಗೆ ಪ್ರಸಾದ ವಿನಿಯೋಗ ನೆರವೇರಿದವು.

ಈ ವೇಳೆ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳವರು ಮಾತನಾಡಿ, ಮೈಸೂರು ಅರಮನೆ ಮುಂಭಾಗ ಇಂದಿಗೂ ಹಳೇ ಮೈಸೂರು ಇತಿಹಾಸದ ಪಾರಂಪರಿಕ ವಾತಾವರಣವಿದೆ. ಹೆಚ್ಚಾಗಿ ಪರಿಸರ ತಾಣದಲ್ಲಿರುವ ದೇವಸ್ಥಾನಗಳನ್ನು ಉಳಿಸಿ, ಆಚರಣೆಗಳನ್ನು ನಡೆಸಿಕೊಂಡು ಹೋಗುವಂತೆ ಆಸ್ತಿಕರು ಮುಂದಾಗಬೇಕು. ಬೆಳಗಿನ ಸಮಯದಲ್ಲಿ ಇಂತಹ ಧಾರ್ಮಿಕ, ಆಧ್ಯಾತ್ಮಿಕ ತಾಣಗಳಲ್ಲಿ ನಿತ್ಯಪೂಜೆ, ಧ್ಯಾನ, ಪ್ರಾರ್ಥನೆ, ಪ್ರದಕ್ಷಿಣೆ, ವ್ಯಾಯಾಮದಿಂದಾಗಿ ಆರೋಗ್ಯ ವೃದ್ಧಿಯಾಗುತ್ತದೆ ಎಂದರು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಕೌಟಿಲ್ಯ ರಘು ಮಾತನಾಡಿ, ದೊಡ್ಡಕೆರೆ ದಡದಲ್ಲಿ 182 ವರ್ಷಗಳ ಹಿಂದೆಯೇ ಧಾರ್ಮಿಕ, ಆಧ್ಯಾತ್ಮಿಕ ಕಾರ್ಯಕ್ರಮಗಳು, ಮದುವೆ, ನಾಮಕರಣ ಶುಭ ಸಮಾರಂಭಗಳು ವೀರಾಂಜನೇಯಸ್ವಾಮಿ ದೇವಸ್ಥಾನದಲ್ಲಿ ನಡೆದುಕೊಂಡು ಬಂದಿವೆ. ಈಗ ಮತ್ತೊಮ್ಮೆ ಪ್ರಾಸೋದ್ಯಮ ಇಲಾಖೆ ಅಂತಹ ಆಚರಣೆಗಳಿಗೆ ಅವಕಾಶ ಕೊಟ್ಟರೆ ಬಡ ಜನರಿಗೆ ಉಪಯೋಗವಾಗುತ್ತದೆ ಎಂದರು.

ವಸ್ತು ಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಜಿ.ಗೌಡ, ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಫನ್ ವರ್ಲ್ಡ್ ಮುಖ್ಯಸ್ಥ ಮಲ್ಲಿಕಾರ್ಜುನ, ಅಂಬಾರಿ ಪುರೋಹಿತ ಪ್ರಹ್ಲಾದರಾವ್, ಮುಡಾ ಮಾಜಿ ಸದಸ್ಯೆ ಲಕ್ಷ್ಮಿದೇವಿ, ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜು ಬಸಪ್ಪ, ಮಂಚೇಗೌಡನ ಕೊಪ್ಪಲು ರವಿ, ಪಳನಿ ರಾಜೇಶ್, ವಿನಯ್ ಕಣಗಾಲ್, ಸುಚೀಂದ್ರ ಭೈರತಿ ಲಿಂಗರಾಜು, ಫಣೀಶ್, ಅರ್ಚಕರ ಸಂಘದ ಅಧ್ಯಕ್ಷ ಕೃಷ್ಣ ಮೂರ್ತಿ, ವಿಘ್ನೇಶ್ವರಭಟ್, ಶ್ರೀನಿವಾಸ್, ರಂಗನಾಥ್, ವಿಜಯ್ ಕುಮಾರ್, ಪ್ರಶಾಂತ್ ಸದಾಶಿವ ಇದ್ದರು.

ಮೈಸೂರಿನ ಮೇಟಗಳ್ಳಿ ಬಳಿ ರಿಂಗ್ ರೋಡ್‌ಗೆ ಹೊಂದಿಕೊಂಡಂತಿರುವ
20 ಕೋಟಿ ಮೌಲ್ಯದ ಸರ್ಕಾರಿ ಭೂಮಿ ಒತ್ತುವರಿ ತೆರವು

ಮೈಸೂರು,ಸೆ.12(ಆರ್‌ಕೆ)– ಮೈಸೂರಿನ ಮೇಟಗಳ್ಳಿ ಬಳಿ ರಿಂಗ್ ರೋಡ್‌ಗೆ ಹೊಂದಿಕೊಂಡಂತಿರುವ ಸುಮಾರು 20 ಕೋಟಿ ರೂ. ಬೆಲೆಬಾಳುವ ಸರ್ಕಾರಿ ಭೂಮಿ ಒತ್ತುವರಿಯನ್ನು ಎಸಿ, ತಹಸೀಲ್ದಾರ್ ನೇತೃತ್ವದಲ್ಲಿ ಅಧಿಕಾರಿಗಳು ಇಂದು ತೆರವುಗೊಳಿಸಿ ತಮ್ಮ ವಶಕ್ಕೆ ಪಡೆದಿದ್ದಾರೆ.

ಮೈಸೂರು ತಾಲೂಕು ಕಸಬಾ ಹೋಬಳಿ ಮೇಟಗಳ್ಳಿ ಗ್ರಾಮದ ಸರ್ವೆ ನಂಬರ್ 62/3ರಲ್ಲಿ (ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಎದುರು) ರಿಂಗ್ ರೋಡ್‌ಗೆ ಹೊಂದಿಕೊಂಡಂತಿರುವ 1.17 ಎಕರೆ ಯುಎಲ್‌ಎ (ಅರ್ಬನ್ ಸೀಲಿಂಗ್ ಆ್ಯಕ್ಟ್) ಅಡಿ ಭೂಸ್ವಾಧೀನವಾಗಿರುವ ಜಮೀನಿನಲ್ಲಿ ಮೇಟಗಳ್ಳಿ ಗ್ರಾಮದ ನಿವಾಸಿಗಳಾದ ಟಿ.ಪಾಪೇಗೌಡ, ಟಿ.ಯಾಲಕ್ಕಿಗೌಡ ಅವರ ಮಕ್ಕಳಾದ ಸಂತೋಷ್ ಮತ್ತು ಇತರರು ಅಕ್ರಮವಾಗಿ ಎಂ ಸ್ಯಾಂಡ್, ಜಲ್ಲಿ ಕಲ್ಲು ಹಾಗೂ ಇತರ ಕಟ್ಟಡ ಸಾಮಗ್ರಿಗಳನ್ನು ಶೇಖರಣೆ ಮಾಡಿ ವ್ಯಾಪಾರ ಮಾಡುತ್ತಿದ್ದಾರೆ ಎಂದು ಕಸಬಾ ಹೋಬಳಿ ರಾಜಸ್ವ ನಿರೀಕ್ಷಕರು ನೀಡಿದ ವರದಿ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ನಿರ್ದೇಶನದಂತೆ ಮೈಸೂರು ಉಪವಿಭಾಗಾಧಿಕಾರಿ ಕೆ.ಆರ್. ರಕ್ಷಿತ್, ತಹಸೀಲ್ದಾರ್ ಬಿ.ಎನ್. ಹರೀಶ್ ಅವರು ಮಂಗಳವಾರ ಮಧ್ಯಾಹ್ನ 12ರಿಂದ 2 ಗಂಟೆವರೆಗೆ ಕಾರ್ಯಾಚರಣೆ ನಡೆಸಿ ಒತ್ತುವರಿ ತೆರವುಗೊಳಿಸಿದರು.



ಯುಎಲ್‌ಐ ಅಡಿ ಭೂಸ್ವಾಧೀನಪಡಿಸಿದ್ದ ನಗರ ಹೆಚ್ಚುವರಿ ಆಸ್ತಿಯಲ್ಲಿ ಅತಿಕ್ರಮಣ ಮಾಡಿ ಹಲವು ವರ್ಷಗಳಿಂದ ಕಟ್ಟಡ ಸಾಮಗ್ರಿ ಇರಿಸಿಕೊಂಡು ವ್ಯಾಪಾರ ಮಾಡುತ್ತಿರುವ ಬಗ್ಗೆ ಸಾರ್ವಜನಿಕರು ದೂರು ನೀಡುತ್ತಿದ್ದರಲ್ಲದೆ, ಕಂದಾಯ ಇಲಾಖೆ ಅಧಿಕಾರಿಗಳು ಹಲವು ಬಾರಿ ತೆರವುಗೊಳಿಸಲು ತಿಳಿವಳಿಕೆ ನೀಡಿದ್ದರೂ ಸ್ಪಂದಿಸದ ಕಾರಣ, ಮೇಟಗಳ್ಳಿ ಠಾಣೆ ಇನ್ಸ್‌ಪೆಕ್ಟರ್ ದಿವಾಕರ್ ನೇತೃತ್ವದ ಬಂದೋಬಸ್ತ್‌ನಲ್ಲಿ ಎಸಿ, ತಹಸೀಲ್ದಾರ್ ಇಂದು ಜೆಸಿಬಿ ಮೂಲಕ ಕಾರ್ಯಾಚರಣೆ ನಡೆಸಿ ಒತ್ತುವರಿಯಾಗಿದ್ದ ಕೋಟ್ಯಾಂತರ ರೂ. ಬೆಲೆಬಾಳುವ ಜಾಗವನ್ನು ವಶಕ್ಕೆ ಪಡೆದರು.

ರೆವಿನ್ಯೂ ಇನ್ಸ್‌ಪೆಕ್ಟರ್ ರಾಘವೇಂದ್ರ ನಾಯಕ್, ವಿಲೇಜ್ ಅಕೌಂಟೆಂಟ್ ಮಹೇಶ್, ನಗರ ಭೂಮಾಪಕ ಸುರೇಶ್, ಗ್ರಾಮ ಆಡಳಿತಾಧಿಕಾರಿಗಳಾದ ನಾಗೇಶ್ ಕುಮಾರ್, ಗಿರೀಶ್, ಮೈಸೂರು ಮಹಾನಗರ ಪಾಲಿಕೆ ವಲಯ ಕಚೇರಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಒತ್ತುವರಿ ತೆರವು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಮೇಟಗಳ್ಳಿ, ಬೆಲವತ್ತ, ಲೋಕನಾಯಕನಗರ, ಹೆಬ್ಬಾಳು ಸುತ್ತಮುತ್ತಲಿನ ಗ್ರಾಮಗಳಿಗೆ ಸೇರಿದ ಹಲವು ಸರ್ವೆ ನಂಬರ್‌ಗಳ ನೂರಾರು ಎಕರೆ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಲಾಗಿದ್ದು, ಅವುಗಳ ದಾಖಲಾತಿ ಪರಿಶೀಲಿಸಿ ವಾಸ್ತವಾಂಶದ ಬಗ್ಗೆ ದೃಢಪಡಿಸಿಕೊಂಡು ಕಾನೂನು ರೀತ್ಯಾ ಒತ್ತುವರಿ ತೆರವುಗೊಳಿಸುವ ಮೂಲಕ ಸರ್ಕಾರಿ ಆಸ್ತಿ ಸಂರಕ್ಷಿಸುವ ಜೊತೆಗೆ ಅತಿಕ್ರಮಣ ಮಾಡಿದವರ ವಿರುದ್ಧ ಕ್ರಿಮಿನಲ್ ಕೇಸು ದಾಖಲಿಸುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಕಂದಾಯ ಇಲಾಖೆ ಅಧೀನಾಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ್ದಾರೆ.

ಸೆ.14, 16 ವಿದ್ಯುತ್ ಜನಸಂಪರ್ಕ ಸಭೆ

ಮೈಸೂರು,ಸೆ.12– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವತಿಯಿಂದ ಸೆ.14ರಂದು ಬೆಳಗ್ಗೆ 11 ಗಂಟೆಗೆ ನ.ರಾ ಮೊಹಲ್ಲಾ ಕಚೇರಿಯಲ್ಲಿ ಮತ್ತು ಮಧ್ಯಾಹ್ನ 3 ಗಂಟೆಗೆ ಜ್ಯೋತಿನಗರ ಹಾಗೂ ಸೆ.16ರಂದು ಬೆಳಗ್ಗೆ 11 ಗಂಟೆಗೆ ವರುಣ ಉಪವಿಭಾಗ ಕಚೇರಿಗಳಲ್ಲಿ ಜನಸಂಪರ್ಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಗ್ರಾಹಕರು ವಿದ್ಯುತ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳೇನಾದರೂ ಇದ್ದಲ್ಲಿ ಸಂಬಂಧಿತ ಉಪವಿಭಾಗಗಳಲ್ಲಿ ನಡೆಯುವ ಜನಸಂಪರ್ಕ ಸಭೆಯಲ್ಲಿ ಲಿಖಿತ ಅರ್ಜಿ ಸಲ್ಲಿಸಿ ತಮ್ಮ ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಮೈಸೂರು,ಸೆ12–2023–24ನೇ ಸಾಲಿನ ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದ್ದು, 18 ವರ್ಷದೊಳಗಿನ ಮಕ್ಕಳು ತಮ್ಮ ಪ್ರಾಣದ ಹಂಗನ್ನು ಮರೆತು ಬೇರೆಯವರ ಪ್ರಾಣವನ್ನು ರಕ್ಷಣೆ ಮಾಡಿರುವರು ಹಾಗೂ ಕ್ರೀಡೆ, ಸಮಾಜ ಸೇವೆ, ವಿಜ್ಞಾನ, ತಂತ್ರಜ್ಞಾನ, ಪರಿಸರ, ಕಲೆ, ಸಾಂಸ್ಕೃತಿಕ ಹಾಗೂ ಯಾವುದೇ ಕ್ಷೇತ್ರದಲ್ಲಿ ನಾವೀನ್ಯತೆ ಹೊಂದಿರುವ ಅತ್ಯುತಮ ಸಾಧನೆ ಮಾಡಿರುವ ಮಕ್ಕಳು ಪ್ರಧಾನಮಂತ್ರಿ ಬಾಲ ಪುರಸ್ಕಾರಕ್ಕೆ https://award.gov.in ಮೂಲಕ ಅರ್ಜಿ ಸಲ್ಲಿಸಬಹುದು.

ಟ್ಯೂಷನ್‌ಗೆಂದು ಮನೆಯಿಂದ ಹೊರಬಂದ ಬೆಳಗಾವಿಯ ಬಾಲಕ ಮೈಸೂರಲ್ಲಿ ರಕ್ಷಣೆ

ಆಟೋ ಚಾಲಕ ಹರೀಶ್‌ಕುಮಾರ್ ನೆರವಿನಿಂದ ಸುರಕ್ಷಿತವಾಗಿ ಪೋಷಕರ ಸೇರಿದ ಬಾಲಕ

ಮೈಸೂರು,ಸೆ.12(ಎಸ್‌ಪಿಎನ್)– ಎರಡು ದಿನಗಳ ಹಿಂದೆ ಟ್ಯೂಷನ್‌ಗಾಗಿ ಮನೆ ಬಿಟ್ಟಿದ್ದ ಬೆಳಗಾವಿಯ 14 ವರ್ಷದ ಬಾಲಕನನ್ನು ಮೈಸೂರು ನಗರ ಬಸ್ ನಿಲ್ದಾಣದಲ್ಲಿ ಆಟೋ ಚಾಲಕರೊಬ್ಬರು ರಕ್ಷಿಸಿ ದೇವರಾಜ ಪೊಲೀಸರಿಗೆ ಒಪ್ಪಿಸಿದ್ದಾರೆ.

ಬೆಳಗಾವಿಯ ಶಿವರಾಜ್ ಮಹಾಲಿಂಗ ಮೇಲಮಟ್ಟಿ(14) ರಕ್ಷಣೆಗೊಳಗಾದ ಬಾಲಕ. ಈತನನ್ನು ಸುರಕ್ಷಿತವಾಗಿ ಪೋಷಕರ ಮಡಿಲು ಸೇರಿಸುವಲ್ಲಿ ದೇವರಾಜ ಪೊಲೀಸರು ಮತ್ತು ಆಟೋ ಚಾಲಕ ಹರೀಶ್ ಕುಮಾರ್ ಯಶಸ್ವಿಯಾಗಿದ್ದಾರೆ.

ಎರಡು ದಿನಗಳ ಹಿಂದೆ ಟ್ಯೂಷನ್‌ಗಾಗಿ ಮನೆ ಬಿಟ್ಟ ಬಾಲಕ ಶಿವರಾಜ್, ಆಕಸ್ಮಿಕವಾಗಿ ಬೆಳಗಾವಿ ರೈಲ್ವೆ ನಿಲ್ದಾಣಕ್ಕೆ ಆಗಮಿಸಿ, ಮೈಸೂರಿನ ಟ್ರೈನ್ ಹತ್ತಿ ಮೈಸೂರಿಗೆ ಬಂದಿಳಿದಿದ್ದಾನೆ. ನಂತರ ಮೈಸೂರು ಬಸ್ ಗ್ರಾಮಾಂತರ ಬಸ್ ನಿಲ್ದಾಣದ ಬಳಿ ಬಂದು ನಿಂತಿದ್ದಾನೆ. ಹೊಸ ಸ್ಥಳವಾಗಿದ್ದರಿಂದ ಶಿವರಾಜ್‌ಗೆ, ಎಲ್ಲಿಗೆ ತೆರಳುವುದು ಎಂಬುದು ಗೊತ್ತಾಗದೇ ಅಳುತ್ತ ನಿಂತಿದ್ದಾಗ, ಸಮೀಪದಲ್ಲಿದ್ದ ಆಟೋ ಚಾಲಕ ಹರೀಶ್‌ಕುಮಾರ್, ಆತನ ನೆರವಿಗೆ ಬಂದಿದ್ದಾರೆ.

ಅಳುತ್ತಿದ್ದ ನಿಂತಿದ್ದ ಶಿವರಾಜ್‌ನನ್ನು, ಹರೀಶ್ ಅವರು, ವಿಚಾರಿಸಿ. ದೇವರಾಜ ಪೊಲೀಸ್ ಠಾಣೆಗೆ ಕರೆತಂದಿದ್ದಾರೆ. ನಂತರ ದೇವರಾಜ ಪೊಲೀಸರು, ಶಿವರಾಜ್‌ನನ್ನು ವಿಚಾರಣೆ ನಡೆಸಿದಾಗ ತನ್ನ ತಂದೆ ಹೆಸರು ಮಹಾಲಿಂಗ ಮೇಲಮಟ್ಟಿ, ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಯವಕನಮರಡಿ ಎಂದು ವಿಳಾಸವನ್ನು ಹೇಳಿದ್ದಾನೆ. ತಕ್ಷಣವೇ ದೇವರಾಜ ಪೊಲೀಸರು, ಬೆಳಗಾವಿ ಪೊಲೀಸರನ್ನು ಸಂಪರ್ಕಿಸಿ, ಶಿವರಾಜ್ ನೀಡಿದ್ದ ಮೊಬೈಲ್ ಸಂಖ್ಯೆಯನ್ನು ನೀಡಿದ್ದಾರೆ. ನಂತರ ಬೆಳಗಾವಿ ಪೊಲೀಸರು ಹುಡುಗನ ಮಾವ ನೀಲಕಂಠ ಪೋಡಿಯನ್ನು ಸಂಪರ್ಕಿಸಿ, ಶಿವರಾಜ್ ತಪ್ಪಿಸಿಕೊಂಡು ಮೈಸೂರಿನಲ್ಲಿರುವ ವಿಷಯ ತಿಳಿಸಿದ್ದಾರೆ. ತಕ್ಷಣವೇ ಮೈಸೂರಿನ ದೇವರಾಜ ಪೊಲೀಸರನ್ನು ಸಂಪರ್ಕಿಸುವಂತೆ ಮಾಹಿತಿ ನೀಡಿದ್ದಾರೆ. ಅದರಂತೆ ನೀಲಕಂಠ ಅವರು, ದೇವರಾಜ ಪೊಲೀಸರನ್ನು ಸಂಪರ್ಕಿಸಿ, ಮೈಸೂರಿಗೆ ಬಂದು ಬಾಲಕ ಶಿವರಾಜ್‌ನನ್ನು ಬೆಳಗಾವಿಗೆ ಕರೆಕೊಂಡು ಹೋಗಿದ್ದಾರೆ.

ಮಗ ತಪ್ಪಿಸಿಕೊಂಡಿದ್ದಕ್ಕೆ ಪರಿತಪ್ಪಿಸುತ್ತಿದ್ದ ಶಿವರಾಜ್ ಪೋಷಕರು ನೆಮ್ಮದಿಯ ನಿಟ್ಟುಸಿರು ಬಿಟಿದ್ದಾರೆ. ಆಟೋ ಚಾಲಕ ಹರೀಶ್‌ಕುಮಾರ್ ಅವರ, ಸಮಯ ಪ್ರಜ್ಞೆಗೆ ದೇವರಾಜ ಠಾಣೆ ಇನ್ಸ್‌ಪೆಕ್ಟರ್ ಟಿ.ಬಿ.ಶಿವಕುಮಾರ್ ಹಾಗೂ ಪಿಎಸ್‌ಐ ಜೈಕೀರ್ತಿ ಅಭಿನಂದಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಬಹಿರಂಗ ಹೇಳಿಕೆ: ಬಿ.ಕೆ. ಹರಿಪ್ರಸಾದ್‌ಗೆ ಎಐಸಿಸಿ ಶೋಕಾಸ್ ನೋಟಿಸ್

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಬಹಿರಂಗವಾಗಿ ಹೇಳಿಕೆ ನೀಡಿದ್ದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಹಿರಿಯ ನಾಯಕರಾಗಿರುವ ವಿಧಾನಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರಿಗೆ ಎಐಸಿಸಿ ಶಿಸ್ತುಸಮಿತಿ ಶೋಕಾಸ್ ನೋಟಿಸ್ ನೀಡಿದೆ. ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿ ಖಾಯಂ ಸದಸ್ಯರೂ ಆಗಿರುವ ಬಿ.ಕೆ. ಹರಿಪ್ರಸಾದ್ ಪಕ್ಷದ ಶಿಸ್ತು ಉಲ್ಲಂಘಿಸಿದ್ದಾರೆ ಎಂಬ ದೂರನ್ನು ಸ್ವೀಕರಿಸಿದ ಕಾಂಗ್ರೆಸ್ ಸಮಿತಿ ಅಧ್ಯಕ್ಷರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಾರ್ವಜನಿಕವಾಗಿ ಟೀಕಿಸಿರುವುದರ ಬಗ್ಗೆ 10 ದಿನಗಳ ಒಳಗಾಗಿ ಉತ್ತರ ನೀಡುವಂತೆ ಸೂಚಿಸಲಾಗಿದೆ.



ಕಳೆದ ಶನಿವಾರ ಅರಮನೆ ಮೈದಾನದಲ್ಲಿ ಈಡಿಗ, ಬಿಲ್ಲವ, ನಾಮಧಾರಿ, ದೀವರು ಮತ್ತು ಅತಿ ಹಿಂದುಳಿದ ವರ್ಗಗಳ ಬೃಹತ್ ಸಮಾವೇಶದಲ್ಲಿ ಮಾತನಾಡಿದ ಬಿ.ಕೆ. ಹರಿಪ್ರಸಾದ್, ದೇವರಾಜ ಅರಸು ಕಾರಿನಲ್ಲಿ ಕುಳಿತರೆ ದೇವರಾಜ ಅರಸು ಆಗಲ್ಲ. ಹಿಂದಿನ ಯಾವ ಮುಖ್ಯಮಂತ್ರಿಗಳೂ ಜಾತಿ ರಾಜಕಾರಣ ಮಾಡಲಿಲ್ಲ. ಕಾಗೋಡು ತಿಮ್ಮಪ್ಪ, ಬಂಗಾರಪ್ಪ ಜಾತಿ ರಾಜಕಾರಣ ಮಾಡಲಿಲ್ಲ. ಪಂಚೆ ಹಾಕಿಕೊಂಡು ವಾಚ್ ಕಟ್ಟಿಕೊಂಡು, ಖಾಕಿ ಚಡ್ಡಿ ಹಾಕೊಂಡು, ಸಮಾಜವಾದಿ ಅಂತಾ ಹೇಳಿದರೆ ಆಗುವುದಿಲ್ಲ, ದೇವರಾಜ ಅರಸು ಕಾರಿನಲ್ಲಿ ಕುಳಿತರೆ ದೇವರಾಜ ಅರಸು ಆಗಲ್ಲ. ದೇವರಾಜ ಅರಸು ಚಿಂತನೆ ಇರಬೇಕು ಎಂದು ಸಿಎಂ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದ್ದರು.

ಪಕ್ಷಕ್ಕೆ ಡ್ಯಾಮೇಜ್ ಆಗುವ ಹೇಳಿಕೆ ಹಿನ್ನೆಲೆಯಲ್ಲಿ ಬಿ.ಕೆ. ಹರಿಪ್ರಸಾದ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಮಾಲೂರಿನ ಶಾಸಕ ಕೆ.ವೈ. ನಂಜೇಗೌಡ ಮತ್ತಿತರ ಸಿದ್ದು ಬಣದ ಶಾಸಕರು ಕೆಪಿಸಿಸಿ ಹಾಗೂ ಎಐಸಿಸಿ ಶಿಸ್ತು ಸಮಿತಿಯನ್ನು ಒತ್ತಾಯಿಸಿದ್ದರು. ಇದರ ಬೆನ್ನಲ್ಲಿಯೇ ಹರಿಪ್ರಸಾದ್‌ಗೆ ನೋಟಿಸ್ ಜಾರಿ ಮಾಡಲಾಗಿದೆ.

ಅರ್ಹತೆ ಇದ್ದರೂ ಪರಮೇಶ್ವರ್ ಅವರನ್ನು ಸಿಎಂ ಮಾಡಲಿಲ್ಲ. ಡಾ. ಜಿ. ಪರಮೇಶ್ವರ್ ಅವರನ್ನು ಸಿಎಂ ಇರಲಿ ಡಿಸಿಎಂ ಸ್ಥಾನದಿಂದಲೂ ಡಿ ಪ್ರಮೋಟ್ ಮಾಡಲಾಯಿತು. ಅವರಿಗೆ ಸಿಎಂ ಆಗಲು ಎಲ್ಲಾ ಅರ್ಹತೆಗಳಿದ್ದವು. ಆದರೆ ಅವರನ್ನು ಮಾಡಲಿಲ್ಲ ಈಗಲೂ ಸರ್ಕಾರದಲ್ಲಿ ದಲಿತರನ್ನು ಉಪಮುಖ್ಯಮಂತ್ರಿ ಮಾಡಬಹುದಿತ್ತು. ಸತೀಶ್ ಜಾರಕಿಹೊಳಿಯನ್ನು ಮಾಡಬಹುದಿತ್ತು, ಆದರೆ ಮಾಡಿಲ್ಲ ಎಂದು ಬಿ.ಕೆ. ಹರಿಪ್ರಸಾದ್ ಸಿಎಂ ಸಿದ್ದರಾಮಯ್ಯ ವಿರುದ್ಧ ಗುಡುಗಿದ್ದರು.

ನೀರಿನ ಮಟ್ಟ

ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2284.00 ಅಡಿ	ಗರಿಷ್ಠ ಮಟ್ಟ 2859.00 ಅಡಿ
ಇಂದಿನ ಮಟ್ಟ 97.90 ಅಡಿ	ಇಂದಿನ ಮಟ್ಟ 2276.00 ಅಡಿ	ಇಂದಿನ ಮಟ್ಟ 2858.46 ಅಡಿ
ಹಿಂದಿನ ವರ್ಷದ ಮಟ್ಟ 124.66 ಅಡಿ	ಹಿಂದಿನ ವರ್ಷದ ಮಟ್ಟ 2284.00 ಅಡಿ	ಹಿಂದಿನ ವರ್ಷದ ಮಟ್ಟ 2857.58 ಅಡಿ
ನಿನ್ನೆಯ ಮಟ್ಟ 98.02 ಅಡಿ	ನಿನ್ನೆಯ ಮಟ್ಟ 2275.82 ಅಡಿ	ನಿನ್ನೆಯ ಮಟ್ಟ 2858.09 ಅಡಿ

ನಿಧನ

ರೊ. ಎನ್.ಡಿ.ನಾಗರಾಜೇ ಅರಸ್



ಮೈಸೂರು,ಸೆ.12–ರೋಟರಿ ಮೈಸೂರು ಸೌತ್ ಈಸ್ಟ್ ಚಾಪ್ಟರ್ ಮೆಂಬರ್ ಮತ್ತು ರೋಟರಿ ಮೈಸೂರು ಸೌತ್ ಈಸ್ಟ್ ಚಾರಿಟೆಬಲ್ ಟ್ರಸ್ಟ್‌ನ ಟ್ರಸ್ಟಿ ರೋ.ಎನ್.ಡಿ.ನಾಗರಾಜೇ ಅರಸ್ (82) ಭಾನುವಾರ (ಸೆ.10) ನಿಧನರಾದರು. ಮೈಸೂರಿನ ಜಯಲಕ್ಷ್ಮಿಪುರಂ ನಿವಾಸಿಯಾದ ಇವರು, ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಬುಧವಾರ(ಸೆ.13)ದಂದು ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಎನ್.ಸುಮಾ



ವಾರ್ತಾ ಇಲಾಖೆ 'ಡಿ' ಗ್ರೂಪ್ ನೌಕರರೂ ಆದ ಕುವೆಂಪುನಗರದ ನಿವಾಸಿ ಹೆಚ್.ಎನ್.ಸುಮಾ(58) ಸೋಮವಾರ ಕೆ.ಆರ್.ಆಸ್ಪತ್ರೆಯಲ್ಲಿ ನಿಧನರಾದರು. ಭಾನುವಾರ ಸ್ವಗೃಹದಲ್ಲಿ ಕಾಲುಜಾರಿ ಬಿದ್ದು, ಗಾಯಗೊಂಡಿದ್ದರು. ಚಿಕಿತ್ಸೆಗಾಗಿ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಅಂದೇ ನಿಧನರಾದರು. ಮಂಗಳವಾರ ಮೃತರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.9.2023 ಬುಧವಾರ, ಮಳೆ ನಕ್ಷತ್ರ: ಪುಬ್ಬ 31.08.2023ರಿಂದ 13.09.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ,
ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಮಖ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಷುಯಲ್ ಆರ್ಟ್ :** ಎಂ.ಎಲ್. ಪವನ್‌ಕುಮಾರ್ ಅವರಿಂದ ಸ್ಥಿರ ಚಿತ್ರಣ ಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 10ರಿಂದ.
- **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು, ಗ್ರಂಥಾಲಯ ಮತ್ತು ಕನ್ನಡ ವಿಭಾಗ:** ಪೂರ್ಣಚಂದ್ರ ತೇಜಸ್ವಿ ನೆನಪು, ದಿವ್ಯ ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಮಹಾಸ್ವಾಮಿಗಳು, ಸ್ಥಳ: ಕಾಲೇಜಿನ ಬಿ.ಎ. ತರಗತಿ ಕೊಠಡಿ, ಬೆಳಗ್ಗೆ 10 ಗಂಟೆಗೆ.
- **ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆ, ಮೈಸೂರು:** ಟಿ.ಎಸ್.ಸುಬ್ಬಣ್ಣನವರ 32ನೇ ವರ್ಷದ ಸಂಸ್ಮರಣೆ, ಅಧ್ಯಕ್ಷತೆ: ಮಾಜಿ ಶಾಸಕರೂ, ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಸಿ.ಎಸ್.ನಿರಂಜನ್ ಕುಮಾರ್, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಸ್ಥಳ: ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆಯ ಆವರಣ, ವಿದ್ಯಾರಣ್ಯಪುರಂ. ಬೆಳಗ್ಗೆ 10 ಗಂಟೆಗೆ.
- **ಯುವ ಭಾರತ್ ಸಂಘಟನೆ:** ಸ್ವಾತಂತ್ರ್ಯ ಹೋರಾಟಗಾರ ಹುತಾತ್ಮ ರಾಮಸ್ವಾಮಿ ನೆನಪು ಕಾರ್ಯಕ್ರಮ, ಮುಖ್ಯ ಅತಿಥಿಗಳು: ಶಾಸಕರಾದ ಟಿ.ಎಸ್.ಶ್ರೀವತ್ಸ, ಹರೀಶ್‌ಗೌಡ, ಮೇಯರ್ ಶಿವಕುಮಾರ್, ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಸ್ಥಳ: ರಾಮಸ್ವಾಮಿ ವೃತ್ತ, ಬೆಳಗ್ಗೆ 10.30ಕ್ಕೆ.
- **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾ ರಥೋತ್ಸವ ಹಾಗೂ ಶ್ರಾವಣ ಮಾಸದಲ್ಲಿ ನಡೆಯುವ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆಆರ್ ಮೊಹಲ್ಲಾ, ಬೆಳಗ್ಗೆಯಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ ಮತ್ತು ಮಹಿಳೆಯರಲ್ಲಿ ಋತುಬಂಧನ ಸಮಸ್ಯೆಗಳು ಕುರಿತು ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆಯಿಂದ.
- **ಮೈಸೂರು ಶರಣ ಮಂಡಲಿ:** ಜಗದ್ಗುರು ಡಾ.ಶಿವರಾತ್ರಿ ರಾಜೇಂದ್ರ ಶ್ರೀಗಳ 108ನೇ ಜಯಂತಿ ಮತ್ತು ರಾಜೇಂದ್ರ ಶ್ರೀಗಳ ಸೇವಾ ಪ್ರಶಸ್ತಿ ಪ್ರದಾನ, ಪುಷ್ಪಾರ್ಚನೆ: ಶಾಸಕ ಟಿ.ಎಸ್.ಶ್ರೀವತ್ಸ, ಎಪಿಎನ್ ಪ್ರಾಪರ್ಟೀಸ್ ಮ್ಯಾನೇಜಿಂಗ್ ಪಾರ್ಟ್‌ನರ್ ಎ.ಪಿ.ನಾಗೇಶ್, ಶ್ರೀಗಳ ಕುರಿತು: ಮಂಗಳೂರು ವಿವಿ ಸಿಂಡಿಕೇಟ್ ಸದಸ್ಯ ಪ್ರೊ.ಕೆ.ಸಿ.ಮಹದೇವ್, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘ, ತ್ಯಾಗರಾಜ ರಸ್ತೆ, ಬೆಳಗ್ಗೆ 11 ಗಂಟೆಗೆ.
- **ಶ್ರೀ ಉತ್ತರಾದಿ ಮಠ, ರೋಗ ಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀ ಪಾದಂಗಳವರ ಆಜ್ಞೆ ಹಾಗೂ ಅನುಗ್ರಹದಿಂದ ಸಪ್ತರಾತ್ರೋತ್ಸವ, ಬೆಳಗ್ಗೆ ಶ್ರೀ ಧನ್ವಂತರಿ ದೇವರಿಗೆ ತುಳಸಿ ಅಲಂಕಾರ, ಸಂಜೆ ಗರುಡ ವಾಹನೋತ್ಸವ, ಸ್ಥಳ: ಉತ್ತರಾದಿ ಮಠ, ಸಂಜೆ 6ರಿಂದ.
- **ಶ್ರೀ ಸುತ್ತೂರು ಮಠ (ಮೈಸೂರು):** ಶ್ರಾವಣ ಮಾಸ ಪೂಜಾನುಷ್ಠಾನ–ಪ್ರವಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಅವರಿಂದ ಲಕ್ಕಣ್ಣ ದಮಡೇಶ ವಿರಚಿತ ಶಿವತತ್ವ ಚಿಂತಾಮಣಿ ಕುರಿತು ಪ್ರವಚನ, ವಿದ್ವಾನ್ ಕೃ.ರಾಮಚಂದ್ರ ಅವರಿಂದ ವಾಚನ, ಸ್ಥಳ: ಮಠದ ಆವರಣ, ಸಂಜೆ 6.30ಕ್ಕೆ.
- **ಬಸವ ಕೇಂದ್ರ:** ಮನೆ ಮನೆಗೆ ಚಿಂತನ, ನೇತೃತ್ವ: ಚಿತ್ರದುರ್ಗ ಶ್ರೀ ಮುರುಘಾಮಠದ ಶ್ರೀ ಬಸವಪ್ರಭು ಸ್ವಾಮಿಗಳು, ಸಾನ್ನಿಧ್ಯ: ಶ್ರೀ ಹೊಸಮಠ ಮಹಾಸಂಸ್ಥಾನದ ಶ್ರೀ ಚಿದಾನಂದ ಸ್ವಾಮೀಜಿ, ಸಮ್ಮುಖ: ರಾವಂದೂರು ಶ್ರೀ ಮುರುಘಾ ಮಠದ ಶ್ರೀ ಮೋಕ್ಷಪತಿ ಸ್ವಾಮೀಜಿ, ಚಿದರಹಳ್ಳಿ ಶ್ರೀ ಸಿದ್ದರಹಳ್ಳಿ ಪಾರಮಾರ್ಥಗವಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಮುಖ್ಯ ಅತಿಥಿಗಳು: ಶರಣ ಮಹದೇವಪ್ಪ, ವಿಷಯ ಮಂಡನೆ: ಬಸವ ಕೇಂದ್ರದ ಶ್ರೀ ಬಸವಯೋಗಿ ಪ್ರಭುಸ್ವಾಮೀಜಿ, ಕು.ಚೂಡಾಮಣಿ ಅವರಿಂದ ವಚನ ಗಾಯನ, ಸ್ಥಳ: ಬಸವ ಕೇಂದ್ರ, ಶ್ರೀ ಮುರುಘರಾಜೇಂದ್ರ ಮಹಾಲಿಂಗೇಶ್ವರ ಮಠ, ಸಂಜೆ 6.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಜಿ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ–ಡಿ.ಶ್ರೀಹರಿ, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಶ್ರೀಧರ ಹೆಗಡೆ ಭದ್ರನ್, 7.15 ಭಾವಗೀತೆಗಳು–ಮೈಸೂರು ಅನಂತಸ್ವಾಮಿ, ಶಿವಮೊಗ್ಗ ಸುಬ್ಬಣ್ಣ, ಹೆಚ್.ಕೆ.ನಾರಾಯಣ, 9.00 ಮನೋನಂದನ–ಪ್ರೇರಣಾ ಆಸ್ಪತ್ರೆ ಮತ್ತು ಪ್ರೇರಣಾ ಫರ್ಟಿಲಿಟಿ–ಪ್ರಾಯೋಜಿತ ಕಾರ್ಯಕ್ರಮ, ವಿಷಯ–ಅತಿರೇಕದ ನಿರ್ಧಾರ ಆತ್ಮಹತ್ಯೆ ತಡೆಗಟ್ಟಲು ತೆಗೆದುಕೊಳ್ಳಬೇಕಾದ ನಿರ್ಣಯಗಳು ಮತ್ತು ಕ್ರಮಗಳು, ಭಾಗವಹಿಸುವ ತಜ್ಞರು–ಡಾ.ಅಭಿಜಿತ್, 10.00 ಹಿಂದೂಸ್ಥಾನಿ ಸಂಗೀತ, ನಿಖಿಲ್ ಬ್ಯಾನರ್ಜಿ–ಸಿತಾರ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆಗಳು–ಕೆ.ಆರ್.ರಾಘವೇಂದ್ರ ಆಚಾರ್ಯ, ವೃಂದಗಾನ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ. ಮೃದಂಗ ಹಾಗೂ ಮದ್ದಳೆಯ ವ್ಯತ್ಯಾಸ, ಮದ್ದಳೆಯ ಇತಿಹಾಸ ಹಾಗೂ ತಯಾರಿಕೆಯ ಬಗ್ಗೆ ತಿಳಿಸಿಕೊಡಲಿದ್ದಾರೆ. ಅನಂತ ಪದ್ಮನಾಭ ಪಾಠಕ್, ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, 4.00 ಮಹಿಳಾರಂಗ–ಟೆರಾಕೋಟ ಆಭರಣ ವಿನ್ಯಾಸಕಿ ಜಯಶ್ರೀ ರವಿಕುಮಾರ್ ಅವರೊಂದಿಗೆ ಮಾತುಕತೆ. ಪ್ರಸ್ತುತಿ– ಅಬ್ದುಲ್ ರಶೀದ್, 4.45 ಹಿಂದಿ ಪಾಠ–ಆಯೇಷಾ ಸುಲ್ತಾನ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ–ಸಾವಯವ ಸಂಪದ, ಮಣ್ಣು ಹಾಗೂ ನೀರಿನ ಸಂರಕ್ಷಣೆ ಕುರಿತು ಡಾ.ಜಿ.ಹೆಚ್.ಯೋಗೀಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 9.30 ಹಿಂದೂಸ್ಥಾನಿ ಸಂಗೀತ–ಪಂಡಿತ್ ವಿನಾಯಕ ತೊರ್ವಿ–ಗಾಯನ, 10.30 ಸವಿನೆನಪು

'ಮೊಬೈಲ್ ಬ್ಲಡ್ ಡೊನೇಷನ್ ವೆಹಿಕಲ್' ಹೊಂದಿದ ಕೆಆರ್ ಆಸ್ಪತ್ರೆ ರಕ್ತನಿಧಿ ಕೇಂದ್ರ

ಸ್ಮಾರ್ಟರ್ ಸೌಲಭ್ಯ ಹೊಂದಿದ ವ್ಯಾನ್





ಮೈಸೂರಿನ ಕೆಆರ್ ಆಸ್ಪತ್ರೆಯ ರಕ್ತನಿಧಿ ಕೇಂದ್ರದ ಮೊಬೈಲ್ ಬ್ಲಡ್ ಡೊನೇಷನ್ ವೆಹಿಕಲ್ ಅನ್ನು ಚಿತ್ರದಲ್ಲಿ ಕಾಣಬಹುದು. ಬಲಚಿತ್ರದಲ್ಲಿ ಸದರಿ ವೆಹಿಕಲ್ ಒಳಗೆ ದಾನಿಯೊಬ್ಬರಿಂದ ಬ್ಲಡ್ ಡ್ರಾ ಮಾಡುತ್ತಿರುವ ಶುಶ್ರೂಷಕಿಯರು ಹಾಗೂ ಸಿಬ್ಬಂದಿಯನ್ನು ಕಾಣಬಹುದು.

ಮೈಸೂರು,ಸೆ.12(ಪಿಎಂ)– ರಕ್ತದಾನ ಅತ್ಯಂತ ಶ್ರೇಷ್ಠ ದಾನ. ಅಪಘಾತ ಮತ್ತು ಅನಾರೋಗ್ಯ ಸಂದರ್ಭಗಳಲ್ಲಿ ರಕ್ತದ ಅಗತ್ಯತೆ ಕಂಡು ಬಂದಾಗ ರಕ್ತದ ಮಹತ್ವ ಅರಿವಾಗುತ್ತದೆ. ರಕ್ತಕ್ಕೆ ಪರ್ಯಾಯವೂ ಇಲ್ಲ, ಕೃತಕವಾಗಿ ಉತ್ಪಾದಿಸಲೂ ಆಗದು. ಹಾಗಾಗಿ ರಕ್ತದಾನವನ್ನು ಅತ್ಯಂತ ಶ್ರೇಷ್ಠ ಎಂದೇ ಪರಿಗಣಿಸಲಾಗಿದೆ.

ಇಂತಹ ರಕ್ತದ ಅಗತ್ಯತೆ ಪೂರೈಸುವ ನಿಟ್ಟಿನಲ್ಲಿ ಕೆಆರ್ ಆಸ್ಪತ್ರೆಯ ರಕ್ತನಿಧಿ ಕೇಂದ್ರವು ಆಗಾಗ್ಗೆ ರಕ್ತದಾನ ಶಿಬಿರಗಳನ್ನು ಆಯೋಜಿಸುತ್ತಿದ್ದು, ಇದೀಗ ಸುಸಜ್ಜಿತ ಸೌಲಭ್ಯ, ಸಾಧನ–ಸಲಕರಣೆಗಳನ್ನು ಹೊಂದಿರುವ 'ಮೊಬೈಲ್ ಬ್ಲಡ್ ಡೊನೇಷನ್ ವೆಹಿಕಲ್ ನೊಂದಿಗೆ (ಸಂಚಾರಿ ರಕ್ತದಾನ ವಾಹನ)' ಸದರಿ ರಕ್ತನಿಧಿ ಕೇಂದ್ರವು ತನ್ನ ಕಾರ್ಯಾಚರಣೆ ವಿಸ್ತರಿಸಲು ಸಜ್ಜುಗೊಂಡಿದೆ.

ಇಡೀ ಮೈಸೂರು ಜಿಲ್ಲೆಯ ಮೊದಲ ಹಾಗೂ ಏಕೈಕ ಸಂಚಾರ ರಕ್ತದಾನ ವಾಹನ ಹೊಂದಿರುವ ಹಿರಿಮೆಗೆ ಕೆಆರ್ ಆಸ್ಪತ್ರೆಯ ರಕ್ತನಿಧಿ ಕೇಂದ್ರ ಇದೀಗ ಭಾಜನವಾಗಿದೆ. ಐಸಿಐಸಿಐ ಬ್ಯಾಂಕ್ ತನ್ನ ಸಿಎಸ್ಆರ್ ನಿಧಿಯಡಿ ಸದರಿ ಕೇಂದ್ರಕ್ಕೆ ಈ 'ಮೊಬೈಲ್ ಬ್ಲಡ್ ಡೊನೇಷನ್ ವೆಹಿಕಲ್' ನೀಡಿದೆ.

ರಕ್ತದಾನ ಶಿಬಿರ ಆಯೋಜನೆಯು ಸ್ಮಾರ್ಟರ್ ಆಗಿ ನಡೆಸಲು ಪೂರಕವಾಗಿ ಈ ವಾಹನದ ವಿನ್ಯಾಸ ಮಾಡಲಾಗಿದೆ. ಇದರಲ್ಲಿ ಏಕಕಾಲದಲ್ಲಿ ಇಬ್ಬರು ದಾನಿಗಳಿಂದ ರಕ್ತ ಪಡೆಯಬಹುದು. ಬ್ಲಡ್ ಶೇಖರಣೆಗೂ ಇದರಲ್ಲಿ ಸೌಲಭ್ಯವಿದೆ. ತಲಾ 100 ಯೂನಿಟ್ ರಕ್ತ ಸಂಗ್ರಹಿಸಲು 2 ರೆಫ್ರಿಜಿರೇಟರ್ ಇದ್ದು, ಒಟ್ಟು 200 ಯೂನಿಟ್ ರಕ್ತ ಸಂಗ್ರಹಿಸಬಹುದಾಗಿದೆ.

ಇದರಲ್ಲಿ ಅಗತ್ಯವಿರುವ ಎಲ್ಲಾ ಸಾಧನ–ಸಲಕರಣೆ ಇಟ್ಟುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಕೈ ತೊಳೆಯಲು ಸಣ್ಣ ನೀರಿನ ಟ್ಯಾಂಕ್ ಹಾಗೂ ಈ ನೀರು ಹರಿದು ಹೋಗಲು ವಾಶ್ ಬೇಷನ್ ಸೌಲಭ್ಯವೂ ಇದೆ. ಈ ಸ್ಮಾರ್ಟರ್ ಸೌಲಭ್ಯದಿಂದ ಶಿಬಿರಗಳ ಆಯೋಜನೆ ವೇಳೆ ಹಾಲ್ ವ್ಯವಸ್ಥೆ, ಹಾಸಿಗೆ ಹಾಗೂ ಅಗತ್ಯ ಸಲಕರಣೆ ಜೋಡಣೆ ಮಾಡಬೇಕಾದ ಅಗತ್ಯತೆ ಇಲ್ಲವಾಗಿದೆ. ಆಂಬುಲೆನ್ಸ್ ವ್ಯಾನ್ ಆಕಾರದಲ್ಲಿರುವ ಈ ಹೊಚ್ಚ ಹೊಸ ವಾಹನಕ್ಕೆ (ಕೆಎ–09, ಜಿ–0915) ಸೋಮವಾರ ಚಾಲನೆ ನೀಡಲಾಗಿದೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕೆಆರ್ ಆಸ್ಪತ್ರೆಯ ಸ್ಥಾನೀಯ ವೈದ್ಯಾಧಿಕಾರಿ (ಆರ್ಎಂಓ) ಡಾ.ನಯಾಜ್ ಪಾಷ, ಈ ಸುಸಜ್ಜಿತ ವಾಹನದಲ್ಲಿ ಬ್ಲಡ್ ಡ್ರಾ ಮಾಡಲು ಹಾಗೂ ಈ ಸಂದರ್ಭದಲ್ಲಿ ಅಡ್ಡ ಪರಿಣಾಮ ಉಂಟಾದರೆ ಚಿಕಿತ್ಸೆ ನೀಡಲೂ ವ್ಯವಸ್ಥೆ ಇದೆ. ಸಂಪೂರ್ಣ ಎಸಿ ಸೌಲಭ್ಯ ಹೊಂದಿದ್ದು, ಐಸಿಯು ಕೂಡ ಇದೆ. ದಿನದ 24 ಗಂಟೆ ಕಾಲ ಕೆಆರ್ ಆಸ್ಪತ್ರೆ ರಕ್ತನಿಧಿ ಕೇಂದ್ರ ಕೆಲಸ ಮಾಡುತ್ತಿದೆ. ಇಡೀ ಜಿಲ್ಲೆಗೆ ಸರ್ಕಾರಿ ಬ್ಲಡ್ ಬ್ಯಾಂಕ್ ಇದೊಂದೇ. ಕೇಂದ್ರದಿಂದ ಆಗಾಗ್ಗೆ ರಕ್ತದಾನ ಶಿಬಿರಗಳನ್ನು ಆಯೋಜಿಸಲಾಗುತ್ತದೆ. ಈ ಸಂದರ್ಭದಲ್ಲಿ ಸದರಿ ವಾಹನದಿಂದ ಹೆಚ್ಚು ಅನುಕೂಲವಾಗಲಿದೆ ಎಂದು ತಿಳಿಸಿದರು.

ಸದರಿ ರಕ್ತನಿಧಿ ಕೇಂದ್ರದ ಮುಖ್ಯಸ್ಥ ಹಾಗೂ ಹಿರಿಯ ತಜ್ಞ ಡಾ.ಮಂಜುನಾಥ್ ಮಾತನಾಡಿ, ಮೊಬೈಲ್ ಬ್ಲಡ್ ಡೊನೇಷನ್ ವೆಹಿಕಲ್ (ಸಂಚಾರಿ ರಕ್ತದಾನ ವಾಹನ) ಇರುವ ಹಿನ್ನೆಲೆಯಲ್ಲಿ ಈಗ ರಕ್ತದಾನ ಶಿಬಿರ ಆಯೋಜನೆಗೆ ಹಾಲ್ ಅಥವಾ ಹಾಸಿಗೆ ವ್ಯವಸ್ಥೆ ಮಾಡಿಕೊಳ್ಳುವ ಅಗತ್ಯವಿಲ್ಲ. ವಾಹನದಲ್ಲಿ ಏಕಕಾಲದಲ್ಲಿ ಇಬ್ಬರು ರಕ್ತದಾನ ಮಾಡಬಹುದು. ನಮ್ಮ ರಕ್ತನಿಧಿ ಕೇಂದ್ರದಿಂದ ದಿನಕ್ಕೆ ಸರಾಸರಿ 60 ಯೂನಿಟ್ ರಕ್ತ ಜಿಲ್ಲೆ ವ್ಯಾಪ್ತಿಯಲ್ಲಿ ವಿತರಣೆಯಾಗಲಿದೆ. ಒಂದೊಂದು ದಿನ 40 ಯೂನಿಟ್ ಆಗಬಹುದು. ಕೇಂದ್ರದಿಂದ ತಿಂಗಳಿಗೆ ಕನಿಷ್ಠ 6 ರಕ್ತದಾನ ಶಿಬಿರ ಆಯೋಜಿಸಲಾಗುತ್ತಿದೆ ಎಂದರು. ವಾಹನದ ಉದ್ಘಾಟನೆ ಸಂದರ್ಭದಲ್ಲಿ ಆರ್ಎಂಓ, ರಕ್ತನಿಧಿ ಕೇಂದ್ರ ಮುಖ್ಯಸ್ಥರ ಜೊತೆಗೆ ಚೆಲುವಾಂಬ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ರಾಜೇಂದ್ರಕುಮಾರ್ ಸೇರಿದಂತೆ ಇತರ ಸಿಬ್ಬಂದಿ ಹಾಜರಿದ್ದರು.

ಆದಿಚುಂಚನಗಿರಿ ಶ್ರೀಗಳಿಗೆ ಮಾಜಿ ಪ್ರಧಾನಿ ದೇವೇಗೌಡರಿಂದ ಸನ್ಮಾನ




ನಮ್ಮೂರು ನಮ್ಮೋರು ಸಮಾಜ ಸೇವೆ ಟ್ರಸ್ಟ್ ವತಿಯಿಂದ ಮೈಸೂರಿನ ಆದಿಚುಂಚನಗಿರಿ ಶಾಖಾ ಮಠದ ಲೋಕಾರ್ಪಣಾ ಸಮಾರಂಭದಲ್ಲಿ ಆದಿಚುಂಚನಗಿರಿ ಮಠದ ಡಾ.ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿ ಅವರಿಗೆ ರುದ್ರಾಕ್ಷಿಯ ಕಿರೀಟವನ್ನು ಮಾಜಿ ಪ್ರಧಾನಮಂತ್ರಿ ಎಚ್.ಡಿ.ದೇವೇಗೌಡರು ಧಾರಣೆ ಮಾಡಿ, ಅಭಿನಂದಿಸಿದರು. ಟ್ರಸ್ಟಿನ ಅಧ್ಯಕ್ಷ ಬೀಡನಹಳ್ಳಿ ಸತೀಶ್‌ಗೌಡ, ಸಂತೋಷ್ ಗೌಡ, ಅಭಿಷೇಕ್‌ಗೌಡ, ಮಧು, ಕಲಾವಿದ ನಂದನ್ ಉಪಸ್ಥಿತರಿದ್ದರು.



ರಾಷ್ಟ್ರಭಾರತಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ರಾಜ್ಯಮಟ್ಟದ ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಿದ್ದ 'ಸ್ವಚ್ಛ ಭಾರತ ಅಭಿಯಾನ'ದ 'ಬ್ರ್ಯಾಂಡ್ ಅಂಬಾಸಿಡರ್' ಫಾಲ್ಕಿಯಾ ಖಾನ್, ಪ್ರಥಮ ಸ್ಥಾನ ಗಳಿಸುವ ಮೂಲಕ 5 ಸಾವಿರ ನಗದು ಬಹುಮಾನಕ್ಕೆ ಭಾಜನರಾಗಿದ್ದಾರೆ. ರಾಜ್ಯ ಮಟ್ಟದ ಈ ಭಾಷಣ ಸ್ಪರ್ಧೆಯಲ್ಲಿ ರಾಜ್ಯಾದ್ಯಂತ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಇಂದಿನಿಂದ ಅನಂತನಾಗ್ ಉತ್ಸವ

ಚಲನಚಿತ್ರೋತ್ಸವ, ವಿಚಾರ ಸಂಕಿರಣ, ಅಭಿನಂದನೆ



ಬೆಂಗಳೂರು: ಭಾರತೀಯ ವಿದ್ಯಾಭವನ ಮತ್ತು ಸುಚಿತ್ರ ಫಿಲಂ ಸೊಸೈಟಿಯು ಸೆ.13, 14 ಹಾಗೂ 15ರಂದು 'ಅನಂತನಾಗ್ ಉತ್ಸವ' ಆಯೋಜಿಸಿದೆ.

ನಗರದ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಭಾರತೀಯ ವಿದ್ಯಾ ಭವನದ ಇ.ಎಸ್.ವಿ ಸಭಾಂಗಣ ಮತ್ತು ಬನಶಂಕರಿ 2ನೇ ಹಂತ, ಬಿ.ವಿ.ಕಾರಂತ ರಸ್ತೆಯಲ್ಲಿರುವ ಸುಚಿತ್ರ ಫಿಲಂ ಸೊಸೈಟಿಯಲ್ಲಿ 'ಪ್ರಜಾವಾಣಿ' ಸಹಯೋಗದೊಂದಿಗೆ 'ಅನಂತನಾಗ್ ಉತ್ಸವ' ನಡೆಯಲಿದೆ.

ಈ ಸಂದರ್ಭದಲ್ಲಿ ನಟ ಅನಂತನಾಗ್ ಅವರ ಸಿನಿಮಾಗಳ ಪ್ರದರ್ಶನ, ವಿಚಾರ ಸಂಕಿರಣ ಹಾಗೂ ಅಭಿನಂದನೆ ಕಾರ್ಯಕ್ರಮ ನಡೆಯಲಿದೆ. ಸೆ.13ರಂದು ಉತ್ಸವಕ್ಕೆ ಚಾಲನೆ ಸಿಗಲಿದ್ದು, ಅದೇ ದಿನ ವಿಚಾರ ಸಂಕಿರಣ ನಡೆಯಲಿದೆ. ಸೆ.15ರಂದು ಅನಂತನಾಗ್ ಅವರಿಗೆ ಅಭಿನಂದನೆ ಸಲ್ಲಿಸಲಾಗುತ್ತದೆ. ಅನಂತನಾಗ್ ಅಭಿನಯದ ಅಂಕುರ್ (ಹಿಂದಿ) ಸೆ.13 ರಂದು, ಕನ್ನಡದ ಬರ ಹಾಗೂ ಹಂಸ ಗೀತೆ ಸೆ.14ರಂದು ಹಾಗೂ ಸ್ಟಂಬಲ್ (ಇಂಗ್ಲಿಷ್) ಸೆ.15ರಂದು ಭಾರತೀಯ ವಿದ್ಯಾಭವನದಲ್ಲಿ ಪ್ರದರ್ಶನಗೊಳ್ಳಲಿವೆ. ಹಂಸಗೀತೆ ಹಾಗೂ ಅಂಕುರ್ ಚಿತ್ರಗಳು ಸುಚಿತ್ರ ಫಿಲಂ ಸೊಸೈಟಿಯಲ್ಲಿ ಸೆ.13 ಹಾಗೂ 14ರಂದು ಪ್ರದರ್ಶನಗೊಳ್ಳಲಿವೆ.



ಚಾಮರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಲ್.ನಾಗೇಂದ್ರ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮೈಸೂರು 23ನೇ ವಾರ್ಡಿನ ಬಿಜೆಪಿ ಮುಖಂಡರು ಅಭಿನಂದಿಸಿ, ಶುಭಾಶಯ ಕೋರಿದರು. ಮುಖಂಡರಾದ ಆರ್.ಪರಮೇಶ, ಸುರೇಂದ್ರ, ಶ್ರೀನಿವಾಸ್, ಕಿರಣ್, ಮಂಜುನಾಥ್, ಹರ್ಷ, ವಿನೋದ್, ಪ್ರವೀಣ್‌ಕುಮಾರ್ ಚಿತ್ರದಲ್ಲಿದ್ದಾರೆ.

ಇಂದು ಬೆಂಗಳೂರಲ್ಲಿ ಡಿಜಿಪಿ ಸಮ್ಮೇಳನ

ಬೆಂಗಳೂರು: ಕರ್ನಾಟಕ ರಾಜ್ಯ ಪೊಲೀಸ್ ವತಿಯಿಂದ ನಾಳೆ (ಬುಧವಾರ) ಬೆಂಗಳೂರಿನಲ್ಲಿ ಒಂದು ದಿನದ ದಕ್ಷಿಣ ರಾಜ್ಯಗಳ ಡಿಜಿಪಿ ಸಮಾವೇಶವನ್ನು ಆಯೋಜಿಸಲಾಗಿದೆ. ಸಮಾವೇಶದಲ್ಲಿ ದಕ್ಷಿಣ ರಾಜ್ಯಗಳ ಎಲ್ಲಾ ಪೊಲೀಸ್ ಮಹಾನಿರ್ದೇಶಕರು ಹಾಗೂ ಕೇಂದ್ರ ಪೊಲೀಸ್ ಸಂಸ್ಥೆಗಳ ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಸಮಾವೇಶವು ದಕ್ಷಿಣ ಭಾರತದ ವಿವಿಧ ಪೊಲೀಸ್ ಪಡೆಗಳ ನಡುವಿನ ಪ್ರಾದೇಶಿಕ ಸಮನ್ವಯದಲ್ಲಿ ಪ್ರಮುಖ ಮೈಲಿಗಲ್ಲು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಗೃಹ ಸಚಿವ ಜಿ.ಪರಮೇಶ್ವರ ಸಮ್ಮುಖದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ದಕ್ಷಿಣ ಭಾರತ ಡಿಜಿಪಿಗಳ ಸಮನ್ವಯ ಸಮಾವೇಶ'ವನ್ನು ಉದ್ಘಾಟಿಸಲಿದ್ದಾರೆ. ತಮಿಳುನಾಡು, ತೆಲಂಗಾಣ, ಆಂಧ್ರ ಪ್ರದೇಶ, ಕೇರಳ, ಪುದುಚೇರಿ, ಅಂಡಮಾನ್ ಮತ್ತು ನಿಕೋಬಾರ್ ಮತ್ತು ಲಕ್ಷ ದ್ವೀಪಗಳ ಪೊಲೀಸ್ ಮಹಾನಿರ್ದೇಶಕರು ಮತ್ತು ಪೊಲೀಸ್ ಪಡೆಗಳ ಮುಖ್ಯಸ್ಥರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

ರಾಜ್ಯದ ಡಿಜಿ ಮತ್ತು ಐಜಿಪಿ ಸಮ್ಮೇಳನದ ಅಧ್ಯಕ್ಷರಾಗಿದ್ದಾರೆ. ಕೇಂದ್ರ ಪೊಲೀಸ್ ಸಂಸ್ಥೆಗಳ ಹಿರಿಯ ಅಧಿಕಾರಿಗಳು ಸಹ ಚರ್ಚೆಯಲ್ಲಿ ಭಾಗವಹಿಸುತ್ತಾರೆ. ಸಮಾಜದ ಮೂಲಭೂತ ಅಂಶಗಳನ್ನು ಪ್ರಶ್ನಿಸುವ ನಿರ್ಣಾಯಕ ಆಂತರಿಕ ಭದ್ರತಾ ಸಮಸ್ಯೆಗಳ ವ್ಯಾಪ್ತಿಯನ್ನು ಸಮ್ಮೇಳನದಲ್ಲಿ ಚರ್ಚಿಸಲಾಗುವುದು ಎಂದು ತಿಳಿದುಬಂದಿದೆ.

ಸೆ.15, 16 ಜಿಲ್ಲಾ ಮಟ್ಟದ ಸಾಂಸ್ಕೃತಿಕ, ಕ್ರೀಡಾ ಸ್ಪರ್ಧೆ

ಮೈಸೂರು, ಸೆ.12–2023ರ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಪ್ರಯುಕ್ತ ಸೆ.15ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಿಮಿಷಾಂಬನಗರದಲ್ಲಿನ ಗ್ರಾಮೀಣಾಭಿವೃದ್ಧಿ ಮತ್ತು ತರಬೇತಿ ಸಂಸ್ಥೆಯ ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರದಲ್ಲಿ ಮತ್ತು ಸೆ.16ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಮಟ್ಟದ ಕ್ರೀಡಾ ಸ್ಪರ್ಧೆಗಳನ್ನು ನಜರ್‌ಬಾದ್‌ನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದೆ. ಆಸಕ್ತ ಹಿರಿಯ ನಾಗರಿಕರು ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಿಗಾಗಿ ತಮ್ಮ ವಯಸ್ಸಿನ ಮಾಹಿತಿಯೊಂದಿಗೆ ಕಾರ್ಯಕ್ರಮ ನಡೆಯುವ ಸ್ಥಳದಲ್ಲೇ ಖುದ್ದಾಗಿ ನೊಂದಾಯಿಸಿಕೊಂಡು ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ ದೂ.ಸಂ: 0821–2490333 ಸಂಪರ್ಕಿಸಬಹುದು.

ತಮಿಳುನಾಡಿಗೆ ಮತ್ತೆ ಪ್ರತಿದಿನ 5 ಸಾವಿರ ಕ್ಯೂಸೆಕ್ ನೀರು ಬಿಡುವಂತೆ ಸೂಚನೆ

ಬೆಂಗಳೂರು: ತಮಿಳುನಾಡಿಗೆ ಮುಂದಿನ 15 ದಿನಗಳವರೆಗೂ ಪ್ರತಿದಿನ 5,000 ಕ್ಯೂಸೆಕ್ಸ್ ನೀರು ಹರಿಸಬೇಕೆಂದು ಕಾವೇರಿ ನದಿ ನೀರು ನಿರ್ವಹಣಾ ಸಮಿತಿ ಕರ್ನಾಟಕಕ್ಕೆ ಮತ್ತೆ ಸೂಚನೆ ನೀಡಿದೆ.

ರಾಜ್ಯದಲ್ಲಿ ಈಗಾಗಲೇ ಮಳೆ ಕೊರತೆಯಿಂದ ಬರಗಾಲದ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಆರ್‌ಎಸ್ ಜಲಾಶಯದಲ್ಲಿ ನೀರಿನ ಮಟ್ಟ 21 ಸಾವಿರ ಟಿಎಂಸಿಗೆ ಇಳಿದಿದೆ. ಆದರೆ ಕಾವೇರಿ ನೀರು ನಿಯಂತ್ರಣಾ ಸಮಿತಿ ತಮಿಳುನಾಡಿಗೆ 15 ದಿನಗಳ ಕಾಲ ಪ್ರತಿನಿತ್ಯ 5,000 ಕ್ಯೂಸೆಕ್ಸ್ ನೀರನ್ನು ಹರಿಸುವಂತೆ ಕರ್ನಾಟಕಕ್ಕೆ ಸೂಚನೆ ನೀಡಿದೆ.

ಡಿಪ್ಲೊಮಾ ಇನ್ ಟೂಲ್ ಡಿಸೈನ್ ಪ್ರವೇಶಕ್ಕೆ ಅರ್ಜಿ

ಮೈಸೂರು.ಸೆ.12– ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ವತಿಯಿಂದ 2023–24ನೇ ಸಾಲಿನ ಡಿಪ್ಲೊಮಾ ಇನ್ ಟೂಲ್ ಡಿಸೈನ್ ಪ್ರವೇಶಕ್ಕೆ ಡಿಪ್ಲೊಮಾ ಮತ್ತು ಬಿ.ಇ ಪಾಸಾದ ವಿದ್ಯಾರ್ಥಿಗಳಿಂದ ಒಂದು ವರ್ಷದ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. AITT, SCP/TSP ಯೋಜನೆ ಯಡಿಯಲ್ಲಿ ಅರ್ಹ SC, ST ಅಭ್ಯರ್ಥಿಗಳಿಗೆ ಮಾಸಿಕ 2500 ಸ್ಟೇ ಫಂಡ್‌ನೊಂದಿಗೆ ಉಚಿತ ತರಬೇತಿ ಮತ್ತು ಹಾಸ್ಟೆಲ್ ವ್ಯವಸ್ಥೆ ನೀಡಲಾಗುವುದು. ತರಬೇತಿ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಕ್ಯಾಂಪಸ್ ಸಂದರ್ಶನವನ್ನು ಆಯೋಜಿಸಲಾಗುವುದು. ಮಾಹಿತಿಗಾಗಿ ದೂ.ಸಂ: 8050325552, 809597 8954, 9945479700 ಸಂಪರ್ಕಿಸಬಹುದು ಎಂದು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಸಿ.ಓ.ಇ ಸಂಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾತ್ರಿ ವೇಳೆ ಮನೆ ಮುಂದೆ ನಿಲ್ಲಿಸಿದ್ದ ಕಾರುಗಳ ಚಕ್ರ ಕಳವು ಪ್ರಕರಣ: ಮೂವರು ಖದೀಮರ ಬಂಧನ

ಕದ್ದ 12 ಚಕ್ರಗಳು ವಶಕ್ಕೆ



ಆರೋಪಿಗಳಿಂದ ವಶಪಡಿಸಿಕೊಂಡ ಕಾರುಗಳ ಚಕ್ರಗಳು, ದ್ವಿಚಕ್ರ ವಾಹನಗಳೊಂದಿಗೆ ಪೊಲೀಸರು.



ಸಿದ್ದಿಕ್



ಶಾರುಖ್



ಸಕ್ಲೇನ್

ಮೈಸೂರು, ಸೆ.12(ಎಸ್‌ಬಿಡಿ)– ರಾತ್ರಿ ವೇಳೆ ಕಾರುಗಳ ಚಕ್ರಗಳನ್ನು ಕಳ್ಳತನ ಮಾಡುತ್ತಿದ್ದ ಮೂವರು ಖದೀಮರನ್ನು ಮೈಸೂರಿನ ಕುವೆಂಪುನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶ್ರೀರಂಗಪಟ್ಟಣ ತಾಲೂಕು ಗಂಜಾಂನ ನಿವಾಸಿಗಳಾದ ಚಾಲಕ ಸಿದ್ದಿಕ್(24), ಮೆಕ್ಯಾನಿಕ್ ಶಾರುಖ್ ಖಾನ್(25) ಹಾಗೂ ಕೆಸರೆ 3ನೇ ಕ್ರಾಸ್ ನಿವಾಸಿ, ವೆಲ್ಡರ್ ಸಕ್ಲೇನ್ ಮುಷ್ತಾಖ್ (24)ನನ್ನು ಸೆ.10ರಂದು ಬಂಧಿಸಲಾಗಿದೆ.

ಆರೋಪಿಗಳು ಕಳವು ಮಾಡಿ, ಮಾರಾಟ ಮಾಡಿದ್ದ ಸುಮಾರು 2.56 ಲಕ್ಷ ರೂ. ಮೌಲ್ಯದ ಮೂರು ಕಾರುಗಳ 12 ಚಕ್ರಗಳು, 80 ಸಾವಿರ ರೂ. ಮೌಲ್ಯದ ದ್ವಿಚಕ್ರ ವಾಹನ ಹಾಗೂ ಕೃತ್ಯಕ್ಕೆ ಬಳಸಿದ್ದ ಎರಡು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಆರೋಪಿಗಳ ಬಂಧನದಿಂದ ಕಾರುಗಳ ಚಕ್ರ ಕಳವು ಸಂಬಂಧ ಕುವೆಂಪುನಗರ ಠಾಣೆಯಲ್ಲಿ ದಾಖಲಾಗಿದ್ದ ಎರಡು ಪ್ರಕರಣ, ಆಲನಹಳ್ಳಿ ಠಾಣೆಯ ಒಂದು ಪ್ರಕರಣ, ದ್ವಿಚಕ್ರ ವಾಹನ ಕಳ್ಳತನ ಸಂಬಂಧ ವಿಜಯನಗರ ಠಾಣೆ ಹಾಗೂ ಬೆಂಗಳೂರಿನ ಹೆಚ್‌ಎಸ್‌ಆರ್ ಲೇಔಟ್ ಠಾಣೆಯಲ್ಲಿ ದಾಖಲಾಗಿದ್ದ ತಲಾ ಒಂದು ಪ್ರಕರಣ ಪತ್ತೆಯಾದಂತಾಗಿದೆ ಎಂದರು.

ಕುವೆಂಪುನಗರ ಠಾಣೆ ವ್ಯಾಪ್ತಿಯ ದಟ್ಟಗಳ್ಳಿಯ ಯೂನಿವರ್ಸಿಟಿ ಲೇಔಟ್‌ನ ಮನೆಯೊಂದರ ಮುಂಭಾಗ ನಿಲ್ಲಿಸಿದ್ದ ಸ್ವಿಫ್ಟ್ ಡಿಸೈರ್ ಕಾರಿನ ನಾಲ್ಕು ಚಕ್ರಗಳನ್ನು ಕಳ್ಳತನ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿದ ಇನ್‌ಸ್ಪೆಕ್ಟರ್ ಎಲ್.ಅರುಣ್ ಹಾಗೂ ಸಿಬ್ಬಂದಿ, ಮೂವರು ಖದೀಮರನ್ನು ಬಂಧಿಸಿದ್ದಾರೆ.

ಸರಣಿ ಕಳ್ಳತನ ನಡೆದಿತ್ತು: ಕಳೆದ ಜೂನ್ ತಿಂಗಳಲ್ಲಿ ಕಾರುಗಳ ಚಕ್ರಗಳ ಸರಣಿ ಕಳ್ಳತನ ನಡೆದಿತ್ತು. ಜೂ.23ರಂದು ಆಲನಹಳ್ಳಿ ಠಾಣಾ ವ್ಯಾಪ್ತಿಯ ಸರ್ದಾರ್ ವಲ್ಲಭಬಾಯ್ ಪಟೇಲ್ ನಗರದ ತಿರುಮಲ ಪಬ್ಲಿಕ್ ಸ್ಕೂಲ್ ರಸ್ತೆ ನಿವಾಸಿ ಕುಬೇರಸ್ವಾಮಿ ಅವರ ಕಿಯಾ ಕಾರಿನ ನಾಲ್ಕು ಚಕ್ರ ಕಳ್ಳತನ ಮಾಡಲಾಗಿತ್ತು. ಬಳಿಕ ಜೂ.16ರ ರಾತ್ರಿ ಕುವೆಂಪುನಗರ ಠಾಣಾ ವ್ಯಾಪ್ತಿಯ ಯೂನಿವರ್ಸಿಟಿ ಲೇಔಟ್‌ನಲ್ಲಿ ನಿವೃತ್ತ ಪ್ರಾಧ್ಯಾಪಕಿ ಮನೆ ಮುಂದೆ ನಿಲ್ಲಿಸಿದ್ದ ಮಾರುತಿ ಸ್ವಿಫ್ಟ್ ಡಿಸೈರ್ ವಿಎಕ್ಸ್‌ಐ ಕಾರಿನ ಚಕ್ರಗಳು ಹಾಗೂ ಅದೇ ಬಡಾವಣೆಯ ಮತ್ತೊಬ್ಬರ ಮಾರುತಿ ಬಲೆನೋ ಕಾರಿನ ಚಕ್ರಗಳನ್ನು ಖದೀಮರು ಕದ್ದೊಯ್ದಿದ್ದರು. ಜೂ.19ರಂದು ವಿಜಯನಗರ 4ನೇ ಹಂತದಲ್ಲಿ ಸಿನೋಜ್ ಕುಮಾರ್ ಅವರ ಮಹೀಂದ್ರ ಎಕ್ಸ್‌ಯುವಿ–300 ಕಾರಿನ ನಾಲ್ಕು ಚಕ್ರಗಳನ್ನು ಕಳ್ಳತನ ಮಾಡಲಾಗಿತ್ತು. ಈ ಸಂಬಂಧ 'ಮೈಸೂರು ಮಿತ್ರ' ಪತ್ರಿಕೆ ಜೂ.27ರ ಸಂಚಿಕೆಯಲ್ಲಿ 'ಮೈಸೂರಲ್ಲಿ ವ್ಯಾಪಕಗೊಳ್ಳುತ್ತಿರುವ ಕಾರುಗಳ ಚಕ್ರ ಕಳವು ಪ್ರಕರಣ' ಶೀರ್ಷಿಕೆಯಲ್ಲಿ ವರದಿ ಪ್ರಕಟಿಸಿ, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗಿತ್ತು.

ನಕ್ಕರೆ ಅದೇ ಸ್ವರ್ಗ

ಅಜ್ಜ : "ಈಗಿನವರು ಊಟ ಮಾಡುವ ಮೊದಲು ಸರಿಯಾಗಿ ಕೈ ತೊಳೆಯದೇ ಹೋದ್ರೂ, ಊಟ ಆದ ಮೇಲೆ ಸ್ವಚ್ಛವಾಗಿ ಕೈತೊಳೆದು ಒರೆಸಿಕೊಳ್ತಾರಲ್ಲಾ ಯಾಕೆ?"

ಮೊಮ್ಮಗ : "ಯಾಕೆ ಅಂದ್ರೆ ಟಚ್ ಸ್ಕ್ರೀನ್ ಮೊಬೈಲ್ ಕೊಳೆ ಆದ್ರೆ ಕಷ್ಟ ಅಂತ!"

ಮೈಸೂರು ಮಿತ್ರ
ಬುಧವಾರ, 13 ಸೆಪ್ಟೆಂಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಅಧಿಕಾರದ ಜೊತೆಗೆ ಕರುಣೆ ವಿನಯವೂ ಇದ್ದರೆ ದೇವರು ಮೆಚ್ಚುತ್ತಾನೆ.
–ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೆಣ್ಣೆ ಮನ್ಯಾಗೆ ಇಟ್ಕೊಂಡು ತುಪ್ಪಕ್ಕೆ ಮನೆ ಮನೆ ಅಲೆದಂತೆ

ನಿಮ್ಮ ಪತ್ರಗಳು

ಮಹಿಷಾ ದಸರಾ; ಮೈಸೂರು ದಸರಾದ ವಿರೋಧವಲ್ಲ ಹಾಗೇ ವಿರುದ್ಧವು ಅಲ್ಲ

ಮಾನ್ಯರೆ,

ಇತಿಹಾಸ ಕೆಲವು ಕಾಲ ಕೆಲವರಿಂದ ಮರೆಯಾಗಿತ್ತು ಅಥವಾ ತಿರುಚಿತ್ತು ಎಂದ ಮಾತ್ರಕ್ಕೆ ಇತಿಹಾಸವೇ ಸುಳ್ಳು ಎಂದು ಹೇಳಿ ಮತ್ತೆ ಸತ್ಯವನ್ನು ಮುಚ್ಚಿಡುವ ಪ್ರಯತ್ನ ಮಾಡುವುದು ನಿಜಕ್ಕೂ ಇತಿಹಾಸದ ಪಾರಂಪರಿಕ ಲೋಕಕ್ಕೆ ಮಾಡುವ ಬಹುದೊಡ್ಡ ಅಪಮಾನ ಎಂದರೆ ತಪ್ಪಾಗಲಾರದು. ಏಕೆಂದರೆ ಮೈಸೂರು ಎಂಬ ಹೆಸರಿನ ಹಿನ್ನೆಲೆಯ ಹಿಂದೆ ಮಹಿಷಾಸುರ ಎಂಬ ಬೌದ್ಧ ರಾಜನ ಆಗಮನದ ಆಳ್ವಿಕೆಯಿಂದ ಮೈಸೂರು ಎಂಬ ಹೆಸರು ಬಂದಿರುವುದು ಸುಳ್ಳಿನಿಂದ ಮುಚ್ಚಲ್ಪಟ್ಟಿದ್ದ ಸತ್ಯದ ಇತಿಹಾಸವನ್ನು ಹೆಕ್ಕಿ ತೆಗೆದ ಇತಿಹಾಸದ ತಜ್ಞರಿಂದ ತಿಳಿದು ಬಂದಿದೆ. ಹಾಗೇ ಮಹಿಷಾಸುರನನ್ನು ರಾಕ್ಷಸ, ಕೊಲೆಗಡುಕ, ಕ್ರೂರಿ ಎಂಬ ಪದಗಳನ್ನು ಬಳಕೆ ಮಾಡಿ ಇತಿಹಾಸದ ಪುಟಗಳಿಂದ ದೂರ ಇಟ್ಟಿದ್ದ ಸುಳ್ಳು ಇತಿಹಾಸವನ್ನು ಬಯಲು ಮಾಡಿ ಮಹಿಷಾಸುರ ಒಬ್ಬ ಪ್ರಬುದ್ಧ ರಾಜ, ತನ್ನ ಆಡಳಿತದ ಅವಧಿಯಲ್ಲಿ ಪ್ರಜೆಗಳ ರಕ್ಷಕನಾಗಿದ್ದ, ಸದಾ ವೈಚಾರಿಕ ಚಿಂತನೆಯನ್ನು ಮೈಗೂಡಿಸಿಕೊಂಡು ಅಧಿಕಾರ ನಡೆಸಿದ, ಹಾಗೇ ಒಬ್ಬ ದೊಡ್ಡ ಬೌದ್ಧ ಅನುಯಾಯಿಯಾಗಿದ್ದ ಎಂಬ ನೈಜ ಇತಿಹಾಸವನ್ನು ಇಡೀ ಜಗತ್ತಿಗೆ ಮಹಿಸೂರಿನ ನೈಜ ಚರಿತ್ರೆಯನ್ನು ಹೇಳಲೊರಟ ದಸರಾವೇ ಮಹಿಸಾ ದಸರಾ, ಹೊರತು ಮೈಸೂರು ದಸರಾದ ವಿರೋಧ ಅಥವಾ ವಿರುದ್ದವಲ್ಲ. ಜೊತೆಗೆ ಯಾರ ಭಾವನೆಗಳಿಗೂ ಧಕ್ಕೆ ಮಾಡುವುದಕ್ಕಾಗಿ ಮತ್ತು ಸಂಘರ್ಷಕ್ಕೆ ಅಹ್ವಾನಿಸುವುದಕ್ಕಾಗಿ ಅಲ್ಲವೇ ಅಲ್ಲ. ಮಹಿಷ ರಾಜನ ಇತಿಹಾಸವನ್ನು ಅಧ್ಯಯನ ಮಾಡದ ಆಚರಣೆಯ ಉದ್ದೇಶವನ್ನು ಅರಿಯದ ಕೆಲವು ಮತಾಂಧ ಮನಸ್ಸುಗಳು ಜಾತಿ ಧರ್ಮದ ನಶೆಯನ್ನು ಬೆರೆಸಿ ಮಹಿಷಾ ದಸರಾ ಆಚರಣೆಯನ್ನು ವಿರೋಧಿಸಿ ಅಡ್ಡಿಪಡಿಸುತ್ತಿರುವುದು ಇತಿಹಾಸವನ್ನು ಇನ್ನೂ ಅರಿಯದ ಮೂಢರಂತೆ ಅವರ ನಡೆ ಎದ್ದು ಕಾಣುತ್ತಿದೆ. ಇದಕ್ಕೆಲ್ಲ ಅಂಜದ ಮಹಿಷ ದಸರಾ ಆಚರಣಾ ಸಮಿತಿಯು ಪ್ರತಿ ವರ್ಷದಂತೆ ಈ ವರ್ಷವು ಒಂದು ರಾಜ್ಯ ಮಟ್ಟದ ಮಹಿಸೂರನ ಕುರಿತು ವಿಚಾರ ಸಂಕಿರಣವನ್ನು ನಡೆಸುವುದರ ಮೂಲಕ ಮಹಿಷನ ಸತ್ಯ ಚರಿತ್ರೆಯನ್ನು ಸಾಬೀತು ಪಡಿಸುವುದರ ನಿಟ್ಟಿನಲ್ಲಿ ಮಹಿಷ ದಸರಾ ಆಚರಣೆಗೆ ಮುನ್ನುಡಿ ಬರೆದು ನಮ್ಮ ಮಹಿಷ ದಸರಾ ಆಚರಣೆಯು ಮೈಸೂರು ದಸರಾವನ್ನು ವಿರೋಧಿಸುತ್ತಿಲ್ಲ ಹಾಗೇ ಸುಳ್ಳು ಇತಿಹಾಸವನ್ನು ಇನ್ನೂ ಮುಂದೆ ನಾವು ಒಪ್ಪುವುದಿಲ್ಲ ಎಂಬ ಸ್ಪಷ್ಟ ನಿಲುವನ್ನು ಸಾಬೀತು ಮಾಡುತ್ತಿದೆ. ಮಹಿಷ ದಸರಾ ಆಚರಣೆ ಸಮಿತಿ.ಹಾಗಾಗಿ ಇತಿಹಾಸವನ್ನು ಅಧ್ಯಯನ ಮಾಡಿ ವಿಮರ್ಶೆ ಮಾಡಬೇಕಾದ ವಾಸ್ತವ ದಿನ ಇದಾಗಿದೆ. **–ಪವನ್ ಜಯರಾಂ. ಸಿದ್ದಯ್ಯಪುರ. ಚಾ।ನಗರ**

ಮದುವೆ ಕೇವಲ ದೇಹಕ್ಕೆ ಮಾತ್ರವಲ್ಲ, ಮನಸ್ಸಿಗೂ ಅಗತ್ಯ

ಮಾನ್ಯರೆ,

ದೇಶದ ಪ್ರಖ್ಯಾತ ವಕೀಲರೂ, ಮಾಜಿ ಸಾಲಿಸಿಟರ್ ಜನರಲ್ ಹಾಗೂ ಪದ್ಮ ಭೂಷಣ ಪ್ರಶಸ್ತಿ ಪುರಸ್ಕೃತರೂ ಸಹ ಆಗಿರುವ ಹರೀಶ್ ಸಾಳ್ವೆ ತಮ್ಮ 68ನೇ ವಯಸ್ಸಿನಲ್ಲಿ "ಟ್ರಿನ" ಎಂಬುವರನ್ನು ಇತ್ತೀಚೆಗೆ ಲಂಡನ್ನಿನಲ್ಲಿ ಮೂರನೇ ಮದುವೆಯಾಗಿರುವುದು ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ಪಡೆದಿದೆ. ಈ ಇಳಿ ವಯಸ್ಸಿನಲ್ಲಿ, ಮದುವೆಯಾಗುವುದು, ಅದು ಕೂಡ ಮೂರನೇ ಮದುವೆ ಎಂದು ಅನೇಕರು ಮೂಗು ಮುರಿಯಬಹುದು. ಆದರೆ ವಿವಿಧ ಕಾರಣಗಳಿಗಾಗಿ ವಯಸ್ಸು ಮೀರಿದವರು ಮದುವೆಯಾಗುತ್ತಿರುವುದನ್ನು ನಾವು ಕಾಣಬಹುದು.

ಬದುಕಿನಲ್ಲಿ ನೆಮ್ಮದಿಯ ನೆಲೆಯನ್ನು ಅರಸಿ ಅನೇಕರು ಇಂತಹ ಪ್ರಯತ್ನ ಮಾಡುತ್ತಾರೆ. ಮದುವೆ ಎಂಬುದು ಕೇವಲ ದೇಹಕ್ಕೆ ಮಾತ್ರವಲ್ಲ, ಮನಸ್ಸಿಗೂ ಅಗತ್ಯವಿರುತ್ತದೆ. ಅದೆಷ್ಟೋ ಸಂಸಾರಗಳಲ್ಲಿ ಗಂಡ ಹೆಂಡತಿಯರ ನಡುವೆ ಸರಿಪಡಿಸಲಾಗದ ವೈಮನಸ್ಯಗಳು ಅಥವಾ ಬಿರುಕುಗಳು ಉದ್ಭವಿಸಿ, ದಾಂಪತ್ಯ ವಿಚ್ಛೇದನದಲ್ಲಿ ಪರ್ಯಾವಸನಗೊಳ್ಳುತ್ತದೆ. ಒಮ್ಮೆ ಎಡವಿ ಬಿದ್ದವರು, ಸರಿಯಾದ ಮಾರ್ಗ ಕಂಡುಕೊಳ್ಳಲು ಎರಡನೇ ಬಾರಿ ಅಥವಾ ಮೂರನೇ ಬಾರಿ ಪ್ರಯತ್ನಿಸುವುದುಂಟು. ಅದೇನು ತಪ್ಪಲ್ಲ. ಮದುವೆ ಒಂದು ಸುಮಧುರ ಬಾಂಧವ್ಯವನ್ನು ಸೃಷ್ಟಿಸಬಲ್ಲದು. ನಾವು ನೋಡಿರುವ ಹಾಗೆ ಅನೇಕರು ತಮ್ಮ ಇಳಿ ವಯಸ್ಸಿನಲ್ಲಿ ಮದುವೆಯಾಗಿರುವುದುಂಟು. ಅದೇನೇ ಇರಲಿ ಹರೀಶ್ ಸಾಳ್ವೆಯವರಿಗೆ ಶುಭಾಷಯಗಳು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದ ನಗರ, ಮೈಸೂರು

ಮೈಸೂರಿನ ಯುದ್ಧ ಸ್ಮಾರಕ ಅರ್ಧಕ್ಕೆ ನಿಂತಿದೆ ಯಾಕೆ ಸಚಿವರೇ...?



ಮಾನ್ಯರೆ,

ಮೈಸೂರು ನಗರದ ಹುಣಸೂರು ರಸ್ತೆಯ ಪಕ್ಕದ ಹಳೆಯ ಜಿಲ್ಲಾಧಿಕಾರಿ ಕಚೇರಿ ಬಳಿಯ ಉದ್ಯಾನವನ ಜಾಗದಲ್ಲಿ ಮೈಸೂರೇ ಹೆಮ್ಮೆ ಪಡುವ ಯುದ್ಧ ಸ್ಮಾರಕ ನಿರ್ಮಾಣ ಕಾಮಗಾರಿ ಅರ್ಧಕ್ಕೆ ನಿಂತಿದೆ.

28/7/2022ರಂದು ಅಂದಿನ ಚಾಮರಾಜ ಕ್ಷೇತ್ರದ ಶಾಸಕರಾಗಿದ್ದ ಎಲ್.ನಾಗೇಂದ್ರ ಹುಣಸೂರು ಶಾಸಕರಾಗಿದ್ದ ಹೆಚ್.ಪಿ.ಮಂಜುನಾಥ್, ಎಂಎಲ್‌ಸಿ ಮಂಜೇಗೌಡರು, ಹಿಂದಿನ ಜಿಲ್ಲಾಧಿಕಾರಿ ಬಗಾದಿ ಗೌತಮ್, ಹಿಂದಿನ ಮೇಯರ್ ಸುನಂದಾ ಪಾಲನೇತ್ರ ಸೇರಿದಂತೆ ಹಲವು ಅಧಿಕಾರಿಗಳ ಸಮ್ಮುಖದಲ್ಲಿ ಗುದ್ದಲಿ ಪೂಜೆ ನಡೆದು ಇಲ್ಲಿಯವರೆಗೆ ಸ್ಮಾರಕ ನಿರ್ಮಾಣದ ಅಡಿಪಾಯದ ಕೆಲಸ ಮಾತ್ರ ಆಗಿದೆ. ಅಷ್ಟರಲ್ಲಿ ವಿಧಾನಸಭೆ ಚುನಾವಣೆ ಬಂತು. ಸರ್ಕಾರ ಬದಲಾವಣೆ ಆಯಿತು. ಜೊತೆಗೆ ಇಲ್ಲಿನ ಕೆಲಸವು ನಿಂತಿದೆ. ಪಕ್ಕದಲ್ಲಿ ಗ್ರಾನೈಟ್ ಕಲ್ಲುಗಳು ಬಿದ್ದಿವೆ. ಗಿಡಗಂಟೆಗಳು ಬೆಳೆದಿದೆ.

ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರೇ, ಸಂಸದರೇ, ಶಾಸಕರೇ... ದೇಶ ಕಾಯುವ ವೀರ ಯೋಧರಿಗೆ ಗೌರವ ಸಲ್ಲಿಸುವ ಕಾರ್ಯವಾದ ಈ ಯುದ್ಧ ಸ್ಮಾರಕದ ಕೆಲಸ ನಿಂತಿದೆ. ಕೂಡಲೇ ಪ್ರಾರಂಭಿಸಿ, ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ದೇಶವೇ ಹೆಮ್ಮೆ ಪಡುವ ಯುದ್ಧ ಸ್ಮಾರಕವನ್ನು ಜನತೆಗೆ ಅರ್ಪಿಸಿ.

– ಪಡುವಾರಹಳ್ಳಿ ಎಂ. ರಾಮಕೃಷ್ಣ, ವಕೀಲರು, ಮೈಸೂರು

ತಿದ್ದುಪಡಿ ಹಾಗೂ ಸ್ಪಷ್ಟೀಕರಣ

ಚಾಮರಾಜನಗರ ಜಿಲ್ಲೆಯ ಶ್ರೀ ಮಲೆ ಮಹದೇಶ್ವರಸ್ವಾಮಿ ಬೆಟ್ಟದ ಮಾದಪ್ಪನ ಸನ್ನಿಧಿಯ ಸಾಲೂರು ಮಠದಲ್ಲಿ ನಡೆದ ಸಾಮೂಹಿಕ ವಿವಾಹದಲ್ಲಿ 7 ಜೋಡಿಗಳು ಹಸೆಮಣೆ ಏರಿವೆ. ಈ ಸಂಬಂಧ ಆಗಸ್ಟ್ 30ರ 'ಮೈಸೂರು ಮಿತ್ರ' ಸಂಚಿಕೆಯಲ್ಲಿ ವರದಿ ಪ್ರಕಟವಾಗಿದ್ದು, ಇದರಲ್ಲಿ ಒಬ್ಬರ ಹೆಸರನ್ನು ಮೈಸೂರಿನ **ಹೊರಳವಾಡಿ ರಮ್ಯಾ** ಎಂಬುದರ ಬದಲು **ಮೈಸೂರಿನ ವರಲವಾಡಿ ರಮ್ಯಾ** ಎಂದು ಓದಿಕೊಳ್ಳುವುದು. – ಸಂ.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಶ್ವೇತಾಶ್ವತರವು ಒಂದು ಶೈವೋಪನಿಷತ್ತು

ಈಶಾವಾಸ್ಯ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕ ಎಂಬ ಪ್ರಾಚೀನ ಹತ್ತು ಉಪ ನಿಷತ್ತುಗಳು ಯಾವುದೇ ಒಂದು ದೇವತೆಯ ಪರಮತ್ವವನ್ನು ಹೇಳಿದಂತೆ ಕಂಡು ಬರುವುದಿಲ್ಲ. ಅವೆಲ್ಲ ವಿಷ್ಣು ಪರವೆಂದು ವೈಷ್ಣವ ಮತದವರೂ ಶಿವಪರವೆಂದು ಶೈವರೂ ಅರ್ಥೈಸಬಹುದಾದರೂ ಅವುಗಳಲ್ಲಿ ನಿರ್ದಿಷ್ಟವಾಗಿ ಶಬ್ದತಃ ಹಾಗೆ ಪ್ರತಿಪಾದಿತವಾಗಿಲ್ಲ. ಆದರೆ ಮಹಾನಾರಾಯಣೋಪ ನಿಷತ್ತಿನಲ್ಲಿ ಸ್ಪಷ್ಟವಾಗಿ 'ದೇವ ಏಕೋ ನಾರಾಯಣಃ' ಎಂದು ಹೇಳಿದ್ದಾರೆ. ಹಾಗೆ ಗಣಪತ್ಯಥರ್ವ ಶೀರ್ಷೋಪನಿಷತ್ತಿನಲ್ಲಿ ಗಣಪತಿಯೇ ಪರಬ್ರಹ್ಮ ಎಂದು ಘಂಟಾ ಘೋಷವಾಗಿ ಹೇಳಿರುವುದುಂಟು. ಅದೇ ರೀತಿಯಲ್ಲಿ ಪರೀಕ್ಷಿಸಿ ನೋಡಿದಾಗ ಶ್ವೇತಾಶ್ವತರೋಪನಿಷತ್ತು ಮುಖ್ಯವಾಗಿ ಪ್ರತಿಪಾದಿಸಿರುವುದು ಶಿವನನ್ನೇ ಎಂದು ಹೇಳಬಹುದು. ಅದನ್ನು ಸಮರ್ಥಿಸಲು ಅದರ ಕೆಲವು ಮಂತ್ರಗಳನ್ನು ವೀಕ್ಷಿಸೋಣ :

ಕ್ಷರಂ ಪ್ರಧಾನಮಮೃತಾಕ್ಷರಂ ಹರಃ
ಕ್ಷರಾತ್ಮಾನಾವೀಶತೇ ದೇವ ಏಕಃ।
ತಸ್ಯಾಭಿಧ್ಯಾನಾದ್ ಯೋಜನಾತ್
ತತ್ತ್ವಭಾವಾದ್
ಭೂಯಶ್ಚಾಂತೇ ವಿಶ್ವಮಾಯಾನಿವೃತ್ತಿಃ॥ (1.10)

ಈ ಮಂತ್ರದ ಅರ್ಥ –ಪ್ರಧಾನವು (ಪ್ರಕೃತಿಯು) ಕ್ಷರ, ಎಂದರೆ ವಿನಾಶ ಸ್ವಭಾವವನ್ನುಳ್ಳದ್ದು. ಅಮೃತರೂಪನೂ ಅಕ್ಷರನೂ (ಬದಲಾವಣೆಯಿಲ್ಲದವನೂ) ಹರನು. ಕ್ಷರವಾದ ಪ್ರಪಂಚವನ್ನೂ ಜೀವಾತ್ಮರನ್ನೂ ಆಳುವ ದೇವನು ಒಬ್ಬನೇ ಹರನು. ಅವನ ಧ್ಯಾನದಿಂದ, ಅವನನ್ನು ಅನುಸಂಧಾನ ವಿಷಯವಾಗಿ, ತತ್ತ್ವವೆಂದು ತಿಳಿದುಕೊಳ್ಳುವುದರಿಂದ ಸಮಸ್ತ ಮಾಯೆ ದೂರವಾಗುತ್ತದೆ.

ಇಲ್ಲಿ ಸ್ಪಷ್ಟವಾಗಿ 'ಹರ' ಎಂಬ ಶಬ್ದವಿರುವುದನ್ನು ಗಮನಿಸಬೇಕು. ಇನ್ನೊಂದು ಮಂತ್ರದಲ್ಲಿ ರುದ್ರ ಶಬ್ದವಿದೆ.

ಏಕೋ ಹಿ ರುದ್ರೋ ನ ದ್ವಿತೀಯಾಯ ತಸ್ಥು
ಯ ಇಮಾನ್ ಲೋಕಾನ್
ಈ ಶತ ಈಶನೀಭಿಃ।
ಪ್ರತ್ಯಗ್ ಜನಾಂಸ್ತಿಷ್ಠತಿ
ಸಂಚುಕೋಚಾಂತಕಾಲೇ
ಸಂಸೃಜ್ಯ ವಿಶ್ವಾ ಭುವನಾನಿ ಗೋಪಾಃ॥ (3.2)

ಈ ಮಂತ್ರದ ಅರ್ಥ – ರುದ್ರನು ಒಬ್ಬನೇ. ಜ್ಞಾನಿಗಳು ಎರಡನೆಯವನನ್ನು ಒಪ್ಪುವುದಿಲ್ಲ. ಆ ರುದ್ರನು ತನ್ನ ಶಕ್ತಿಗಳಿಂದ ಈ ಲೋಕಗಳನ್ನು ಆಳುತ್ತಾನೆ. ಅವನೇ ಜನರಲ್ಲಿ ಅಂತರ್ಯಾಮಿಯಾಗಿ ಇರುತ್ತಾನೆ. ಅವನೇ ಎಲ್ಲ ಜಗತ್ತುಗಳನ್ನು ಸೃಷ್ಟಿಸಿ ಕಾಪಾಡುತ್ತಾನೆ. ಅಂತಕಾಲದಲ್ಲಿ, ಎಂದರೆ ಪ್ರಳಯ ಕಾಲದಲ್ಲಿ ಜಗತ್ತನ್ನೆಲ್ಲ ತನ್ನಲ್ಲಿ ಸೆಳೆದುಕೊಳ್ಳುತ್ತಾನೆ.

ಈ ಪದ್ಯದಲ್ಲಿ ಭಗವಂತನು ರುದ್ರನೇ ಎಂದು ಹೇಳಲಾಗಿದೆ. ಇದೇ ರೀತಿಯಾಗಿ ಇನ್ನೊಂದು ಮಂತ್ರವೂ ಹೇಳಿದೆ–

ಯೋ ದೇವಾನಾಂ ಪ್ರಭವಶ್ಚೋದ್ಭವಶ್ಚ
ವಿಶ್ವಾಧಿಪೋ ರುದ್ರೋ ಮಹರ್ಷಿಃ।
ಹಿರಣ್ಯಗರ್ಭಂ ಜನಯಾಮಾಸ ಪೂರ್ವಂ
ಸ ನೋ ಬುದ್ಧ್ಯಾ ಶುಭಯಾ ಸಂಯುನಕ್ತು॥ (3.4)

ಇಂದ್ರಾದಿ ದೇವತೆಗಳ ಹುಟ್ಟಿಗೆ ಮತ್ತು ಮಹಿಮೆಗೆ ಕಾರಣನೂ ಜಗತ್ತಿಗೆ ಒಡೆಯನೂ ಮಹರ್ಷಿಯೂ ಆದ ರುದ್ರನು ಪೂರ್ವದಲ್ಲಿ ಹಿರಣ್ಯಗರ್ಭನನ್ನು ಸೃಷ್ಟಿಸಿದನು. ಆ ರುದ್ರನು ನಮಗೆ ಒಳ್ಳೆಯ ಬುದ್ಧಿಯನ್ನು ಕೊಡಲಿ.

ಇಲ್ಲೂ ರುದ್ರನೇ ಸಕಲ ದೇವತೆಗಳ ಮೂಲನೆಂದು ಹೇಳಿದೆ.

ಇನ್ನೊಂದು ಮಂತ್ರ –

ಯಾ ತೇ ರುದ್ರ ಶಿವಾ
ತನೂರಘೋರಾಪಾಪಕಾಶಿನೀ।
ತಯಾ ನಸ್ತನುವಾ ಶಂತಮಯಾ
ಗಿರಿಶಂತಾಭಿಚಾಕ ಶೀಹಿ॥ (3.5)

ಹೇ ರುದ್ರ, ಬೆಟ್ಟಗಳಲ್ಲಿದ್ದು ಜನರಿಗೆ ಸುಖವನ್ನುಂಟು ಮಾಡುವವನೇ, ಘೋರವಲ್ಲದ, ಪುಣ್ಯದಿಂದ ಶೋಭಿಸುವ, ಆನಂದದಿಂದ ತುಂಬಿದ ನಿನ್ನ ಶರೀರದಿಂದ ನಮ್ಮನ್ನು ಅನುಗ್ರಹಿಸು.

ಇಲ್ಲಿ ರುದ್ರ, ಗಿರಿಶಂತ ಎಂಬ ಶಬ್ಧಗಳು ಶಿವನನ್ನೇ ಉದ್ದೇಶಿಸಿ ಹೇಳಲ್ಪಟ್ಟಿವೆ ಎಂಬುದು ಸ್ಪಷ್ಟ ನಾಲ್ಕನೆಯ ಅಧ್ಯಾಯದ ಒಂದು ಪ್ರಸಿದ್ಧ ಮಂತ್ರ–

ಮಾಯಾಂ ತು ಪ್ರಕೃತಿಂ
ವಿದ್ಯಾನ್ಮಾಯಿನಂ ತು ಮಹೇಶ್ವರಮ್ ।
ತಸ್ಯಾವಯವಭೂತೈಸ್ತು ವ್ಯಾಪ್ತಂ
ಸರ್ವಮಿದಂ ಜಗತ್ ॥ (4.10)

ಪ್ರಕೃತಿಯನ್ನೇ ಮಾಯೆಯೆಂದೂ ಮಹೇಶ್ವರನನ್ನೇ ಮಾಯಾವಿಯೆಂದೂ ತಿಳಿಯಬೇಕು. ಅವನ ಅವಯವ (ಅಂಶ)ಗಳಾದ ಜೀವರಿಂದ ಈ ಜಗತ್ತು ಆವರಿಸಲ್ಪಟ್ಟಿದೆ.

ಈ ಮಂತ್ರದಲ್ಲಿರುವ ಮಹೇಶ್ವರ ಎಂಬ ಶಬ್ದವು ಶಿವನನ್ನೇ ಹೇಳುತ್ತದೆ. 'ಮಹೇಶ್ವರ ಸ್ತ್ರ್ಯಂಬಕ ಏವ ನಾಪರಃ' ಎಂದು ಮಹಾಕವಿ ಕಾಳಿದಾಸನೂ ಹೇಳಿದ್ದಾನೆ. ಮುಕ್ಕಣ್ಣನಾದ ಶಿವನನ್ನೇ ಇಲ್ಲಿ ಉಪನಿಷತ್ತು ವರ್ಣಿಸಿದೆ.

ಐದನೆಯ ಅಧ್ಯಾಯದಲ್ಲಿ ಮತ್ತೆ ಶಿವಶಬ್ದದಿಂದಲೇ ಭಗವಂತನನ್ನು ಶ್ವೇತಾಶ್ವತರೋಪ ನಿಷತ್ತು ಸ್ತುತಿಸಿದೆ.

ಭಾವಗ್ರಾಹ್ಯಮನೀಡಾಖ್ಯಂ
ಭಾವಾಭಾವಕರಂ ಶಿವಮ್ ।
ಕಲಾಸರ್ಗಕರಂ ದೇವಂ ಯೇ ವಿದುಸ್ತೇ
ಜಹುಸ್ತನುಮ್ ॥ (5.14)

ಭಾವನಾ ಗೋಚರನೂ ಅನೀಡ (ಗೂಡಿಲ್ಲದವನು) ಎಂಬ ಹೆಸರಿನವನೂ ಇರುವುದನ್ನೂ ಇಲ್ಲದುದನ್ನೂ ಸೃಷ್ಟಿಸುವ, ಕಲಾಸೃಷ್ಟಿ ಯನ್ನು ಮಾಡುವ ದೇವರಾದ ಶಿವನನ್ನು ಯಾರು ಅರಿತಿರುವರೋ ಅವರು ಶರೀರ ಸಂಬಂಧವನ್ನು (ಎಂದರೆ ಪುನರ್ಜನ್ಮವನ್ನು) ತ್ಯಜಿಸುವರು.

ಆರನೆಯ ಅಧ್ಯಾಯದಲ್ಲಿ –

ತಮೀಶ್ವರಾಣಾಂ ಪರಮಂ ಮಹೇಶ್ವರಂ
ತಂ ದೇವತಾನಾಂ ಪರಮಂ ಚ ದೈವತಮ್ ।
ಪತಿಂ ಪತೀನಾಂ ಪರಮಂ ಪರಸ್ತಾದ್
ವಿದಾಮ ದೇವಂ ಭುವನೇಶಮೀಡ್ಯಮ್। (6.7)

ಎಂಬ ಮಂತ್ರವಿದೆ. ಒಡೆಯರಿಗೆ ಒಡೆಯನೂ, ಅತ್ಯುನ್ನತ ಮಹೇಶ್ವರನೂ, ದೇವತೆಗಳಿಗೂ ಶ್ರೇಷ್ಠ ದೇವತೆಯಾದವನೂ, ಎಲ್ಲಾ ಪ್ರಜಾಪತಿಗಳ ಪತಿಯೆನಿಸಿದವನೂ, ಎಲ್ಲರಿಗಿಂತ ಮೇಲಿನವನೂ, ಪ್ರಪಂಚದ ಸ್ವಾಮಿಯೂ, ಸ್ತುತ್ಯರ್ಹನೂ ಆದ ದೇವನನ್ನು ಅರಿತುಕೊಳ್ಳೋಣ – ಎಂದು ಅದರ ತಾತ್ಪರ್ಯ.

ಹೀಗೆ ಶ್ವೇತಾಶ್ವತರೋಪನಿಷತ್ತಿನಲ್ಲಿ ಪರಬ್ರಹ್ಮನನ್ನು ಶಿವ, ರುದ್ರ, ಮಹೇಶ್ವರ, ಈಶ ಮುಂತಾದ ಪದಗಳಿಂದಲೇ ವರ್ಣಿಸಿರುವುದರಿಂದ ವಿಷ್ಣು, ನಾರಾಯಣ, ಗಣೇಶ, ಸ್ಕಂದ ಇತ್ಯಾದಿ ಇತರ ದೇವತಾವಾಚಕ ಪದಗಳು ಇಲ್ಲಿ ಕಾಣಬರುದಿರುವುದರಿಂದ ಇದು ಶೈವೋಪನಿಷತ್ತು ಎನ್ನಬಹುದು.

ಆದರೆ ಈ ವಿಷಯದಲ್ಲಿ ಭಿನ್ನಾಭಿಪ್ರಾಯವೂ ಇದೆ. ಈ ಉಪನಿಷತ್ತನ್ನು ಕನ್ನಡಕ್ಕೆ ಅನುವಾದಿಸಿರುವ ಸ್ವಾಮಿ ಆದಿದೇವಾನಂದರು ತಮ್ಮ ಮುನ್ನುಡಿಯಲ್ಲಿ ಹೀಗೆಂದಿದ್ದಾರೆ "ಈ ಉಪನಿಷತ್ತು ಎಷ್ಟು ಸ್ವಾರಸ್ಯವುಳ್ಳದ್ದಾಗಿದೆಯೋ, ಅರಿತುಕೊಳ್ಳಲು ಅಷ್ಟೇ ಕಷ್ಟವಾಗಿದೆ. ಇದರಲ್ಲಿ ಅನೇಕ ವೈಶಿಷ್ಟ್ಯಗಳಿವೆ : ಪರಮಾತ್ಮನನ್ನು ಹರ (1.10), ರುದ್ರ (3.2, 4), ಶಿವ (3.14, 4.10) ಮೊದಲಾದ ಹೆಸರುಗಳಿಂದ ಕರೆದಿರುವುದು ಮೊದಲನೆಯದು. ಆದ ಕಾರಣ ಇದು ಶೈವ ಪಂಥಕ್ಕೆ ಸೇರಿದ ಒಂದು ಉಪನಿಷ ತ್ತೆಂದು ಹೇಳಲು ಅವಕಾಶವಿದೆ. ಇಂಥ ಅಭಿಪ್ರಾಯವು ಸರಿಯಲ್ಲ. ಏಕೆಂದರೆ ಆಗಿನ ಕಾಲದಲ್ಲಿ ಆಗಮಗಳು ಇನ್ನೂ ಹುಟ್ಟಿರಲಿಲ್ಲ. ಪರಮಾತ್ಮನನ್ನು ಬಗೆ ಬಗೆಯ ಹೆಸರುಗಳಿಂದ ಕರೆಯುತ್ತಿದ್ದರು. ಒಂದೊಂದು ನಾಮವು ಒಂದೊಂದು ವಿಶೇಷ ಗುಣದ ಪ್ರತೀಕವಾಗಿದೆ. ಹರ, ರುದ್ರ ಮೊದಲಾದ ಹೆಸರುಗಳಂತೆಯೇ ಭಗವತ್ (3.14) ಅಗ್ನಿ ಆದಿತ್ಯ ವಾಯು ಮೊದಲಾದ ಶಬ್ದಗಳಿಂದ (4.2) ಪರಮಾತ್ಮನನ್ನು ಸಂಬೋಧಿಸಿರುವುದನ್ನು ಇಲ್ಲಿಯೇ ನೋಡಬಹುದು. ಈ ಉಪನಿಷತ್ತು ಶೈವಪಂಥಕ್ಕೆ ಸೇರಿದ್ದಾಗಿದ್ದರೆ ಶೈವರಲ್ಲದವರು ಇದರಿಂದ ಮಂತ್ರಗಳನ್ನು ಪ್ರಮಾಣವಾಕ್ಯಗಳಾಗಿ ಉದಾಹರಿಸುತ್ತಿರಲಿಲ್ಲ".

ಉಪನಿಷತ್ತುಗಳ ಕಾಲದಲ್ಲಿ ಶೈವ–ವೈಷ್ಣವ ಭೇದವಿರಲಿಲ್ಲ. ಅನಂತರ ಈ ಭೇದವುಂಟಾದಾಗ, ತಾವು ಪೂಜಿಸುವ ದೇವರೇ ಹೆಚ್ಚೆಂಬ ವಾದಕ್ಕೆ ಸಮರ್ಥವಾಗಿ ಉಪನಿಷದ್ವಾಕ್ಯಗಳನ್ನು ಹಲವರು ಬಳಸಿಕೊಂಡರೆಂದು ತೋರುತ್ತದೆ. ಯಾವ ಹೆಸರಿನಿಂದ ಪೂಜಿಸಿದರೂ ಯಾವ ರೂಪವನ್ನು ಅರ್ಚಿಸಿದರೂ ಅವೆಲ್ಲವೂ ಸೇರುವುದು ಒಬ್ಬ ದೇವರಿಗೇ. ಅದರಲ್ಲೇ ಶ್ರದ್ಧೆ ಇರಬೇಕು ಅಷ್ಟೆ. ಭಗವಂತನೇ ಗೀತೆಯಲ್ಲಿ ಹೇಳಿರುವಂತೆ–

ಯೋ ಯೋ ಯಾಂ ಯಾಂ ತನುಂ ಭಕ್ತಃ
ಶ್ರದ್ಧಯಾರ್ಚಿತುಮಿಚ್ಛತಿ ।
ತಸ್ಯ ತಸ್ಯಾಚಲಾಂ ಶ್ರದ್ಧಾಂ
ತಾಮೇವ ವಿದಧಾಮ್ಯ ಹಮ್ ॥

(ಯಾರು ಯಾವ ಮೂರ್ತಿಯನ್ನು ಅರ್ಚಿಸಲು ಅಪೇಕ್ಷಿಸುವರೋ, ಅವರಿಗೆ ಆ ಮೂರ್ತಿಯಲ್ಲೇ ಅಚಲವಾದ ಶ್ರದ್ಧೆ ಉಂಟಾಗುವಂತೆ ನಾನು ಮಾಡುವೆನು). ಮತ್ತೊಂದು ಸುಭಾಷಿತದಲ್ಲಿ ಹೇಳಿರುವಂತೆ –

ಹರ ಏವ ಹರಿಃ ಸಾಕ್ಷಾತ್
ಹರಿರೇವ ಹರ: ಸ್ವಯಮ್ ।
ಅದಂತೇದಂತರಚನಾ
ಫಲಭೇದಾಯನಾರ್ಹತಿ॥

ಹರನೇ ಹರಿ, ಹರಿಯೇ ಹರ. ಪದವನ್ನು ಅಕಾರಾಂತವಾಗಿ ಮಾಡಿದರೆ ಹರ, ಇಕಾರಾಂತವಾಗಿ ಮಾಡಿದರೆ ಹರಿ. ಅದರಿಂದ ಫಲಭೇದ ಇಲ್ಲ. ಎಲ್ಲವೂ ಆ ನಾರಾಯಣನೇ. ವಿಶ್ವರೂಪನಾಗಿರುವ ಆ ಹರಿಯ ನಾಮ–ರೂಪಗಳನ್ನಿಟ್ಟು ಕೊಂಡು ಕಲಹ ಮಾಡುವುದು ಅನಪೇಕ್ಷಿತ.

ಲಂಕಾ ಗೆದ್ದ ಭಾರತ ಏಷ್ಯಾಕಪ್ ಫೈನಲ್‌ಗೆ



ಕೊಲಂಬೊ, ಸೆ.12– ನಾಯಕ ರೋಹಿತ್ ಶರ್ಮಾ ಅವರ ಅರ್ಧಶತಕ ಹಾಗೂ ಕುಲದೀಪ್ ಯಾದವ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಭಾರತ ಶ್ರೀಲಂಕಾ ವಿರುದ್ಧ 41ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಏಷ್ಯಾಕಪ್ ಪಂದ್ಯಾವಳಿಯ ಫೈನಲ್ ಪ್ರವೇಶಿಸಿದೆ.

ಇಲ್ಲಿನ ಆರ್.ಪ್ರೇಮದಾಸ ಮೈದಾನದಲ್ಲಿ ನಡೆದ ಏಷ್ಯಾಕಪ್ ಪಂದ್ಯಾವಳಿಯ ಸೂಪರ್–4 ಹಂತದ ಪಂದ್ಯದಲ್ಲಿ ಮಂಗಳವಾರ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತಕ್ಕೆ ನಾಯಕ ರೋಹಿತ್ ಶರ್ಮಾ ಹಾಗೂ ಶುಭ್‌ಮನ್ ಗಿಲ್ ಮೊದಲ ವಿಕೆಟ್‌ಗೆ 80 ರನ್ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಆದರೆ ಈ ವೇಳೆ ದಾಳಿಗಿಳಿದ ಯುವ ಸ್ಪಿನ್ನರ್ ದುನಿತ್ ವೆಲ್ಲಲಾಗೆ 19 ರನ್ ಗಳಿಸಿದ್ದ ಗಿಲ್ ಅವರನ್ನು ಬೌಲ್ಡ್ ಮಾಡಿದರು. ಅಲ್ಲದೇ ದುನಿತ್ ಮರು ಓವರ್‌ನಲ್ಲೇ 3 ರನ್ ಗಳಿಸಿದ್ದ ಕೊಹ್ಲಿ ಹಾಗೂ ಇದರ ಬೆನ್ನಲ್ಲೇ ಅರ್ಧಶತಕ ಸಿಡಿಸಿ, 53 ರನ್ ಗಳಿಸಿ ಉತ್ತಮವಾಗಿ ಆಡುತ್ತಿದ್ದ ರೋಹಿತ್ ಅವರನ್ನು ಕ್ಲೀನ್ ಬೌಲ್ಡ್ ಮಾಡಿದರು. ಈ ವೇಳೆ ಕ್ರೀಸ್‌ಗೆ ಆಗಮಿಸಿದ ಕನ್ನಡಿಗ ಕೆ.ಎಲ್. ರಾಹುಲ್ ಹಾಗೂ ಇಶನ್ ಕಿಶನ್ ಪ್ರತಿರೋಧ ಒಡ್ಡಿದರಾದರೂ ಲಂಕಾ ಸ್ಪಿನ್ನರ್‌ಗಳಿಗೆ ಶರಣಾದರು. ರಾಹುಲ್ 39 ರನ್ ಗಳಿಸಿ ಔಟಾದರೆ, ಇಶನ್ ಕಿಶನ್ 33 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ಅಂತಿಮ ಓವರ್‌ಗಳಲ್ಲಿ ಅಕ್ಷರ್ ಪಟೇಲ್ 26 ರನ್ ಗಳಿಸುವ ಮೂಲಕ ತಂಡದ ಮೊತ್ತವನ್ನು 200ರ ಗಡಿ ದಾಟಿಸಿದರು. ಅಂತಿಮವಾಗಿ ಭಾರತ 49.1 ಓವರ್‌ಗಳಲ್ಲಿ 213 ರನ್ ಗಳಿಸಿ ಆಲೌಟ್ ಆಯಿತು. ಶ್ರೀಲಂಕಾ ಪರ ದುನಿತ್ ವೆಲ್ಲಲಾಗೆ 5, ಅಸಲಂಕಾ 4, ಮಹೇಶ್ ತೀಕ್ಷಣ ಒಂದು ವಿಕೆಟ್ ಕಬಳಿಸಿದರು.

214ರನ್‌ಗಳ ಸುಲಭ ಗುರಿ ಬೆನ್ನತ್ತಿದ ಶ್ರೀಲಂಕಾ ತಂಡ 25 ರನ್ ಆಗುವಷ್ಟರಲ್ಲೇ 6 ರನ್ ಗಳಿಸಿದ್ದ ಪಾತುಮ್ ನಿಸ್ಸಂಕಾ, ದಿಮುತ್ ಕರುಣರತ್ನೆ 2 ಹಾಗೂ 15 ರನ್ ಗಳಿಸಿದ್ದ ಕುಶಾಲ್ ಮೆಂಡಿಸ್ ವಿಕೆಟ್ ಕಳೆದುಕೊಂಡಿತು. ಬಳಿಕ ದಾಳಿಗಿಳಿದ ಕುಲ್ದೀಪ್ ಯಾದವ್ 17 ರನ್ ಗಳಿಸಿದ್ದ ಸದೀರ ಸಮರವಿಕ್ರಮ ಹಾಗೂ 22ರನ್ ಗಳಿಸಿದ್ದ ಚರಿತ್ ಅಸಲಂಕಾ ವಿಕೆಟ್ ಉರುಳಿಸಿದರು. ನಂತರ ಬಂದ ದಸುನ್ ಶಾನಕ 9 ರನ್ ಗಳಿಸಿ ಜಡೇಜಾಗೆ ವಿಕೆಟ್ ಒಪ್ಪಿಸಿದರು. ಈ ಹಂತದಲ್ಲಿ ಜೊತೆಗೂಡಿದ ಧನಂಜಯ ಡಿಸಿಲ್ವಾ ಹಾಗೂ ದುನಿತ್ ವೆಲ್ಲಾಲಗೆ ಅರ್ಧಶತಕದ ಜೊತೆ ಯಾಟವಾಡಿದರು. ಅಲ್ಲದೆ ತಂಡದ ಮೊತ್ತವನ್ನು 150 ರ ಗಡಿ ದಾಟಿಸಿದರು. ಈ ವೇಳೆ 41 ರನ್ ಗಳಿಸಿ ಉತ್ತಮವಾಗಿ ಆಡುತ್ತಿದ್ದ ಧನಂಜಯ ಡಿಸಿಲ್ವಾ ವಿಕೆಟ್ ಒಪ್ಪಿಸಿದರು. ಬೌಲಿಂಗ್‌ನಲ್ಲಿ ಮಿಂಚಿದ್ದ ದುನಿತ್ ವೆಲ್ಲಲಾಗೆ ಬ್ಯಾಟಿಂಗ್‌ನಲ್ಲೂ 42 ರನ್ ಗಳಿಸಿ ಮಿಂಚಿ ಅಜೇಯರಾಗಿ ಉಳಿದರು. ಅಂತಿಮವಾಗಿ ಶ್ರೀಲಂಕಾ 41.3 ಓವರ್‌ಗಳಲ್ಲಿ 172 ರನ್‌ಗಳಿಗೆ ಆಲೌಟ್ ಆಯಿತು. ಭಾರತದ ಪರ ಕುಲದೀಪ್ ಯಾದವ್ 4, ಬುಮ್ರಾ, ರವೀಂದ್ರ ಜಡೇಜಾ ತಲಾ 2, ಹಾರ್ದಿಕ್ ಪಾಂಡ್ಯ, ಮೊಹಮ್ಮದ್ ಸಿರಾಜ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಲಂಕಾ ಪರ ದುನಿತ್ ವೆಲ್ಲಲಾಗೆ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಏಕದಿನ ಕ್ರಿಕೆಟ್‌ನಲ್ಲಿ ರೋಹಿತ್ ಶರ್ಮಾ 10 ಸಾವಿರ ರನ್ ದಾಖಲೆ



ಕೊಲಂಬೊ: ಏಕದಿನ ಕ್ರಿಕೆಟ್‌ನಲ್ಲಿ ಸಾಕಷ್ಟು ದಾಖಲೆ ಬರೆದಿರುವ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಇದೀಗ ಮತ್ತೊಂದು ಮೈಲಿಗಲ್ಲು ಸ್ಥಾಪಿಸಿದ್ದಾರೆ. ಹಿಟ್‌ಮ್ಯಾನ್ ಖ್ಯಾತಿಯ ರೋಹಿತ್ ಶರ್ಮಾ ಒಡಿಐ ಕ್ರಿಕೆಟ್‌ನಲ್ಲಿ 10 ಸಾವಿರ ರನ್ ಪೂರ್ಣಗೊಳಿಸಿದ್ದಾರೆ.

ಇಲ್ಲಿನ ಆರ್.ಪ್ರೇಮದಾಸ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶ್ರೀಲಂಕಾ ವಿರುದ್ಧ ನಡೆದ ಏಷ್ಯಾ ಕಪ್ ಸೂಪರ್–4ರ ಪಂದ್ಯದಲ್ಲಿ ರೋಹಿತ್ ಶರ್ಮಾ ಈ ಸಾಧನೆ ಮಾಡಿದ್ದಾರೆ. ಪಂದ್ಯದಲ್ಲಿ ರೋಹಿತ್ ಶರ್ಮಾ 23 ರನ್ ಗಳಿಸುತ್ತಿದ್ದಂತೆ ಏಕದಿನ ಕ್ರಿಕೆಟ್‌ನಲ್ಲಿ 10000 ರನ್‌ಗಳನ್ನು ಪೂರ್ಣಗೊಳಿಸಿದರು. ಒಡಿಐ ಕ್ರಿಕೆಟ್‌ನಲ್ಲಿ ಈ ಸಾಧನೆ ಮಾಡಿದ ಭಾರತದ 6ನೇ ಬ್ಯಾಟ್ಸ್‌ಮನ್ ಎಂಬ ಖ್ಯಾತಿಗೆ ಹಿಟ್‌ಮ್ಯಾನ್ ಭಾಜನರಾದರು. ಅಷ್ಟೇ ಅಲ್ಲದೆ ವಿರಾಟ್ ಕೊಹ್ಲಿ ಬಳಿಕ ಏಕದಿನ ಕ್ರಿಕೆಟ್‌ನಲ್ಲಿ ಅತ್ಯಂತ ವೇಗವಾಗಿ 10 ಸಾವಿರ ರನ್‌ಗಳನ್ನು ಗಳಿಸಿದ 2ನೇ ಬ್ಯಾಟ್ಸ್‌ಮನ್ ಎಂಬ ದಾಖಲೆ ಕೂಡ ರೋಹಿತ್ ಬರೆದಿದ್ದಾರೆ.

3ನೇ ಭಾರತೀಯ ಆರಂಭಿಕ: ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಹಾಗೂ ಸೌರವ್ ಗಂಗೂಲಿ ಬಳಿಕ ಏಕದಿನ ಕ್ರಿಕೆಟ್‌ನಲ್ಲಿ 10 ಸಾವಿರ ರನ್ ಗಳಿಸಿದ 3ನೇ ಆರಂಭಿಕ ಬ್ಯಾಟ್ಸ್‌ಮನ್ ಎಂಬ ಕೀರ್ತಿಗೂ ರೋಹಿತ್ ಶರ್ಮಾ ಭಾಜನರಾಗಿದ್ದಾರೆ. 2007ರಲ್ಲಿ ಐರ್ಲೆಂಡ್ ವಿರುದ್ಧ ಬೆಲ್‌ಫಾಸ್ಟ್‌ನಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ರೋಹಿತ್ ಶರ್ಮಾ, ತಮ್ಮ ಏಕದಿನ ಕ್ರಿಕೆಟ್ ವೃತ್ತಿ ಜೀವನದಲ್ಲಿ 30 ಶತಕಗಳು ಹಾಗೂ 50 ಅರ್ಧ ಶತಕಗಳನ್ನು ಸಿಡಿಸಿದ್ದಾರೆ.

ಏಕದಿನ ಕ್ರಿಕೆಟ್‌ನಲ್ಲಿ ವೇಗವಾಗಿ 10 ಸಾವಿರ ರನ್ ಗಳಿಸಿದ ಬ್ಯಾಟ್ಸ್‌ಮನ್‌ಗಳು

ವಿರಾಟ್ ಕೊಹ್ಲಿ (ಭಾರತ):	205 ಇನಿಂಗ್ಸ್‌ಗಳು
ರೋಹಿತ್ ಶರ್ಮಾ (ಭಾರತ):	241 ಇನಿಂಗ್ಸ್‌ಗಳು
ಸಚಿನ್ ತೆಂಡೂಲ್ಕರ್ (ಭಾರತ):	259 ಇನಿಂಗ್ಸ್‌ಗಳು
ಸೌರವ್ ಗಂಗೂಲಿ (ಭಾರತ):	263 ಇನಿಂಗ್ಸ್‌ಗಳು
ರಿಕಿ ಪಾಂಟಿಂಗ್ (ಆಸ್ಟ್ರೇಲಿಯಾ):	266 ಇನಿಂಗ್ಸ್‌ಗಳು

ಯೋಜನೆ ಅನುಷ್ಠಾನಕ್ಕೆ ಮಾಜಿ ಶಾಸಕ ರಾಮದಾಸ್ ರಾಜ್ಯ ಸಂಚಾಲಕರಾಗಿ ನೇಮಕ ಶುಭಾಶಯದೊಂದಿಗೆ ಸರ್ಕಾರದ ಸೌಲಭ್ಯ ಕಲ್ಪಿಸಲು ಪತ್ರಿಕಾ ವಿತರಕರ ಸಂಘ ಮನವಿ

ಮೈಸೂರು,ಸೆ.12(ಪಿಎಂ)– ಪ್ರಧಾನ ಮಂತ್ರಿ ಸ್ವನಿಧಿಯಿಂದ ಸನ್ಮಾನ್‌ವರೆಗಿನ 9 ಯೋಜನೆಗಳ ಅನುಷ್ಠಾನ ಸಂಬಂಧ ಕರ್ನಾಟಕ ರಾಜ್ಯದ ಸಂಚಾಲಕರಾಗಿ ನೇಮಕಗೊಂಡಿರುವ ಮಾಜಿ ಶಾಸಕ ಎಸ್.ಎ.ರಾಮದಾಸ್ ಅವರಿಗೆ ಶುಭಾಶಯ ಕೋರಿರುವ ಮೈಸೂರು ಜಿಲ್ಲಾ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘವು, ಪತ್ರಿಕಾ ವಿತರಕರಿಗೆ ಸರ್ಕಾರದ ಸೌಲಭ್ಯ ಕಲ್ಪಿಸಲು ಹೆಚ್ಚಿನ ರೀತಿ ಸಹಕಾರ ನೀಡಬೇಕೆಂದು ಕೋರಿದೆ. ರಾಮದಾಸ್ ಅವರು ಪತ್ರಿಕಾ ವಿತರಕರ ಬಗ್ಗೆ ಚೆನ್ನಾಗಿ ತಿಳಿದವರು. ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಅನುಭವಿಗಳಾಗಿದ್ದಾರೆ. ಹಾಗಾಗಿ ಅವರು ಪತ್ರಿಕಾ ವಿತರಕರಿಗೆ ಸರ್ಕಾರದ ಸವಲತ್ತುಗಳನ್ನು ಕೊಡಿಸಿಕೊಡುವಲ್ಲಿ ಹೆಚ್ಚಿನ ಸಹಕಾರ ನೀಡಬೇಕೆಂದು ಸಂಘದ ಅಧ್ಯಕ್ಷ ಜೆ.ಎಸ್.ಹೋಮದೇವ ಪ್ರಕಟಣೆಯಲ್ಲಿ ಕೋರಿದ್ದಾರೆ.

ಸರ್ಕಾರದ ಸೌಲಭ್ಯಕ್ಕಾಗಿ ಅಗತ್ಯ ದಾಖಲೆ ಸಲ್ಲಿಸಲು ಪತ್ರಿಕಾ ವಿತರಕರಲ್ಲಿ ಕೋರಿಕೆ

ಮೈಸೂರು,ಸೆ.12(ಪಿಎಂ)– ಪ್ರಧಾನ ಮಂತ್ರಿ ಸ್ವನಿಧಿಯಿಂದ ಸನ್ಮಾನ್‌ವರೆಗಿನ 9 ಯೋಜನೆಗಳ ಸಂಬಂಧ ಸೌಲಭ್ಯಗಳನ್ನು ಪಡೆಯಲು ಮೈಸೂರು ಜಿಲ್ಲೆಯ ನಗರ ಮತ್ತು ತಾಲೂಕು ಪತ್ರಿಕಾ ವಿತರಕರು ಮತ್ತು ಪತ್ರಿಕೆ ಹಂಚುವ ಹುಡುಗರು (18 ವರ್ಷ ತುಂಬಿದ) ಅಗತ್ಯ ದಾಖಲೆಗಳನ್ನು ಮೈಸೂರು ಜಿಲ್ಲಾ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘಕ್ಕೆ ಸಲ್ಲಿಸುವಂತೆ ಕೋರಲಾಗಿದೆ.

ಆಧಾರ್ ಕಾರ್ಡ್ ಕಲರ್ ಜೆರಾಕ್ಸ್, ಚುನಾವಣಾ ಗುರುತಿನ ಚೀಟಿ ಕಲರ್ ಜೆರಾಕ್ಸ್, ಬ್ಯಾಂಕ್ ಪಾಸ್ ಪುಸ್ತಕ ಕಲರ್ ಜೆರಾಕ್ಸ್ ಸೇರಿದಂತೆ ಈ ಮೂರು ದಾಖಲೆಗಳನ್ನು 2 ದಿನಗಳಲ್ಲಿ ತಲುಪಿಸಬೇಕು ಎಂದು ಸಂಘದ ಅಧ್ಯಕ್ಷ ಜೆ.ಎಸ್.ಹೋಮದೇವ ಪ್ರಕಟಣೆಯಲ್ಲಿ ಕೋರಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೀನಿನ ಅಂಗಡಿಯಲ್ಲಿ 11.50 ಲಕ್ಷ ದೋಚಿದ್ದವರ ಬಂಧನ

ಮೈಸೂರು, ಸೆ.12(ಎಸ್‌ಬಿಡಿ)– ಮೀನಿನ ಅಂಗಡಿಯಲ್ಲಿ 11.50 ಲಕ್ಷ ರೂ. ಕಳ್ಳತನವಾಗಿದ್ದ ಪ್ರಕರಣದಲ್ಲಿ ಇಬ್ಬರನ್ನು ಮೈಸೂರಿನ ಮಂಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಗರದ ಪುಲಕೇಶಿ ರಸ್ತೆಯಲ್ಲಿರುವ ಜಾಮ್ ಜಾಮ್ ಮೀನಿನ ಅಂಗಡಿಯ ರೋಲಿಂಗ್ ಶೆಟರ್ ಬೀಗ ಮುರಿದು ಒಳನುಗ್ಗಿದ್ದ ಖದೀಮರು, ಡ್ರಾಯರ್‌ನಲ್ಲಿದ್ದ 11.50 ಲಕ್ಷ ರೂ. ಹಣ ಕಳ್ಳತನ ಮಾಡಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಮಂಡಿ ಠಾಣೆ ಪೊಲೀಸರು ಇಬ್ಬರನ್ನು ಬಂಧಿಸಿ, ಅವರಿಂದ 9.20 ಲಕ್ಷ ರೂ. ವಶಪಡಿಸಿಕೊಂಡಿದ್ದಾರೆ. ಬಂಧಿತರಲ್ಲಿ ಓರ್ವ ಆ ಅಂಗಡಿಯಲ್ಲೇ ಕೆಲಸ ಮಾಡುತ್ತಿದ್ದ. ಮತ್ತೋರ್ವ ಅಲ್ಲಿ ಕೆಲಸ ಬಿಟ್ಟು ಬೇರೆ ಕಡೆ ಹೋಗಿದ್ದ. ಇಬ್ಬರೂ ಸೇರಿ ಈ ಕೃತ್ಯ ನಡೆಸಿದ್ದರು ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದರು.

ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ ಮಾರ್ಗದರ್ಶನ ಹಾಗೂ ನರಸಿಂಹರಾಜ ಉಪವಿಭಾಗದ ಎಸಿಪಿ ಅಶ್ವಥನಾರಾಯಣ ನೇತೃತ್ವದಲ್ಲಿ ಮಂಡಿ ಠಾಣೆ ಇನ್ಸ್‌ಪೆಕ್ಟರ್ ಎಸ್.ನಾಗೇಶ್, ಸಬ್‌ಇನ್ಸ್‌ಪೆಕ್ಟರ್‌ಗಳಾದ ರೇವಣ್ಣ ಸಿದ್ದಪ್ಪ, ರಂಗಸ್ವಾಮಿ, ಎಎಸ್‌ಐ ಕೆ.ಎಸ್.ಗುರುಸ್ವಾಮಿ, ಸಿಬ್ಬಂದಿ ಜಿ.ಜಿ.ರಾಜೇಂದ್ರ, ಜನಾರ್ಧನರಾವ್, ಮಹಮ್ಮದ್ ಖಯ್ಯೂಂ, ಕರಿಯಪ್ಪ, ಪ್ರಕಾಶ್, ರಾಥೋಡ್, ಕೆ.ಬಿ.ಮಂಜು, ರಾಜು ಸಾಬ್, ಕುಮಾರ್ ಮತ್ತು ಮಂಜು ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಬಂಧಿಸಿದ್ದಾರೆ.

ನಿಧನ

ರಾಜೇಶ್ವರಿ



ಮೈಸೂರು: ಪೂರಿಗಾಲಿಯ ದಿವಂಗತ ವೆಂಕಟರಾಮಯ್ಯ ಅವರ ಪುತ್ರಿ ಹಾಗೂ ಅನಂತಮೂರ್ತಿ ಅವರ ಪತ್ನಿ ಶ್ರೀಮತಿ ರಾಜೇಶ್ವರಿ (72) ಅವರು ಇಂದು ಮೈಸೂರಿನ ಶ್ರೀರಾಂಪುರದ ತಮ್ಮ ನಿವಾಸದಲ್ಲಿ ನಿಧನರಾದರು. ಇವರು ಮಂಡ್ಯದ ಡಿಡಿಪಿಐ ಕಚೇರಿಯಲ್ಲಿ ಸೇವೆ ಸಲ್ಲಿಸಿದ್ದರು. ಇವರ ಪತಿ ಮದ್ದೂರು ಹೊನ್ನಲಗೆರೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಮೃತರು ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಚಾಮುಂಡಿಬೆಟ್ಟದತಪ್ಪಲಿನ ಹರಿಶ್ಚಂದ್ರಘಾಟ್‌ನಲ್ಲಿ ನೆರವೇರಿತು.

ಒಂದನೇ ಪುಟದಿಂದ

ಒಂದನೇ ಪುಟದಿಂದ

ಮಹತ್ವದ ನಿರ್ಧಾರ

ಶೇ.73ಕ್ಕಿಂತ ಕಡಿಮೆ ಮಳೆಯಾಗಿದ್ದು, ಇಷ್ಟು ತಾಲೂಕುಗಳಲ್ಲಿ ಬಿತ್ತಿದ ಬೀಜವೂ ಮೊಳಕೆ ಹಂತದಲ್ಲೇ ಒಣಗಿದೆ. ಮತ್ತೆ ಮಳೆ ಬಂದರೂ ರೈತರಿಗೆ ಫಸಲು ಸಿಗುವುದಿಲ್ಲ. ಅದರಲ್ಲೂ ಬತ್ತ ಮತ್ತು ರಾಗಿ ಬೆಳೆಯಲ್ಲಿ ನಮಗೆ ಭಾರಿ ಕೊರತೆಯಾಗಲಿದೆ.

ಸರ್ಕಾರ ಬರ ಘೋಷಿಸುತ್ತಿದ್ದಂತೆ ದಲ್ಲಾಳಿಗಳು ಮತ್ತು ಸಗಟು ಮಾರಾಟಗಾರರು ಎಚ್ಚೆತ್ತು ರೈತರ ಬಳಿ ಇರುವ ಬತ್ತ ಮತ್ತು ರಾಗಿಯನ್ನು ಖರೀದಿಸಿ ಮುಕ್ತ ಮಾರುಕಟ್ಟೆಯಲ್ಲಿ ಕೃತಕ ಅಭಾವ ಸೃಷ್ಟಿ ಮಾಡುತ್ತಾರೆ. ಈ ಬಗ್ಗೆ ಎಚ್ಚರ ವಹಿಸಿ ಎಂದು ಜಿಲ್ಲಾಡಳಿತಕ್ಕೆ ಮುಖ್ಯಮಂತ್ರಿಗಳು ಎಚ್ಚರಿಸಿದ್ದಾರೆ. ಇದಲ್ಲದೆ, ಸಣ್ಣ–ಪುಟ್ಟ ಲೇವಾದೇವಿದಾರರು ರೈತರ ಶೋಷಣೆ ಆರಂಭಿಸುತ್ತಾರೆ. ಈಗಾಗಲೇ ರೈತರು ಆತ್ಮಹತ್ಯೆ ಹಾದಿ ತುಳಿದಿದ್ದಾರೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಹೆಚ್ಚಬಹುದು. ಇದಕ್ಕೆ ಅವಕಾಶ ಮಾಡಿಕೊಡಬೇಡಿ ಎಂದಿದ್ದಾರೆ. ಮಳೆಯ ನಿರೀಕ್ಷೆಯಲ್ಲಿ ನಾವು ಇದ್ದೆವು. ಆದರೆ, ನಮ್ಮ ನಿರೀಕ್ಷೆ ಸುಳ್ಳಾಗಿದೆ. ಇನ್ನು ಮಳೆ ಬಂದರೂ ಕೃಷಿ ಮಾಡಲು ಸಾಧ್ಯವಿಲ್ಲ. ಕುಡಿಯುವ ನೀರು ಹಾಗೂ ದನಕರುಗಳ ಮೇವಿಗೆ ಸಹಕಾರಿಯಾಗಬಹುದು.

ನೀವು ಈಗಾಗಲೇ ಬರಪೀಡಿತ ಪ್ರದೇಶಗಳ ಪರಿಶೀಲನೆ ಮಾಡಿ ವರದಿ ಸಲ್ಲಿಸಿದ್ದೀರಿ. ನೀವು ನೀಡಿರುವ ವರದಿ ಆಧಾರದ ಮೇಲೆ 154 ತಾಲೂಕು ಬರಪೀಡಿತವೆಂದು ಘೋಷಿಸಲು ನಿರ್ಧರಿಸಿದ್ದೇವೆ.

ಕಂದಾಯ ಸಚಿವ ಕೃಷ್ಣ ಭೈರೇಗೌಡರ ಅಧ್ಯಕ್ಷತೆಯಲ್ಲಿ ನಾಳೆ ಸಚಿವ ಸಂಪುಟ ಉಪ ಸಮಿತಿ ಸಭೆ ಸೇರಿ ಇಲಾಖಾ ವರದಿಯನ್ನು ಪರಿಶೀಲಿಸಿ 154 ತಾಲೂಕುಗಳ ಜತೆಗೆ ಹೆಚ್ಚುವರಿಯಾಗಿ 4 ತಾಲೂಕುಗಳನ್ನು ಸೇರ್ಪಡೆ ಮಾಡಬಹುದು.

ಸಚಿವ ಸಂಪುಟದ ಉಪ ಸಮಿತಿ ಶಿಫಾರಸ್ಸನ್ನು ಗುರುವಾರ ನಡೆಯುವ ಸಂಪುಟ ಸಭೆಯಲ್ಲಿ ಅನುಮೋದಿಸಿ ಅಧಿಕೃತ ಘೋಷಣೆ ಮಾಡುತ್ತೇವೆ. ಅಲ್ಲದೆ, ಕೇಂದ್ರಕ್ಕೆ ಅಗತ್ಯ ನೆರವು ಕೋರಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರಿಗೆ ಪತ್ರ ಬರೆಯಲಾಗುವುದು.

ಬರ ಘೋಷಣೆ ಮಾಡಿದ ತಕ್ಷಣವೇ ಪರಿಹಾರ ಕಾಮಗಾರಿಗಳನ್ನು ಯುದ್ಧೋಪಾದಿಯಲ್ಲಿ ಕೈಗೊಳ್ಳಬೇಕು. ಕೇಂದ್ರ ಸ್ಥಾನದಲ್ಲಿ ಮೊಕ್ಕಾಂ ಹೂಡಿ ರೈತರು ಹಾಗೂ ಜನರ ಸಮಸ್ಯೆಗಳನ್ನು ಆಲಿಸಿ ಪರಿಹಾರಕ್ಕೆ ಮುಂದಾಗಿ. ಮಳೆ ಕೊರತೆಯಿಂದ ರಾಜ್ಯದ ಯಾವುದೇ ಭಾಗದಲ್ಲಿ ರೈತರು, ಜನರು ಸಂಕಷ್ಟಕ್ಕೆ ಸಿಲುಕಬಾರದು. ತಕ್ಷಣವೇ ನಿಮ್ಮ ನಿಮ್ಮ ವ್ಯಾಪ್ತಿಯಲ್ಲಿ ಕ್ರಮ ಕೈಗೊಂಡು, ಮುನ್ನೆಚ್ಚರಿಕೆ ವಹಿಸಿ.

ನಿಮ್ಮ ಪಿಡಿ ಖಾತೆಯಲ್ಲಿರುವ ಹಣವನ್ನು ಬಳಕೆ ಮಾಡಿ. ಕಳೆದ ತಿಂಗಳಲ್ಲೇ ಬರ ಘೋಷಣೆಗೆ ರಾಜ್ಯ ಸರ್ಕಾರ ತೀರ್ಮಾನ ಕೈಗೊಂಡಿತ್ತು. ಆದರೆ, ಕೇಂದ್ರ ಸರ್ಕಾರದ ಮಾರ್ಗಸೂಚಿ ಘೋಷಣೆಗೆ ಅಡ್ಡಿಯಾಗಿತ್ತು. ಇದೀಗ ಸತತ ನಾಲ್ಕು ವಾರ ವಾಡಿಕೆಗಿಂತ ಕಡಿಮೆ ಮಳೆಯಾಗಿದ್ದು, ಬೆಳೆಯೂ ಒಣಗಿದೆ ಎಂಬ ಮಾಹಿತಿಯನ್ನು ನೀವೇ ನೀಡಿದ್ದೀರಿ. ಈ ಎಲ್ಲಾ ಮಾಹಿತಿ ಆಧರಿಸಿ ಗುರುವಾರ ಅಧಿಕೃತವಾಗಿ ಬರ ಘೋಷಣೆ ಮಾಡಲಾಗುವುದು ಎಂದು ಹೇಳಿದರು.

ಅಧಿಕಾರಿಗಳು ಮನುಷ್ಯತ್ವ ಇಲ್ಲದವರು...

ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ತಹಸೀಲ್ದಾರ್‌ಗಳು ಜನಸಂಪರ್ಕ ಸಭೆ ನಡೆಸಿ ಇನ್ನು ಮುಂದಾದರೂ ಜನರು ರಾಜಧಾನಿಗೆ ಸಮಸ್ಯೆ ಹೊತ್ತು ಬರುವುದನ್ನು ತಪ್ಪಿಸಿ. ತಾಲೂಕು ಮಟ್ಟದಲ್ಲಿ ಸಚಿವರು, ಶಾಸಕರನ್ನು ಆಹ್ವಾನಿಸಿ, ಜನಸಂಪರ್ಕ ಸಭೆಗಳನ್ನು ವಾರಕ್ಕೊಮ್ಮೆ ನಡೆಸಿ ಸ್ಥಳೀಯ ಸಮಸ್ಯೆಗಳಿಗೆ ಸ್ಪಂದಿಸಿ ಎಂದು ಸೂಚನೆ ನೀಡಿದರು.

ಅಧಿಕಾರಿಗಳು ಕೇಂದ್ರಸ್ಥಾನದಲ್ಲಿಯೇ ಇದ್ದು, ಜನರ ಸೇವೆಗೆ ಲಭ್ಯರಿರಬೇಕು. ಅಧಿಕಾರಿಗಳು ಕಚೇರಿಯಲ್ಲಿರಬೇಕು, ಇಲ್ಲ ಪ್ರವಾಸದಲ್ಲಿರಬೇಕು. ಮನೆಯಲ್ಲಿ ಕುಳಿತು ಕೆಲಸ ಮಾಡಲು ಅವಕಾಶವಿಲ್ಲ. ನಿಮ್ಮಿಂದ ಜನರಿಗೆ ತೊಂದರೆಯಾಗುವುದನ್ನು ಸರ್ಕಾರ ಸಹಿಸುವುದಿಲ್ಲ.

ಹಾಗೆಯೇ ಅಧಿಕಾರಿಗಳು ದೂರವಾಣಿ ಕರೆಗೆ ಸಿಗುವುದಿಲ್ಲ ಎಂಬ ದೂರುಗಳೂ ಸಾರ್ವಜನಿಕರು, ಶಾಸಕರು ಮತ್ತು ಮಂತ್ರಿಗಳಿಂದ ಇದೆ. ಇದು ಒಳ್ಳೆಯದಲ್ಲ. ಮುಖ್ಯಮಂತ್ರಿ ಕಚೇರಿಯಿಂದ ಇರಲಿ, ಸಚಿವರಿರಲಿ, ಶಾಸಕರಿರಲಿ, ಜನಸಾಮಾನ್ಯರಿರಲಿ, ಅವರ ಕರೆಗಳಿಗೆ ಸ್ಪಂದಿಸಬೇಕು. ಯಾವುದೇ ಪಕ್ಷದ ಶಾಸಕರುಗಳಿರಲಿ ಪ್ರೋಟೋಕಾಲ್ ಚಾಚೂ ತಪ್ಪದೆ ಪಾಲಿಸಬೇಕು ಎನ್ನುವ ಸೂಚನೆ ನೀಡಿದರು.

ಅಧಿಕಾರಿಗಳಿಗೆ ಹೃದಯ ಸರಿಯಾಗಿ ಕೆಲಸ ಮಾಡಬೇಕು. ನಿಮ್ಮ ನಿರ್ಲಕ್ಷ್ಯ ಮತ್ತು ಉಡಾಫೆತನದಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬಂದರೆ ನಾವು ಸುಮ್ಮನೆ ಕೂರುವುದಿಲ್ಲ ಎಂದು ಎಚ್ಚರಿಸಿದರು.

ಕೆಲವೊಂದು ಸಮಸ್ಯೆಗೆ ವಾರದ ಮಿತಿಯಲ್ಲಿ ಪರಿಹಾರ ಒದಗಿಸಿ ಕೊಡಿ. ಕೆಲಸ ಆಗಿದೆಯಾ ಇಲ್ಲವಾ ಎನ್ನುವುದನ್ನು ಮರು ಪರೀಕ್ಷಿಸಿ. ಆಗ ಸ್ಥಳೀಯ ಸಮಸ್ಯೆಗಳಿಗಾಗಿ ಜನತೆ ಬಸ್ ಚಾರ್ಜ್ ಖರ್ಚು ಮಾಡಿಕೊಂಡು ನನ್ನ ತನಕ ಬರುವ ಅಗತ್ಯವೇ ಬೀಳುವುದಿಲ್ಲ ಎಂದು ತಿಳಿಸಿದರು.

ಕೇವಲ ಬದಲಾವಣೆಗಾಗಿ ನಾಡಿನ ಜನತೆ ಸರ್ಕಾರವನ್ನು ಬದಲಾಯಿಸಿಲ್ಲ. ಬಹಳ ನಿರೀಕ್ಷೆಗಳನ್ನು ಇಟ್ಟುಕೊಂಡು ಹಿಂದಿನ ಸರ್ಕಾರವನ್ನು ಬದಲಾಯಿಸಿ ನಮ್ಮನ್ನು ಅಧಿಕಾರಕ್ಕೆ ತಂದಿದ್ದಾರೆ. ಅಭಿವೃದ್ಧಿಯ ಆಶೋತ್ತರಗಳನ್ನು ಇಟ್ಟುಕೊಂಡ ಜನರ ನಿರೀಕ್ಷೆಗಳಿಗೆ ತಕ್ಕಂತೆ ಅಧಿಕಾರಿಗಳು ಕೆಲಸ ಮಾಡಬೇಕು.

ಶಾಸಕರು, ಮಂತ್ರಿಗಳು, ಅಧಿಕಾರಿಗಳು ಜನ ಸೇವಕರು. ಈ ಸಾಮಾನ್ಯ ತಿಳಿವಳಿಕೆ ಪ್ರತಿಯೊಬ್ಬರಲ್ಲೂ ಇರಬೇಕು. ನಾವ್ಯಾರು ರಾಜರುಗಳಲ್ಲ. ತಹಸೀಲ್ದಾರ್, ಉಪವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಬರುವ ಅರ್ಜಿಗಳು 5 ವರ್ಷಕ್ಕೂ ಹೆಚ್ಚು ಅವಧಿಗೆ ಬಾಕಿ ಉಳಿದಿರುವುದನ್ನು ಗಮನಿಸಲಾಗಿದೆ. 5 ವರ್ಷವಾದರೂ ಪ್ರಕರಣ ಇತ್ಯರ್ಥಪಡಿಸದೆ ಇದ್ದರೆ, ನೀವು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಅರ್ಥ. ವಿಳಂಬ ಜಾಸ್ತಿಯಾದಷ್ಟು ಭ್ರಷ್ಟಾಚಾರಕ್ಕೆ ಅವಕಾಶವಾಗುತ್ತದೆ. ತಹಸೀಲ್ದಾರರು ಒಂದು ಅರ್ಜಿಯನ್ನು ಸ್ವೀಕರಿಸಿದರೆ, ಮೂರು ತಿಂಗಳಲ್ಲಿ ಇತ್ಯರ್ಥವಾಗಬೇಕು. ಉಪವಿಭಾಗಾಧಿಕಾರಿಗಳ ಬಳಿ ಬರುವ ಮನವಿಗಳ ಇತ್ಯರ್ಥಕ್ಕೆ ಬಹಳ ವಿಳಂಬ ಮಾಡ್ತಾರೆ. ಇದನ್ನು ಕನಿಷ್ಠ ಆರು ತಿಂಗಳಲ್ಲಿ ಹಾಗೂ ಜಿಲ್ಲಾಧಿಕಾರಿಗಳು ಒಂದು ವರ್ಷದಲ್ಲಿ ಇತ್ಯರ್ಥ ಮಾಡಬೇಕು. ಜಿಲ್ಲಾಧಿಕಾರಿಗಳು ಅನಗತ್ಯವಾಗಿ ಪ್ರಕರಣ ಮುಂದೂಡುವುದು, ಕಕ್ಷಿದಾರರನ್ನು ಕಾಯಿಸುವುದು, ವಾದ–ವಿವಾದಗಳನ್ನು ಆಲಿಸಿದ ನಂತರ ತೀರ್ಪು ಬರೆಯಲು ವಿಳಂಬ ಮಾಡುವುದು ತರವಲ್ಲ. ಪ್ರಕರಣ ಇತ್ಯರ್ಥಗೊಳಿಸಲು ವಿಳಂಬ ಮಾಡಿದರೆ ನಮ್ಮ ಸರ್ಕಾರ ಸಹಿಸಲ್ಲ. ಸರ್ಕಾರ ಕಠಿಣ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ನೀವು ಚೆನ್ನಾಗಿ ಕೆಲಸ ಮಾಡಿದರೆ ಸರ್ಕಾರಕ್ಕೆ ಒಳ್ಳೆ ಹೆಸರು ಬರುತ್ತದೆ. ಕೆಲಸ ಮಾಡದಿದ್ದರೆ ಕೆಟ್ಟ ಹೆಸರು ಬರುತ್ತದೆ. ಅದಕ್ಕೋಸ್ಕರ ನಿಮ್ಮ ಧೋರಣೆಯನ್ನು ಬದಲಾಯಿಸಿಕೊಳ್ಳಬೇಕು ಎಂದು ಮುಖ್ಯಮಂತ್ರಿಗಳು ಎಚ್ಚರಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಜಿಲ್ಲಾಧಿಕಾರಿಗಳು, ಜಿಲ್ಲೆಯ ಹಿರಿಯ ಅಧಿಕಾರಿಗಳು ಹಾಸ್ಟೆಲುಗಳು, ಆಸ್ಪತ್ರೆಗಳಿಗೆ ಭೇಟಿ ನೀಡಬೇಕು. ಜಿಲ್ಲಾಧಿಕಾರಿಗಳು ಅಧೀನ ಕಚೇರಿಗಳಿಗೆ ಭೇಟಿ ನೀಡಬೇಕು

ಗಣೇಶ ಹಬ್ಬದ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಬೇಕು. ಪರಿಸರ ಹಾನಿಯಾಗದಂತೆ ಹಬ್ಬ ಆಚರಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಕೋಮು ಶಕ್ತಿಗಳು ಕಾನೂನು ಸುವ್ಯವಸ್ಥೆ ಹಾಳು ಮಾಡದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಯಾವ ಧರ್ಮದವರಿಗೂ ತೊಂದರೆಯಾಗಬಾರದು ಎಂದು ಸೂಚಿಸಿದರು.

ಬಿಟ್‌ಕಾಯಿನ್ ಹಗರಣದ ಆರೋಪಿಗಳ ಮನೆ ಮೇಲೆ ಎಸ್‌ಐಟಿ ದಾಳಿ

ಬೆಂಗಳೂರು: ಬಿಟ್‌ಕಾಯಿನ್ ಹಗರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಿ ಆರೋಪಿಗಳ ಕಿಂಗ್‌ಪಿನ್ ಸೇರಿದಂತೆ ಪ್ರಮುಖ ಆರೋಪಿಗಳ ನಿವಾಸಗಳ ಮೇಲೆ ವಿಶೇಷ ತನಿಖಾ ತಂಡ(ಎಸ್‌ಐಟಿ) ದಾಳಿ ನಡೆಸುತ್ತಿದೆ.

ಜಯನಗರದಲ್ಲಿರುವ ಶ್ರೀಕೃಷ್ಣ ರಮೇಶ್ ಅಲಿಯಾಸ್ ಶ್ರೀಕಿ ಅವರ ನಿವಾಸದ ಮೇಲೆ ದಾಳಿ ನಡೆಯುತ್ತಿದೆ. ಬೆಂಗಳೂರಿನ ಸದಾಶಿವನಗರ ಬಡಾವಣೆಯಲ್ಲಿರುವ ಇತರ ಆರೋಪಿಗಳಾದ ಸುನೀಶ್ ಹೆಗ್ಡೆ ಮತ್ತು ಪ್ರಸಿದ್ ಅವರ ಮನೆಗಳ ಮೇಲೂ ದಾಳಿ ನಡೆಸಲಾಗಿದೆ. ಅಧಿಕಾರಿಗಳು ನಿನ್ನೆ ನ್ಯಾಯವ್ಯಾಪ್ತಿಯ ಕೋರ್ಟ್‌ನಿಂದ ಸರ್ಚ್ ವಾರೆಂಟ್ ಪಡೆದಿದ್ದು, ಮುಂಜಾನೆಯಿಂದ ದಾಳಿ ನಡೆಸುತ್ತಿದ್ದಾರೆ. ಮೂಲಗಳ ಪ್ರಕಾರ ಸಂಕೀರ್ಣ ಪ್ರಕರಣದಲ್ಲಿ ಇಸ್ರೇಲ್ ಅಧಿಕಾರಿಗಳ ನೆರವು ಪಡೆಯುವ ಬಗ್ಗೆ ರಾಜ್ಯ ಪೊಲೀಸ್ ಇಲಾಖೆ ಚಿಂತನೆ ನಡೆಸುತ್ತಿದೆ.

ರಾಜ್ಯದ ಬಿಜೆಪಿಯ ಉನ್ನತ ನಾಯಕರು ಭಾಗಿಯಾಗಿದ್ದಾರೆ ಎನ್ನಲಾದ ಬಿಟ್‌ಕಾಯಿನ್ ಹಗರಣದ ಮರುತನಿಖೆಗೆ ನಿರ್ದೇಶನ ನೀಡಿ ಕಾಂಗ್ರೆಸ್ ಸರ್ಕಾರ ಇತ್ತೀಚೆಗೆ ಆದೇಶ ಹೊರಡಿಸಿತ್ತು. ತನಿಖೆಯನ್ನು ಕೈಗೆತ್ತಿಕೊಳ್ಳಲು ಅಪರಾಧ ತನಿಖಾ ಇಲಾಖೆ ಅಡಿಯಲ್ಲಿ ಎಸ್‌ಐಟಿ ರಚಿಸಲಾಗಿದೆ.

ಗೃಹ ಸಚಿವ ಜಿ.ಪರಮೇಶ್ವರ ಮಾತನಾಡಿ, 'ಹಿಂದಿನ ಬಿಜೆಪಿ ಸರಕಾರದ ಅವಧಿಯಲ್ಲಿ ಲಕ್ಷ ಕೋಟಿ ಹಣ ವಂಚನೆ ಆಗಿರುವ ಬಗ್ಗೆ ಚರ್ಚೆ ನಡೆಸಿದ್ದೆವು. ಈಗ ಮರು ತನಿಖೆಗೆ ಆದೇಶಿಸಿದ್ದೇವೆ. ಸಿಐಡಿ ಅಡಿಯಲ್ಲಿ ಎಸ್‌ಐಟಿ ರಚನೆಯಾಗಿದೆ. ಹಗರಣದಲ್ಲಿ ತಾಂತ್ರಿಕ, ಅಂತಾರಾಜ್ಯ ಮತ್ತು ಅಂತರಾಷ್ಟ್ರೀಯ ವಿಷಯಗಳಿವೆ ಎಂದು ಅವರು ಹೇಳಿದ್ದರು. ಬೆಂಗಳೂರಿನಲ್ಲಿ ಸಿಸಿಬಿ ಪೊಲೀಸರು ಹ್ಯಾಕರ್ ಶ್ರೀಕೃಷ್ಣನನ್ನು ಬಂಧಿಸಿದ ನಂತರ ಬಿಟ್ ಕಾಯಿನ್ ಹಗರಣ ಹೊರಗೆ ಬಂದಿತ್ತು. ಆರೋಪಿ ಹ್ಯಾಕರ್‌ನನ್ನು ಬಳಸಿಕೊಂಡು ಆಡಳಿತಾರೂಢ ಬಿಜೆಪಿ ನಾಯಕರು 2020ರಲ್ಲಿ ಕಸ್ಟಡಿಯಲ್ಲಿ ಹಗರಣ ನಡೆಸಲು ಅವಕಾಶ ಮಾಡಿಕೊಟ್ಟು ಭಾರಿ ಹಣ ಸಂಪಾದಿಸಿದ್ದರು ಎಂದು ಆರೋಪಿಸಲಾಗಿತ್ತು.



ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದರು. ಆರೋಪಿಗಳು ಆನ್‌ಲೈನ್ ಗೇಮಿಂಗ್ ಕಂಪನಿಗಳು ಮತ್ತು ಸರ್ಕಾರಿ ವೆಬ್ ಪೋರ್ಟಲ್‌ಗಳನ್ನು ಹ್ಯಾಕ್ ಮಾಡುವ ಮೂಲಕ ಆರೋಪಿಗಳು 11 ಕೋಟಿ ರೂ. ಪಡೆದು ಆ ಹಣವನ್ನು ಬಿಟ್‌ಕಾಯಿನ್‌ಗಳಾಗಿ ಪರಿವರ್ತಿಸಿ ಬೆಂಗಳೂರಿನಲ್ಲಿ ಮಾದಕ ವಸ್ತು ದಂಧೆ ನಡೆಸುತ್ತಿದ್ದರು ಎನ್ನಲಾಗಿದೆ. ಈ ಹಿಂದೆ ಕಾಂಗ್ರೆಸ್‌ನ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ತಮ್ಮ ಸರಣಿ ಟ್ವೀಟ್‌ಗಳಲ್ಲಿ ಬಿಟ್‌ಕಾಯಿನ್ ಹಗರಣದ ಕುರಿತು ಬಿಜೆಪಿ ಕೇಂದ್ರ ನಾಯಕತ್ವ ಮತ್ತು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ವಾಗ್ದಾಳಿ ನಡೆಸಿದ್ದರು.

ಸುಮಾರು 5000 ಕೋಟಿ ರೂಪಾಯಿಗೂ ಹೆಚ್ಚು ಮೊತ್ತದ ಬಿಟ್ ಕಾಯಿನ್ ವರ್ಗಾವಣೆ ಪ್ರಕರಣ ಇದಾಗಿದೆ. ಪ್ರಕರಣದ ಪ್ರಮುಖ ಆರೋಪಿ ಶ್ರೀಕೃಷ್ಣ ಹಾಗೂ ಆತನ ಸಹಚರ ರಾಬಿನ್ ಖಂಡೇಲ್‌ವಾಲ್ ಎಂಬುವವನನ್ನು 2020ರ ನವೆಂಬರ್ 24ರಂದು ಬೆಂಗಳೂರು ಪೊಲೀಸರು ಬಂಧಿಸಿದ್ದರು. ಸುಮಾರು 100 ದಿನಗಳ ಕಾಲ ವಿಚಾರಣೆ ನಡೆಸಲಾಗಿದೆ. 5 ತಿಂಗಳ ನಂತರ 2021ರ ನಂತರ 2021ರ ಏಪ್ರಿಲ್ 17ರಂದು ಆರೋಪಿ ಜಾಮೀನು ಪಡೆದಿದ್ದಾನೆ ಎಂದು ಕಾಂಗ್ರೆಸ್ ನಾಯಕ ರಣದೀಪ್ ಸುರ್ಜೇವಾಲಾ ಟ್ವೀಟ್ ಮಾಡಿದ್ದರು.

'ಜನ ಮರುಳೋ, ಜಾತ್ರೆ ಮರುಳೋ'...

ಬ್ರ್ಯಾಂಡೆಡ್ ಎಂದು ಬಿಂಬಿಸಿದ್ದ ಉತ್ಪನ್ನಗಳ ಖರೀದಿಗೆ ಮುಗಿಬಿದ್ದ ಜನ





ಮೈಸೂರು,ಸೆ.12(ಪಿಎಂ)– ರಸ್ತೆಬದಿಯಲ್ಲಿ ಇಡೀ ದಿನ ನಡೆದ ಹೆಡ್‌ಫೋನ್ ಹಾಗೂ ವಾಚ್ ಮಾರಾಟದತ್ತ ಬಹಳಷ್ಟು ಜನ ಮುಗಿಬಿದ್ದಿದ್ದರು. ಬ್ರ್ಯಾಂಡೆಡ್ ಕಂಪನಿಯ ದುಬಾರಿ ಬೆಲೆಯ ಉತ್ಪನ್ನಗಳು ಇಲ್ಲಿ ಅತ್ಯಂತ ಕಡಿಮೆ ಬೆಲೆಗೆ ದೊರೆಯುತ್ತಿವೆ ಎಂಬುದು ಹೀಗೆ ಮುಗಿಬಿದ್ದವರ ಲೆಕ್ಕಾಚಾರ. ಅಸಲಿಗೆ ಬ್ರ್ಯಾಂಡೆಡ್ ಎಂದು ಬಿಂಬಿಸಿದ್ದ ಉತ್ಪನ್ನಗಳು ಅವಾಗಿದ್ದವು.

ಉತ್ಪನ್ನಗಳು ಅಸಲಿಯೇ ಎಂದು ವಿವೇಚಿಸುವ ಗೋಜಿಗೂ ಹೋಗದೇ ಖರೀದಿಸುತ್ತಿದ್ದ ದೃಶ್ಯ ಕಂಡು ಬಂದಿತು. ಮೈಸೂರಿನ ಬೋಗಾದಿ ರಸ್ತೆಯ ಪ್ರಾದೇಶಿಕ ಶಿಕ್ಷಣ ಸಂಸ್ಥೆ ಕಾಂಪೌಂಡ್‌ಗೆ ಹೊಂದುಕೊಂಡಂತೆ ರಸ್ತೆ ಬದಿಯಲ್ಲಿ ಹಾಗೂ ಎದುರಿಗೂ ರಸ್ತೆಬದಿಯಲ್ಲಿ ನಾಲ್ಕು ಗುಂಪುಗಳಲ್ಲಿ ಹತ್ತಾರು ಮಂದಿ ಹೀಗೆ ಹೆಡ್‌ಫೋನ್ ಹಾಗೂ ವಾಚ್‌ಗಳ ಮಾರಾಟದಲ್ಲಿ ನಿರತರಾಗಿದ್ದರು.

ವಾರಂಟಿ–ಗ್ಯಾರಂಟಿ ಇಲ್ಲದ ಎಲೆಕ್ಟ್ರಾನಿಕ್ ವಸ್ತುಗಳ ಖರೀದಿಗಾಗಿ ಅಲ್ಲಿ ನೆರೆದಿದ್ದ ಜನ ದಟ್ಟಣೆ ನೋಡಿದರೆ, 'ಜನ ಮರುಳೋ, ಜಾತ್ರೆ ಮರುಳೋ' ಎಂಬ ಗಾದೆ ಮಾತು ನೆನಪಿಗೆ ಬರುತ್ತಿತ್ತು. ತಾವು ಮಹಾರಾಷ್ಟ್ರ, ಹುಬ್ಬಳ್ಳಿ ಮೂಲದವರು ಎನ್ನುತ್ತಿದ್ದ ಈ ವ್ಯಾಪಾರಸ್ಥರಲ್ಲಿ ಕೆಲವರಿಗಷ್ಟೇ ಕನ್ನಡ ಬರುತ್ತಿತ್ತು. ಉಳಿದವರೆಲ್ಲಾ ಹಿಂದಿ ಭಾಷೆಯಲ್ಲಿ ಮಾತನಾಡಿದರೂ ವ್ಯಾಪಾರಕ್ಕೆ ಅಗತ್ಯವಿರುವಷ್ಟು ಕನ್ನಡ ಬಲ್ಲವರಾಗಿದ್ದರು.

'ಮಾಲು ಇರುವವರೆಗೆ ಇರುತ್ತೇವೆ. ಫಿಕ್ಸಡ್ ಅಂಡ್ ಫೈನಲ್ ರೇಟ್, ಕಮ್ಮಿ ಇಲ್ಲ' ಎಂದು ತಮ್ಮಲ್ಲಿನ ಉತ್ಪನ್ನಗಳ ಬಿಕರಿಗೆ ಮುಂದಾಗಿದ್ದರು. 'ಆಪಲ್ ಕಂಪನಿಯ ಏರ್‌ಪಾಡ್ಸ್ ಪ್ರೊ ವೈರ್‌ಲೆಸ್ ಬ್ಲೂಟೂತ್ ಇನ್–ಇಯರ್ ಹೆಡ್‌ಫೋನ್‌ನ ಅಸಲಿ ಬೆಲೆ 26,300 ರೂಪಾಯಿ. ನಮ್ಮಲ್ಲಿ ಬರೀ 700 ರೂ.ಗೆ ದೊರೆಯುತ್ತವೆ. ಅದೇ ಫಿಕ್ಸಡ್ ರೇಟು, ಕಮ್ಮಿ ಇಲ್ಲ' ಎನ್ನುತ್ತಿದ್ದ ಅಲ್ಲಿನ ಒಬ್ಬ ವ್ಯಾಪಾರಿಯನ್ನು ಇವು ಅಸಲಿಯಾಗಿ ಕಂಪನಿ ಉತ್ಪನ್ನಗಳೇ? ಎಂದು ಕೇಳಿದರೆ, 'ಐಫೋನ್ ಕಾಪಿ, ಲೋಕಲ್ ಕಾಪಿ' ಎಂದು ಉತ್ತರಿಸುತ್ತಿದ್ದ.

ಇನ್ನು ವಾಚ್‌ಗಳು ಇಲ್ಲಿಯ ಮಾರಾಟದ ಮತ್ತೊಂದು ಉತ್ಪನ್ನ. ಯಾವ ಕಂಪನಿ ವಾಚ್ ಎಂದಾಗ, ಅವರು 'ಫಾಸ್ ಟ್ರ್ಯಾಕ್ ಕಂಪನಿ ಕಾಪಿ' ಎನ್ನುತ್ತಿದ್ದರು. 200ರಿಂದ 300 ರೂ.ಗೆ ಇಲ್ಲಿನ ತರಾವರಿ ವಿನ್ಯಾಸ ವಾಚ್‌ಗಳು ಮಾರಾಟಗೊಳ್ಳುತ್ತಿದ್ದವು. ಆ ಉತ್ಪನ್ನಗಳು ಬ್ರ್ಯಾಂಡೆಡ್ ಅಲ್ಲ ಎಂಬುದನ್ನು 'ಕಾಪಿ' ಶಬ್ದ ಬಳಕೆಯ ಮೂಲಕ ಆ ಮಾರಾಟಗಾರರೇ ಪರೋಕ್ಷವಾಗಿ ಹೇಳುತ್ತಿದ್ದರು. ಒಟ್ಟಾರೆ ಕಂಪನಿಯ ಅಸಲಿ ಮಾಲುಗಳಲ್ಲ ಎಂದು ಗೊತ್ತಿದ್ದೂ ಕೊಂಡವರೂ ಸಾಕಷ್ಟು ಮಂದಿ ಇರುವುದಂತೂ ಸುಳ್ಳಲ್ಲ ಎಂಬುದಕ್ಕೆ ಅಲ್ಲಿನ ವಹಿವಾಟಿನ ದೃಶ್ಯಗಳೇ ಸಾಕ್ಷಿ.

ಪಿಒಕೆ ತಾನಾಗಿಯೇ ಭಾರತದ ಭಾಗವಾಗಲಿದೆ



ಜೈಪುರ: ಪಾಕ್ ಆಕ್ರಮಿತ ಕಾಶ್ಮೀರ ತಾನಾಗಿಯೆ ಭಾರತದ ಭಾಗವಾಗಲಿದೆ ಎಂದು ಕೇಂದ್ರ ಸಚಿವ ವಿಕೆ ಸಿಂಗ್ ಹೇಳಿದ್ದಾರೆ. ರಾಜಸ್ಥಾನದ ದೌಸಾದಲ್ಲಿ ಬಿಜೆಪಿಯ ಪರಿವರ್ತನ್ ಯಾತ್ರೆಯ ಭಾಗವಾಗಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಸಚಿವರು, ಜಿ–20 ಶೃಂಗಸಭೆಯನ್ನು ದೆಹಲಿಯಲ್ಲಿ ಯಶಸ್ವಿಯಾಗಿ ಆಯೋಜಿಸುವ ಮೂಲಕ ಭಾರತ ತನ್ನ ಸಾಮರ್ಥ್ಯ, ಶಕ್ತಿಯನ್ನು ಜಗತ್ತಿಗೆ ತೋರಿಸಿದೆ ಎಂದು ಹೇಳಿದ್ದಾರೆ. ಶೀಘ್ರವೇ ಪಿಒಕೆ ತಾನಾ ಗಿಯೇ ಭಾರತದ ಭಾಗವಾಗಲಿದೆ ಎಂದು ಮಾಜಿ ಸೇನಾ ಮುಖ್ಯಸ್ಥರೂ ಆಗಿರುವ ಕೇಂದ್ರ ಸಚಿವರು ಹೇಳಿದ್ದಾರೆ. ಜಿ20ಯ ವೈಭವ ಭಾರತಕ್ಕೆ ಜಾಗತಿಕ ಮಟ್ಟದಲ್ಲಿ ವಿಶಿಷ್ಟ ಗುರುತನ್ನು ತಂದುಕೊಟ್ಟಿದೆ. ಜಗತ್ತಿಗೆ ಭಾರತದ ಶಕ್ತಿ–ಸಾಮರ್ಥ್ಯಗಳು ಸಾಬೀತಾಗಿದೆ. ಪ್ರಧಾನಿ ಮೋದಿ ನಾಯಕತ್ವದಲ್ಲಿ ಜಿ–20 ಸಭೆ ಅಭೂತಪೂರ್ವವಾಗಿತ್ತು. ಭಾರತವನ್ನು ಎಲ್ಲಾ ದೇಶಗಳೂ ಬಹಿರಂಗವಾಗಿ ಮುಕ್ತಕಂಠದಿಂದ ಶ್ಲಾಘಿಸಿವೆ ಎಂದು ಹೇಳಿದ್ದಾರೆ. ಇದೇ ವೇಳೆ ರಾಜಸ್ಥಾನ ದಲ್ಲಿನ ಕಾಂಗ್ರೆಸ್ ಸರ್ಕಾರವನ್ನು ಗುರಿಯಾಗಿಸಿಕೊಂಡು ವಾಗ್ದಾಳಿ ನಡೆಸಿರುವ ವಿಕೆ ಸಿಂಗ್, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಹಾಗೂ ಯುವಕರು, ರೈತರಿಗೆ ನೀಡಿದ್ದ ಭರವಸೆಗಳನ್ನು ಈವರೆಗೂ ಈಡೇರಿಸಿಲ್ಲ ಎಂದು ಆರೋಪಿಸಿದ್ದಾರೆ

ಕ್ರಿಪ್ಟೋ ಕರೆನ್ಸಿ ಹೂಡಿಕೆ ಸಂಬಂಧ ಆಮಿಷಕ್ಕೆ ಒಳಗಾಗದಿರಲು ಪೊಲೀಸ್ ಆಯುಕ್ತರ ಎಚ್ಚರಿಕೆ


ಮೈಸೂರು,ಸೆ.12(ಎಸ್‌ಬಿಡಿ)– ಕ್ರಿಪ್ಟೋ ಕರೆನ್ಸಿ ಹೂಡಿಕೆ ವ್ಯವಹಾರ ಸಂಬಂಧ ಆಮಿಷಕ್ಕೆ ಒಳಗಾಗದೆ ಎಚ್ಚರಿಕೆ ವಹಿಸುವಂತೆ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ರಿಪ್ಟೋ ಕರೆನ್ಸಿ ಹೂಡಿಕೆ ವ್ಯವಹಾರದ ನೆಪದಲ್ಲಿ ಲಕ್ಷಾಂತರ ರೂ. ವಂಚಿಸಿರುವ ಪ್ರಕರಣ ಸಂಬಂಧ ಈ ಹಿಂದೆಯೇ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗಿತ್ತು. ಆದಾಗ್ಯೂ ಸೈಬರ್ ಯೂನಿಟ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಮಾಜಿ ಉದ್ಯೋಗಿಯೇ 16 ಲಕ್ಷ ರೂ. ಹಣ ಪಾವತಿಸಿ, ವಂಚನೆಗೊಳಗಾಗಿದ್ದಾರೆ. ಈ ಸಂಬಂಧ ಸೆ.8ರಂದು ಪ್ರಕರಣ ದಾಖಲಾಗಿದೆ ಎಂದು ತಿಳಿಸಿದರು.

> ಟ್ರಾಫಿಕ್ ಸಿಗ್ನಲ್ ಪೋಲ್ಸ್‌ಗಳಲ್ಲಿ ಖಾಸಗಿ ಜಾಹೀರಾತುಗಳಿದ್ದರೆ ಎರಡು ದಿನಗಳಲ್ಲಿ ತೆರವು ಮಾಡಲಾಗುವುದು ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದರು. ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, ಸಂಚಾರ ನಿಯಮಗಳು ಹಾಗೂ ಮಾರ್ಗಸೂಚಿ ಫಲಕಗಳ ಅಳವಡಿಸಲು ಪ್ರಾಯೋಜಕರು ಬಂದಿದ್ದರು. ಆದರೆ ಅವರ ಮಾದರಿ ನೋಡಿದಾಗ ಶೇ.50ರಷ್ಟು ಜಾಹೀರಾತು ಇದ್ದಿದ್ದರಿಂದ ನಾನು ನಿರಾಕರಿಸಿದೆ. ಆ ರೀತಿ ಸಿಗ್ನಲ್‌ಗಳಲ್ಲಿ ಜಾಹೀರಾತು ಫಲಕಗಳಿದ್ದರೆ ಎರಡು ದಿನಗಳಲ್ಲಿ ತೆರವು ಮಾಡಲಾಗುವುದು ಎಂದರು.

ಸದ್ಯ ಅವರು ಕೂಡಲೇ ಸೈಬರ್ ಪೊಲೀಸರಿಗೆ ಮಾಹಿತಿ ನೀಡಿದ್ದರಿಂದ ಯಾವೆಲ್ಲಾ ಬ್ಯಾಂಕುಗಳಿಗೆ ಹಣ ಸಂದಾಯವಾಗಿದೆ ಎಂಬುದನ್ನು ಪತ್ತೆ ಹಚ್ಚಿ, ಸುಮಾರು 12 ಲಕ್ಷ ರೂ.ಗಳು ವಾಪಸ್ಸು ಸಿಗುವಂತೆ ಕ್ರಮ ವಹಿಸಲಾಗಿದೆ. ಟೆಲಿಗ್ರಾಂ ಗ್ರೂಪ್‌ನಲ್ಲಿ ಇನ್ವಿಟೇಷನ್ ಕಳುಹಿಸಿ, ಕ್ರಿಪ್ಟೋ ಕರೆನ್ಸಿಯಲ್ಲಿ ಹೂಡಿಕೆ ಮಾಡಿದರೆ ಹಣ ದುಪ್ಪಟ್ಟಾಗುತ್ತದೆ ಎಂದು ನಂಬಿಸಿ, ಲಕ್ಷಾಂತರ ರೂ. ವಂಚನೆ ಮಾಡಲಾಗುತ್ತಿದೆ. ಹಾಗಾಗಿ ಇದರ ಬಗ್ಗೆ ಸಾರ್ವಜನಿಕರು ತುಂಬಾ ಎಚ್ಚರಿಕೆ ವಹಿಸಬೇಕು ಎಂದು ಆಯುಕ್ತರು ಮನವಿ ಮಾಡಿದರು.

ಲಿಬಿಯಾದಲ್ಲಿ ಪ್ರವಾಹ: ಕನಿಷ್ಠ 2,300 ಜನ ಸಾವು





ಬೆಂಘಾಜಿ (ಲಿಬಿಯಾ): ಇಲ್ಲಿನ ಪೂರ್ವ ಕರಾವಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಭವಿಸಿದ ಭೀಕರ ಪ್ರವಾಹದಲ್ಲಿ ಸಿಲುಕಿ ಕನಿಷ್ಠ 2,300 ಜನರು ಮೃತಪಟ್ಟಿದ್ದು, 10 ಸಾವಿರ ಮಂದಿ ನಾಪತ್ತೆಯಾಗಿದ್ದಾರೆ. ಕರಾವಳಿ ನಗರ ಡೆರ್ನಾ ಪ್ರವಾಹಕ್ಕೆ ಸಿಲುಕಿ ತತ್ತರಿಸಿದ್ದು, ಸುಮಾರು ಲಕ್ಷ ಮಂದಿ ತಮ್ಮ ಮನೆಗಳನ್ನು ಕಳೆದುಕೊಂಡಿದ್ದಾರೆ. ನದಿ ತೀರದ ಹಲವು ಮನೆಗಳು ನೆಲಕ್ಕುರುಳಿವೆ. ಕಟ್ಟಡಗಳ ಅವಶೇಷಗಳು, ಕಾರುಗಳು ನೀರಿನಲ್ಲಿ ತೇಲಿ ಹೋಗುತ್ತಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ.

ಡೆರ್ನಾದಲ್ಲಿ ಮೃತದೇಹಗಳ ಗುರುತು ಪತ್ತೆಗಾಗಿ ಅವುಗಳನ್ನು ಹೊದಿಕೆಗಳಲ್ಲಿ ಸುತ್ತಿ ಸಾಲಾಗಿ ಮಲಗಿಸಿರುವ ದೃಶ್ಯಗಳು ಭೀಕರವಾಗಿವೆ. ತುರ್ತು ಸೇವಾ ಸಿಬ್ಬಂದಿ ಅವಿರತವಾಗಿ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದ್ದು, ಭಗ್ನಾವಶೇಷಗಳಡಿ ಸಿಲುಕಿದ್ದ ಸಾವಿರಾರು ಮೃತದೇಹಗಳನ್ನು ಹೊರತೆಗೆದರು. ಈವರೆಗೆ ಕನಿಷ್ಠ 700 ಮೃತದೇಹಗಳ ಅಂತ್ಯಸಂಸ್ಕಾರ ನೆರವೇರಿಸಲಾಗಿದೆ ಎಂದು ಪೂರ್ವ ಲಿಬಿಯಾದ ಆರೋಗ್ಯ ಸಚಿವರು ತಿಳಿಸಿದ್ದಾರೆ.

ಡೆರ್ನಾದಲ್ಲಿ ಪರಿಸ್ಥಿತಿ ಭೀಕರ ಮತ್ತು ಆಘಾತಕಾರಿಯಾಗಿದೆ. ಇನ್ನೂ ಸಾವಿರಾರು ಜನರು ಅವಶೇಷಗಳಡಿ ಸಿಲುಕಿದ್ದು ಅವರ ರಕ್ಷಣೆಗೆ ಮತ್ತಷ್ಟು ಬೆಂಬಲ ಬೇಕಿದೆ ಎಂದು ರಕ್ಷಣಾ ಕಾರ್ಯಾಚರಣೆ ನಡೆಸುತ್ತಿರುವ ಒಸಾಮಾ ಆಲಿ ತಿಳಿಸಿದ್ದಾರೆ. ನಗರದ ಹೊರವಲಯದಲ್ಲಿರುವ ಅಣೆಕಟ್ಟೆ ಒಡೆದ ಪರಿಣಾಮ ಭಾರಿ ಶಬ್ದವೊಂದು ಕೇಳಿಸಿತು. ಪ್ರವಾಹ ಉಂಟಾಗಿ ನದಿ ತೀರದ ನಗರವೇ ಕೊಚ್ಚಿ ಹೋಯಿತು ಎಂದು ಇಲ್ಲಿನ ನಿವಾಸಿ ಅಹ್ಮದ್ ಅಬ್ದುಲ್ಲಾ ತಮ್ಮ ನೋವು ತೋಡಿಕೊಂಡರು. ಭೀಕರ ಪ್ರವಾಹದ ಬೆನ್ನಲ್ಲೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಲಿಬಿಯಾಗೆ ನೆರವಿನ ಮಹಾಪೂರವೇ ಹರಿದು ಬಂದಿದೆ. ಪ್ರವಾಹಪೀಡಿತ ದೇಶದಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಸಲು ಸಿಬ್ಬಂದಿ ಸೇರಿದಂತೆ ಅಗತ್ಯ ನೆರವು ನೀಡುವುದಾಗಿ ಹಲವು ದೇಶಗಳು ಭರವಸೆ ನೀಡಿವೆ.

ಮುಕ್ತ ವಿವಿಯ 43 ವಿಷಯ, ಆನ್‌ಲೈನ್ ಕೋರ್ಸ್‌ಗೆ ಯುಜಿಸಿ ಅನುಮತಿ ನೀಡಿದೆ

- ಕುಲಪತಿ ಪ್ರೊ.ಶರಣಪ್ಪ ವೈದ್ಯನಾಥ್ ಹಲ್ಸೆ ಮಾಹಿತಿ
- 2023-24ನೇ ಸಾಲಿಗೆ ಪ್ರವೇಶಾತಿಗೆ ಯಾವುದೇ ಅಡ್ಡಿಯೂ ಇಲ್ಲ; ವಿದ್ಯಾರ್ಥಿಗಳಿಗೆ ಆತಂಕವೂ ಬೇಡ

ಮೈಸೂರು,ಸೆ.12(ಎಸ್‌ಪಿಎನ್)– ಮುಕ್ತ ವಿವಿಯ 43 ವಿಷಯ ಮತ್ತು ಕೆಲ ಆನ್‌ಲೈನ್ ಕೋರ್ಸ್‌ಗಳಿಗೆ 2023–24ನೇ ಸಾಲಿಗೆ ಪ್ರವೇಶಾತಿ ಪಡೆಯಲು ಯುಜಿಸಿಯಿಂದ ಅನುಮತಿ ದೊರಕಿದೆ ಎಂದು ಕುಲಪತಿ ಪ್ರೊ.ಶರಣಪ್ಪ ವೈದ್ಯನಾಥ್ ಹಲ್ಸೆ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು. ಮುಕ್ತ ವಿವಿಯಿಂದ 53 ವಿಷಯಗಳಗೆ 2023–24ನೇ ಸಾಲಿಗೆ ಮಾನ್ಯತೆ ನೀಡುವಂತೆ ಕೋರಿ ಯುಜಿಸಿಗೆ ಅರ್ಜಿ ಸಲ್ಲಿಸಲಾಗಿತ್ತು. ಯುಜಿಸಿ ನಮ್ಮ ಮನವಿಯನ್ನು ಪರಿಶೀಲಿಸಿ, 43 ವಿಷಯ ಮತ್ತು ಕೆಲ ಆನ್‌ಲೈನ್ ಕೋರ್ಸ್‌ಗಳಿಗೆ ಪ್ರವೇಶಾತಿ ಮಾಡಿಕೊಳ್ಳಲು ಅನುಮತಿಸಿದೆ ಎಂದರು. 2023ರ ಸೆ.11ರಂದು ಯುಜಿಸಿಯಿಂದ (ಎಫ್.ನಂ.30–30/2023/ಡಿಇಡಿ–II) ಮಾನ್ಯತೆ ನೀಡಿರುವ ಪತ್ರಕ್ಕೆ ಯುಜಿಸಿ ಕಾರ್ಯದರ್ಶಿ ಮನೀಶ್ ಆರ್.ಜೋಶಿ ಸಹಿ ಮಾಡಿರುವ ಪತ್ರವನ್ನು ಈ ಮೇಲ್ ಕಳುಹಿಸಿದ್ದು, ಇದರಿಂದ 2023–24ನೆ ಸಾಲಿನ ಪ್ರವೇಶಾತಿ ಪಡೆಯಲು ಬಯಸಿರುವ ಕೆಎಸ್‌ಓಯು ವಿದ್ಯಾರ್ಥಿಗಳಲ್ಲಿ ಯಾವುದೇ ಗೊಂದಲ ಬೇಡ. ದೇಶಾದ್ಯಂತ 66 ವಿವಿಗಳು ವಿವಿಧ ವಿಷಯಗಳಿಗೆ ಮಾನ್ಯತೆ ಕೋರಿ ಅರ್ಜಿ ಸಲ್ಲಿಸಲಾಗಿತ್ತು. ಇದರಲ್ಲಿ ಮುಕ್ತ ವಿವಿ 21ನೇ ವಿವಿಯಾಗಿ ಅರ್ಜಿ ಸಲ್ಲಿಸಿತ್ತು ಎಂದು ಸ್ಪಷ್ಟಪಡಿಸಿದರು.



ಇತ್ತೀಚೆಗೆ ಕೆಲವರು 2023–24ನೇ ಸಾಲಿನ ಮುಕ್ತ ವಿವಿ ಪ್ರವೇಶಾತಿ ಕುರಿತು ಮಾಧ್ಯಮಗಳ ಮೂಲಕ ಸುಳ್ಳು ಮಾಹಿತಿ ನೀಡಿರುವ ಕುರಿತು ಗಮನಕ್ಕೆ ಬಂದಿದ್ದು, ಇದಕ್ಕೆ ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗಬಾರದು ಎಂದು ಕರಾಮುವಿ ಕುಲಪತಿಗಳು ಮನವಿ ಮಾಡಿದ್ದಾರೆ.

ಒಂದು ಗಂಡಾದರೆ ಸಾಕು ಎನ್ನುವವರು ಮಗನಿಗೆ ಹೆಣ್ಣು ಸಿಗುತ್ತಿಲ್ಲ ಎಂದರೆ ಹೇಗೆ..!?

ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀ ವಿಶ್ವಪ್ರಸನ್ನ ತೀರ್ಥರ ಪ್ರಶ್ನೆ



ಮೈಸೂರು,ಸೆ.12(ಎಸ್‌ಪಿಎನ್)–ಇತ್ತೀಚಿನ ದಿನಗಳಲ್ಲಿ ಗಂಡು ಮಕ್ಕಳಿಗೆ ಹೆಣ್ಣು ಸಿಗುತ್ತಿಲ್ಲ ಎಂಬ ದೂರಿದೆ. ಆ ಪ್ರಶ್ನೆಗೆ ಉತ್ತರ ಸಮಾಜದ ನಡುವೆಯೇ ಇದೆ ಎಂದು ಉಡುಪಿ ಪೇಜಾವರ ಅಧೋಕ್ಷಜ ತೀರ್ಥ ಪೀಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳವರು ಅಭಿಪ್ರಾಯಪಟ್ಟರು.

ಮೈಸೂರು ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿನ ಟಿ.ಕೆ.ಬಡಾವಣೆಯ ಶ್ರೀ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಸಮಿತಿಯಿಂದ ಉಡುಪಿಯ ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರ 36ನೇ ಚಾತುರ್ಮಾಸ್ಯ ವ್ರತ ಸಂಕಲ್ಪ ಅಂಗವಾಗಿ ನಡೆದ ವಿದ್ವಾನ್ ಸತ್ಯನಾರಾಯಣ ಆಚಾರ್ಯ, ವಿಜಯೇಂದ್ರ ಆಚಾರ್ಯ ನಡುವೆ ಧಾರ್ಮಿಕ ಅಂಶಗಳ ಪ್ರಶ್ನೋತ್ತರ ಪ್ರವಚನ ಮಾಲೆಯಲ್ಲಿ ಶ್ರೀಗಳು, ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ನಗರ ಪ್ರದೇಶದ ಪೋಷಕರು ಒಂದು ಗಂಡಾದರೆ ಸಾಕು, ಇನ್ನೊಂದು ಮಗು ಬೇಡ ಎನ್ನುವ ಕಾಲಘಟ್ಟದಲ್ಲಿದ್ದೇವೆ. ಹೀಗಾದರೆ, ನಿಮ್ಮ ಮನೆಯ ಗಂಡು ಮಗನಿಗೆ ಸೂಕ್ತ ಹೆಣ್ಣು ಸಿಗುತ್ತಿಲ್ಲ ಎಂದರೆ ಹೇಗೆ? ಈ ಎಲ್ಲದಕ್ಕೂ ಪೋಷಕರ ಬಳಿಯೇ ಉತ್ತರವಿದೆ ಎಂದರು.

ಕಳೆದ ಕೆಲವು ದಿನಗಳ ಹಿಂದೆ ಚಂದ್ರನ ದಕ್ಷಿಣ ಧ್ರುವದ ಮೇಲೆ ಇಸ್ರೋ ವಿಕ್ರಂ ರೋವರ್‌ನ್ನು ಇಳಿಸಿ, ಚಂದ್ರನ ಮೇಲೆ ಏನಿದೆ? ಏನಿಲ್ಲ? ಎಂಬುದರ ಬಗ್ಗೆ ಸಂಶೋಧಿಸುತ್ತಿರುವುದಾಗ ಪುರಾಣದಲ್ಲಿ ಉಲ್ಲೇಖವಿರುವ ಚಂದ್ರಮಂಡಲ, ಚಂದ್ರಲೋಕ ಎರಡು ಒಂದೆಯೇ? ಬೇರೆಯೇ ಎನ್ನುವುದರ ಬಗ್ಗೆ ವಿದ್ವಾಂಸರಲ್ಲಿ ಜಿಜ್ಞಾಸೆ ಮೂಡುತ್ತಿದೆ. ಇದಕ್ಕೆ ತಕ್ಕ ಉತ್ತರ ಕಂಡುಕೊಳ್ಳಬೇಕಾದರೆ, ವಿದ್ವಾಂಸರು–ವಿಜ್ಞಾನಿಗಳು ಒಟ್ಟಿಗೆ ಕುಳಿತು ಈ ಬಗ್ಗೆ ಉತ್ತರ ಕಂಡುಕೊಳ್ಳಬೇಕು ಎಂದರು.

ನಮ್ಮ ವೇದ–ಉಪನಿಷತ್‌ಗಳಲ್ಲಿ ನಭೋಮಂಡಲದ ಬಗ್ಗೆ ಉಲ್ಲೇಖಗಳಿವೆ. ಇದರ ಬಗ್ಗೆ ವಿಸ್ತೃತ ಚರ್ಚೆಯಾಗಬೇಕು. ಉದಾಹರಣೆಗೆ ಸೂರ್ಯ ನಿಂತಲ್ಲೇ ನಿಲ್ಲುತ್ತಾನೆಯೇ? ಸೂರ್ಯ ಇತರೆ ನಕ್ಷತ್ರಗಳಂತೆ ಬೇರೆ ಗ್ರಹಗಳ ಸುತ್ತುತ್ತಾನೆಯೇ? ಇಲ್ಲವೇ? ಹಾಗೂ ಸೂರ್ಯನ ಉದಯ, ಸೂರ್ಯಾಸ್ತದ ಬಗ್ಗೆ ಜನರಲ್ಲಿ ಕೆಲವು ಗೊಂದಲವಿದೆ. ಇವೆಲ್ಲಾ ಅನುಮಾನಗಳಿಗೆ ಸಂಶೋಧನೆಗಳ ಮೂಲಕ ಉತ್ತರ ಕಂಡು ಕೊಳ್ಳಬೇಕಾಗಿದೆ ಎಂದು ವಿದ್ವಾನ್ ಸತ್ಯನಾರಾಯಣ ಆಚಾರ್ಯರು, ವಿಜಯೇಂದ್ರ ಆಚಾರ್ಯರ ಪ್ರಶ್ನೆಗೆ ಚುಟುಕಾಗಿ ಉತ್ತರಿಸಿದರು.

ಇತ್ತೀಚಿನ ದಿನಗಳಲ್ಲಿ ನಗರ ಪ್ರದೇಶದಲ್ಲಿ ಧರ್ಮಾಚರಣೆ ಕಡಿಮೆ ಆಗುತ್ತಿರುವ ಬಗ್ಗೆ ವಿದ್ವಾನ್ ವಿಜಯೇಂದ್ರ ಆಚಾರ್ಯರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಧರ್ಮಾಚರಣೆಗಳು, ಧರ್ಮಶಾಸ್ತ್ರದ ಪ್ರಕಾರವೇ ಆಚರಣೆಗೊಳ್ಳಬೇಕು. ಒಂದು ವೇಳೆ ಹಾಗೆ ಆಚರಣೆಗೆ ಸಾಧ್ಯವಾಗದಿದ್ದರೆ, ಅದಕ್ಕೆ ಸಂಬಂಧಿಸಿದ ಶ್ಲೋಕಗಳನ್ನು ಪಠಿಸುವ ಮೂಲಕ ಭಗವಂತನ ಸೇವೆ ಮಾಡಬಹುದು ಎಂದು ಸತ್ಯಾನಾರಾಯಣ ಉತ್ತರಿಸಿದರು.

ನಮ್ಮ ಬಡಾವಣೆ, ಗ್ರಾಮದಲ್ಲಿ ಅಥವಾ ಮೊಹಲ್ಲಾಗಳಲ್ಲಿ ಓರ್ವ ವ್ಯಕ್ತಿ ಮೃತಪಟ್ಟಿರುತ್ತಾನೆ. ಆತನ ಮಕ್ಕಳು ಶವಸಂಸ್ಕಾರ ಮಾಡಲು ಲಭ್ಯವಿರುವುದಿಲ್ಲ. ಅಂತಹ ಸಂದರ್ಭದಲ್ಲಿ ಊರಿನ ಮುಖಂಡರ ನೇತೃತ್ವದಲ್ಲಿ ಸತ್ತ ವ್ಯಕ್ತಿಗೆ ಶಾಸ್ತ್ರದ ಪ್ರಕಾರವೇ ಶವಸಂಸ್ಕಾರ ನಡೆಸಬೇಕು. ಮೃತ ವ್ಯಕ್ತಿ ಮಕ್ಕಳು ವಿದೇಶದಲ್ಲಿದ್ದರೆ ಶವಸಂಸ್ಕಾರಕ್ಕೆ ಅವರು ಬರುವವರೆಗೂ ಕಾಯುವ ಅವಶ್ಯಕತೆ ಇಲ್ಲ. ಅಲ್ಲದೆ, ಮೃತ ವ್ಯಕ್ತಿಯ ಮಕ್ಕಳು ಶವಸಂಸ್ಕಾರದ ನಂತರ ಬಂದರೆ, ಆ ದೋಷಕ್ಕೂ ಶಾಸ್ತ್ರದಲ್ಲಿ ಪರಿಹಾರವಿದೆ ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಗೋವುಗಳ ಹತ್ಯೆ ಕುರಿತು ಸಮಾಜದಲ್ಲಿ ಹಲವು ಪ್ರಶ್ನೆಗಳು ಉದ್ಭವಿಸುತ್ತಿವೆ ಇದಕ್ಕೆ ಶಾಸ್ತ್ರದಲ್ಲಿ ಉತ್ತರವಿದೆಯೇ ಎಂದು ವಿಜಯೇಂದ್ರ ಆಚಾರ್ಯರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸತ್ಯನಾರಾಯಣ ಆಚಾರ್ಯ, ಗೋವುಗಳ ದೇಹದಲ್ಲಿ ದೇವತೆಗಳ ವಾಸಸ್ಥಾನವಾಗಿದ್ದು, ಇದನ್ನು ಕೊಲ್ಲುವುದು ಸೂಕ್ತವಲ್ಲ. ಮಾಂಸಾಹಾರವನ್ನು ಸಂಪೂರ್ಣ ನಿಷೇಧಿಸಬೇಕೇ ಎಂಬ ವಾದಕ್ಕೆ, ಮಾಂಸಾಹಾರ ಸಂಪೂರ್ಣ ನಿಷೇಧ ಬೇಕಿಲ್ಲ. ಉದಾಹರಣೆಗೆ ಶ್ರಮಿಕರು, ಸೈನಿಕರು ಇತರೆ ವರ್ಗದ ಜನರಿಗೆ, ಮಾಂಸಾಹಾರ ಅಗತ್ಯ. ಅಂತಹವರು ಮಾಂಸ ಸೇವಿಸಬಹುದು. ಆದರೆ, ವೇದ–ಉಪನಿಷತ್ ಪಠಿಸುವವರಿಗೆ ಮಾಂಸಾಹಾರ ಬೇಕಿಲ್ಲ ಎಂಬ ಅಂಶ ಶಾಸ್ತ್ರದಲ್ಲಿ ಉಲ್ಲೇಖವಿದೆ ಎಂದರು.

ಭೀಮನ ವಿಗ್ರಹಕ್ಕೆ ಇಂದಿಗೂ ಪೂಜೆ ಸಲ್ಲಿಕೆಯಾಗುತ್ತಿಲ್ಲ ಎಂಬ ಸಭಿಕರೊಬ್ಬರ ಪ್ರಶ್ನೆಗೆ ಉತ್ತರಿಸಿದ ಅವರು, ಭೀಮನ ವಿಗ್ರಹ ಯಾವ ಸ್ವರೂಪದಲ್ಲಿರಬೇಕು ಎಂಬುದರ ಬಗ್ಗೆ ಪಂಡಿತರಲ್ಲೇ ಸ್ವಲ್ಪ ಗೊಂದಲವಿದೆ. ಇದನ್ನು ಪರಿಹರಿಸಿಕೊಂಡು ಭೀಮನ ವಿಗ್ರಹ ತಯಾರಿಸಬೇಕಾಗಿದೆ. ಏಕೆಂದರೆ, ಭೀಮನ ಆಕೃತಿ, ಎಷ್ಟು ಎತ್ತರದ್ದು, ಎಷ್ಟು ಗಾತ್ರದ್ದೂ ಎಂಬುದನ್ನು ಅಧ್ಯಯನ ನಡೆಸಿ ವಿಗ್ರಹ ತಯಾರಿಸಬೇಕಾಗಿದೆ ಎಂದು ವಿದ್ವಾನ್ ಸತ್ಯನಾರಾಯಣ ಉತ್ತರಿಸಿದರು. ನಂತರ ವಿದುಷಿ ಸಾಧ್ವಿನಿಕೊಪ್ಪ ಅವರು ಭಕ್ತಿ–ಭಾವಗೀತೆಗಳನ್ನು ಹಾಡಿ, ಸಭಿಕರ ಮನಸೂರೆಗೊಂಡರು.

ಮೈಸೂರು ಮಿತ್ರ

ಬಸವನಬೆಟ್ಟ ಬಳಿ ಕ್ಯಾಂಟರ್ ಮಗುಚಿ

ಮಹಿಳೆ ಸಾವು, 25ಕ್ಕೂ ಹೆಚ್ಚು ಮಂದಿಗೆ ಗಾಯ



ಹಲಗೂರು, ಸೆ.12– ಭಕ್ತರನ್ನು ಕರೆದೊಯ್ಯುತ್ತಿದ್ದ ಕ್ಯಾಂಟರ್ ಮಗುಚಿ ಓರ್ವ ಮಹಿಳೆ ಸಾವನ್ನಪ್ಪಿ, 25ಕ್ಕೂ ಹೆಚ್ಚು ಮಂದಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ಇಲ್ಲಿಗೆ ಸಮೀಪದ ಬಸವನಬೆಟ್ಟದ ತಾಳುಬೆಟ್ಟದ ಬಳಿ ಮಂಗಳವಾರ ಸಂಜೆ ಸಂಭವಿಸಿದೆ.

ಹೆಚ್.ಬಸಾಪುರ ಗ್ರಾಪಂ ವ್ಯಾಪ್ತಿಯ ಬಸವನಬೆಟ್ಟದ ತಾಳುಬೆಟ್ಟದ ಮೂರನೇ ತಿರುವಿನಲ್ಲಿ ಕ್ಯಾಂಟರ್ ಮಗುಚಿ ಈ ದುರ್ಘಟನೆ ಸಂಭವಿಸಿದ್ದು, ಘಟನೆಯಲ್ಲಿ ಮಳವಳ್ಳಿ ತಾಲೂಕಿನ ತಮ್ಮಡಹಳ್ಳಿ ಗ್ರಾಮದ ಶೋಭಾ (40) ಸ್ಥಳದಲ್ಲೇ ಸಾವನ್ನಪ್ಪಿದರೆ, 25ಕ್ಕೂ ಅಧಿಕ ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಮಳವಳ್ಳಿ ತಾಲೂಕಿನ ತಮ್ಮಡಹಳ್ಳಿ ಗ್ರಾಮದ ಸುಮಾರು 300 ಮಂದಿ 3 ಕ್ಯಾಂಟರ್‌ನಲ್ಲಿ ಹಲಗೂರು ಬಳಿಯ ಬಸವನಬೆಟ್ಟದ ಶ್ರೀಬಸವೇಶ್ವರಸ್ವಾಮಿ ದೇವಾಲಯಕ್ಕೆ ಗ್ರಾಮದೇವತೆ ಹಬ್ಬದ ನಿಮಿತ್ತ ಪೂಜೆಗೆ ಬಂದಿದ್ದರು. ಪೂಜೆ ಮುಗಿಸಿ ಹಿಂದಿರುಗುವಾಗ ಬಸವನಬೆಟ್ಟದ ತಾಳು ಬೆಟ್ಟದ ಮೂರನೇ ತಿರುವಿನಲ್ಲಿ ಚಾಲಕನ ಅಜಾಗರೂಕತೆಯಿಂದ ಕ್ಯಾಂಟರ್ ಮಗುಚಿದೆ. ದುರ್ಘಟನೆಯಲ್ಲಿ ಶೋಭಾ ಎಂಬ ಮಹಿಳೆ ಸಾವನ್ನಪ್ಪಿದ್ದಾರೆ. ಗಾಯಗೊಂಡವರನ್ನು ಮಳವಳ್ಳಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ.

ಹೆಚ್.ಬಸಾಪುರ ಗ್ರಾಪಂ ಉಪಾಧ್ಯಕ್ಷ ಬಿ.ಡಿ.ರಾಜೇಂದ್ರ ಮಾತನಾಡಿ, 2012ರಲ್ಲಿ ಇದೇ ರಸ್ತೆಯಲ್ಲಿ ಭಾರಿ ಅಪಘಾತ ನಡೆದು 13 ಮಂದಿ ಮೃತಪಟ್ಟಿದ್ದರು. ಘಟನೆ ನಡೆದು 10 ವರ್ಷಗಳು ಕಳೆದಿದ್ದು, ಇದುವರೆಗೂ ಯಾವುದೇ ಕ್ರಮ ವಹಿಸಿಲ್ಲ. ಇಲ್ಲಿ ರಸ್ತೆ ಅಗಲೀಕರಣ ಮಾಡುವ ಅಗತ್ಯ ಇದೆ. ರಸ್ತೆ ಕಡಿದಾಗಿದ್ದು, ತುಂಬಾ ಇಳಿಜಾರಿದೆ. ವಾಹನಗಳು ವೇಗವಾಗಿ ಇಳಿಯುವಾಗ ಹಲವು ಅಪಘಾತ ಸಂಭವಿಸಿ ಸಾಕಷ್ಟು ಸಾವು ನೋವುಗಳಾಗಿದ್ದು, ತಾಲೂಕು ಆಡಳಿತ ಕೈ ಕಟ್ಟಿ ಕುಳಿತಿದೆ. ಇನ್ನಾದರು ಎಚ್ಚೆತ್ತುಕೊಂಡು ರಸ್ತೆ ಅಗಲೀಕರಣ ಹಾಗೂ ತಡೆಗೋಡೆ ನಿರ್ಮಾಣ ಮಾಡಬೇಕಿದೆ ಎಂದು ಒತ್ತಾಯಿಸಿದರು.

ಸ್ಥಳಕ್ಕೆ ಹಲಗೂರು ಠಾಣೆ ಎಸ್ಐ ಬಿ.ಮಹೇಂದ್ರ ಮತ್ತು ಸಿಬ್ಬಂದಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಬದಲಾಗದಿರಲಿ



ಮಂಡ್ಯ, ಸೆ.12– ರಾಜ್ಯದಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಬದಲಾಗದೆ ಯಥಾವತ್ತಾಗಿ ಮುಂದುವರಿಯಲಿ ಎಂದು ಬದುಕು ಬೆಳಕು ಸೇವಾ ಸಮಿತಿ ಅಧ್ಯಕ್ಷ ಹೆಚ್.ಆರ್.ಅರವಿಂದ್ ಒತ್ತಾಯಿಸಿದರು.

ತಾಲೂಕಿನ ಜೋಡಿ ಹೊಡಾಘಟ್ಟ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಬದುಕು ಬೆಳಕು ಸೇವಾ ಸಮಿತಿ, ದಿ.ಡಾ.ರಾಮೇಗೌಡ ಸ್ಮರಣಾರ್ಥ, ನಿವೃತ್ತ ಶಿಕ್ಷಕ ಕೆ.ಮಾಯಿಗಶೆಟ್ಟಿ ಸೇವಾ ಸಮಿತಿ, ಮಾತೃಶ್ರೀ ಎಜುಕೇಷನ್ ಮತ್ತು ಸೋಶಿಯಲ್ ಟ್ರಸ್ಟ್ ಕೀಲಾರ ವತಿಯಿಂದ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಅಂಗವಾಗಿ ಶಿಕ್ಷಕರಿಗೆ ಅಭಿನಂದನೆ ಮತ್ತು ಮಾಜಿ ರಾಷ್ಟ್ರಪತಿ ಸರ್ವಪಲ್ಲಿ ಡಾ.ರಾಧಾಕೃಷ್ಣನ್ ಕುರಿತು ನಡೆದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಜಾರಿಯಲ್ಲಿದ್ದ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಬದಲಾಯಿಸಬಾರದು. ಇದರಿಂದ ಕೌಶಲ್ಯಾಧಾರಿತ ಶಿಕ್ಷಣದಿಂದ ವಿದ್ಯಾರ್ಥಿಗಳು ವಂಚನೆಗೊಳಗಾಗುತ್ತಾರೆ. ವಿಜ್ಞಾನ, ತಂತ್ರಜ್ಞಾನ, ವೈಜ್ಞಾನಿಕ, ಜಾನಪದ ಕಲೆ, ಸಂಸ್ಕೃತಿಯ ಸೊಗಡು, ಕ್ರೀಡೆಗೆ ನೀಡಿದ ಮಹತ್ವ ಎಲ್ಲವೂ ನಾಶವಾಗುತ್ತದೆ ಎಂದು ಎಚ್ಚರಿಸಿದರು.

ಮುಖ್ಯ ಶಿಕ್ಷಕ ಲಿಂಗರಾಜು ಮಾತನಾಡಿ, ಸರ್ಕಾರಿ ಶಾಲೆ ಎಂಬ ಯಾವುದೇ ಕೀಳರಿಮೆ ಬೇಡ. ಪ್ರಸ್ತುತ ಸರ್ಕಾರಿ ಶಾಲೆಯಲ್ಲಿ ಓದಿದ ಆಟೋ ಚಾಲಕರ, ಕೂಲಿ ಕಾರ್ಮಿಕರ, ರೈತ ವರ್ಗದ ಮಕ್ಕಳು ಕೆಎಸ್ಎಸ್, ಐಎಎಸ್ ತೇರ್ಗಡೆ ಹೊಂದಿ ಉನ್ನತ ಹುದ್ದೆ ಅಲಂಕರಿಸಿದ್ದಾರೆ ಎಂದರು.

ಈ ಸಂದರ್ಭ ಮಾಜಿ ರಾಷ್ಟ್ರಪತಿ ಸರ್ವಪಲ್ಲಿ ಡಾ.ರಾಧಾಕೃಷ್ಣನ್ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ಉತ್ತಮ ಶಿಕ್ಷಕರಾದ ಕೆ.ಟಿ.ನಾರಾಯಣ್‌ರಾಜುಅರಸು, ಕೃಷ್ಣೇಗೌಡ, ನಾಗರಾಜು, ಶಶಿಧರ ಈಚಗೆರೆ, ಪವಿತ್ರ, ಚಂದ್ರಮತಿ, ಶಿಲ್ಪ, ಚೈತ್ರ, ಶೃತಿ, ರಾಮಯ್ಯ ಅವರನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಮಾತೃಶ್ರೀ ಎಜುಕೇಶನ್ ಮತ್ತು ಸೋಶಿಯಲ್ ಟ್ರಸ್ಟ್ ಅಧ್ಯಕ್ಷ ವೀರಪ್ಪ, ಅಮೃತ ಲಯನ್ಸ್ ಸಂಸ್ಥೆಯ ಅಧ್ಯಕ್ಷ ಲೋಕೇಶ್ ಹಾಗೂ ಶಿಕ್ಷಕ ವೃಂದ ಭಾಗವಹಿಸಿದ್ದರು.

ಮಂಡ್ಯದಲ್ಲಿ ಯುವಕನ ಭೀಕರ ಹತ್ಯೆ

ಮಂಡ್ಯ, ಸೆ.12– ಯುವಕನೋರ್ವನನ್ನು ಮಾರಕಾಸ್ತ್ರಗಳಿಂದ ಭೀಕರವಾಗಿ ಕೊಚ್ಚಿ ಕೊಲೆ ಮಾಡಿರುವ ಘಟನೆ ಮಂಡ್ಯದ ಗಾಂಧಿನಗರದ 4ನೇ ಕ್ರಾಸ್‌ನಲ್ಲಿ ನಡೆದಿದೆ.



ಅಕ್ಷಯ್ ಅಲಿಯಾಸ್ ಗಟ್ಲು(22) ಹತ್ಯೆಗೊಳಗಾದ ಯುವಕ. ಹಳೇ ದ್ವೇಷದ ಹಿನ್ನೆಲೆಯಲ್ಲಿ ಕೊಲೆ ನಡೆದಿದೆ ಎಂದು ಶಂಕಿಸಲಾಗಿದೆ. ಗಾಂಧಿನಗರದ ಟೀ ಅಂಗಡಿಯೊಂದರಲ್ಲಿ ಅಕ್ಷಯ್ ಟೀ ಕುಡಿಯುತ್ತಿದ್ದ ವೇಳೆ ಏಕಾಏಕಿ ದಾಳಿ ನಡೆಸಿದ ಐವರು ದುಷ್ಕರ್ಮಿಗಳು ಆತನನ್ನು ಅಟ್ಟಾಡಿಸಿ ಮನಸೋ ಇಚ್ಛೆ ಹಲ್ಲೆ ಮಾಡಿದ್ದಾರೆ. ಈ ವೇಳೆ ಅಕ್ಷಯ್ ತಪ್ಪಿಸಿಕೊಳ್ಳಲು ಮನೆಯೊಂದರ ಕಾಂಪೌಂಡ್‌ಗೆ ನುಗ್ಗಿದರೂ ಬಿಡದೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿದ್ದಾರೆ. ಪರಿಣಾಮ ಅಕ್ಷಯ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಘಟನೆಯಿಂದ ಬಡಾವಣೆಯ ಜನರು ಬೆಚ್ಚಿ ಬಿದ್ದಿದ್ದು, ಸ್ಥಳಕ್ಕೆ ಪಶ್ಚಿಮ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ, ಮೃತದೇಹವನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ರವಾನಿಸಿದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪಶ್ಚಿಮ ಠಾಣೆ ಪೊಲೀಸರು ಆರೋಪಿಗಳ ಪತ್ತೆಗಾಗಿ ಬಲೆ ಬೀಸಿದ್ದಾರೆ.

ಹಸು ಕದ್ದು ಫಾರಂ ನಿರ್ಮಿಸಿದ್ದ ಚಾಲಾಕಿ ಕಳ್ಳ ಪೊಲೀಸರ ವಶಕ್ಕೆ

ನಾಗಮಂಗಲ, ಸೆ.12– ಹೈನುಗಾರಿಕೆ ನಡೆಸುವ ರೈತರು ಜೀವನೋಪಾಯಕ್ಕಾಗಿ ಸೀಮೆಹಸು ಖರೀದಿಸಿ ಹಾಲಿನ ಮೊತ್ತಕ್ಕಿಂತ ಅದರ ನಿರ್ವಹಣೆಗಾಗಿಯೇ ಪರಿತಪಿಸುತ್ತಾರೆ. ಆದರೆ ಲಕ್ಷಾಂತರ ರೂ. ಬೆಲೆಬಾಳುವ ಸೀಮೆಹಸು, ಎಮ್ಮೆ ಸೇರಿದಂತೆ ಇತರೆ ತಳಿಗಳ ಹಸುಗಳನ್ನು ಕದ್ದು ಇಲ್ಲೊಬ್ಬ ಭೂಪ ಫಾರಂ ನಿರ್ಮಿಸಿ, ಇದೀಗ ಪೊಲೀಸರ ಅತಿಥಿಯಾಗಿದ್ದಾನೆ.



ತಾಲೂಕಿನ ಬೆಳ್ಳೂರು ಹೋಬಳಿ ಚಾಕೇನಹಳ್ಳಿ ಗ್ರಾಮದ ರವಿಗೌಡ ಬಂಧಿತ ಖತರ್ನಾಕ್ ಕಳ್ಳ. ಈತ ಲಕ್ಷಾಂತರ ರೂ. ಮೌಲ್ಯದ ಹಸು, ಎಮ್ಮೆಗಳನ್ನು ಅಕ್ಕಪಕ್ಕದ ತಾಲೂಕು ಹಾಗೂ ಜಿಲ್ಲೆಗಳಲ್ಲಿ ಕಳ್ಳತನ ಮಾಡಿ ಹೈಟೆಕ್ ಫಾರಂ ನಿರ್ಮಿಸಿ ನಾನೊಬ್ಬ ಹಸುವಿನ ವ್ಯಾಪಾರಿ ಎಂದು ಗುರುತಿಸಿಕೊಂಡು ಮಾರಾಟ ಮಾಡುತ್ತಿದ್ದ ಎನ್ನಲಾಗಿದೆ.

ಹಲಗೂರಿನ ಶಿವರುದ್ರ ಚನ್ನಪಟ್ಟಣ ತಾಲೂಕಿನ ಮತ್ತಿಕೆರೆ ಗ್ರಾಮದ ಶಂಕರ್ ನಂದೇಗೌಡ, ಚನ್ನರಾಯಪಟ್ಟಣ ತಾಲೂಕಿನ ಉದಯಪುರ ಗ್ರಾಮದ ಅರವಿಂದ ಹೀಗೆ ಮಂಡ್ಯ, ರಾಮನಗರ, ಹಾಸನ ಜಿಲ್ಲೆಗಳ ವಿವಿಧ ಗ್ರಾಮಗಳಲ್ಲಿ ಹಲವು ಮಂದಿ ರೈತರ ಹಸು– ಎಮ್ಮೆಗಳು ಕಳ್ಳತನವಾಗಿದ್ದವು. ಈ ಸಂಬಂಧ ಆಯಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದೂರು ದಾಖಲಾಗಿದ್ದವು.

ಹಸುಗಳಿಗಾಗಿ ಹುಡುಕಾಟ ನಡೆಸುತ್ತಿದ್ದ ರೈತರಿಗೆ ಕೆ.ಆರ್.ಪೇಟೆ ಪೊಲೀಸ್ ಠಾಣೆ ಮಾಹಿತಿ ಮೇರೆಗೆ ನಾಗಮಂಗಲ ತಾಲೂಕಿನ ಚಾಕೇನಹಳ್ಳಿ ಗ್ರಾಮದ ರವಿ ಎಂಬಾತನ ಹೈಟೆಕ್ ಫಾರಂನಲ್ಲಿದ್ದ 25ಕ್ಕೂ ಹೆಚ್ಚು ಸೀಮೆಹಸು, ಎಮ್ಮೆ, ಆಡು ಕಂಡು ಸ್ಥಳೀಯರು ಹಾಗೂ ಫಾರಂ ಬಳಿಯ ದಾರಿಯಲ್ಲಿ ಹೋಗುವವರು ಅನುಮಾನಗೊಂಡಿದ್ದಾರೆ. ಜೊತೆಗೆ ಸುತ್ತಮುತ್ತಲ ಹಸು, ಎಮ್ಮೆಗಳು ಕಳ್ಳತನವಾಗುತ್ತಿದ್ದರಿಂದ ಪೊಲೀಸರಿಗೆ ಸ್ಥಳೀಯರು ಮಾಹಿತಿ ನೀಡಿದ್ದಾರೆ. ಇದರಿಂದ ಎಚ್ಚೆತ್ತ ಬೆಳ್ಳೂರು ಠಾಣೆ ಪೊಲೀಸರು ದಾಳಿ ನಡೆಸಿದ ಸಂದರ್ಭ ಖತರ್ನಾಕ್ ಕಳ್ಳ ರವಿ ಸಿಕ್ಕಿಬಿದ್ದಿದ್ದಾನೆ. ಬಳಿಕ ಪೊಲೀಸರು ಹಸು, ಎಮ್ಮೆ, ಆಡುಗಳನ್ನು ಕಳೆದುಕೊಂಡ ಮಾಲೀಕರಿಗೆ ಜಾನುವಾರುಗಳನ್ನು ಒಪ್ಪಿಸಿದ್ದು, ಆರೋಪಿಯನ್ನು ಬಂಧಿಸಿದ್ದಾರೆ.

ಸೆ.15, ಸಂವಿಧಾನ ಓದು ಕಾರ್ಯಕ್ರಮ

ಮಂಡ್ಯ, ಸೆ.12– ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಸೆ.15ರಂದು ಬೆಳಗ್ಗೆ 10 ಗಂಟೆಗೆ ಮಂಡ್ಯ ವಿಶ್ವವಿದ್ಯಾನಿಲಯ ಆವರಣದಲ್ಲಿ ಜಿಲ್ಲಾ ಮಟ್ಟದ ಸಂವಿಧಾನ ಓದುವ ಕಾರ್ಯಕ್ರಮ ನಡೆಯಲಿದೆ.

ಸಂವಿಧಾನದ ಬಗ್ಗೆ ಅರಿವು ಮೂಡಿಸುವ, ಪ್ರಾಮುಖ್ಯತೆ ತಿಳಿಸುವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ದಲಿತಪರ ಸಂಘಟನೆಗಳು, ಹಿಂದುಳಿದ ಸಂಘಟನೆಗಳು, ಇತರೆ ಸರ್ಕಾರೇತರ ಸಂಘ–ಸಂಸ್ಥೆಗಳು, ಸ್ವ–ಸಹಾಯ ಸಂಘಗಳು, ನಾಗರಿಕರು ಹಾಗೂ ಸರ್ಕಾರಿ ಅಧಿಕಾರಿ, ಸಿಬ್ಬಂದಿಗಳು ಪಾಲ್ಗೊಳ್ಳುವಂತೆ ಜಿಲ್ಲಾಡಳಿತ, ಮಂಡ್ಯ ವಿಶ್ವವಿದ್ಯಾನಿಲಯ ಮತ್ತು ಸಮಾಜ ಕಲ್ಯಾಣ ಇಲಾಖೆ ಆಹ್ವಾನಿಸಿದೆ ಎಂದು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಆಚರಣಾ ಸಮಿತಿ ಸದಸ್ಯ ಕಾರ್ಯದರ್ಶಿ ಮತ್ತು ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾವು ಕಚ್ಚಿ ವ್ಯಕ್ತಿ ಸಾವು

ನಾಗಮಂಗಲ, ಸೆ.12– ಹಾವು ಕಚ್ಚಿ ವ್ಯಕ್ತಿಯೋರ್ವ ಸಾವನ್ನಪ್ಪಿರುವ ಘಟನೆ ತಾಲೂಕಿನ ಮಡಕೆಹೊಸೂರು ಗ್ರಾಮದಲ್ಲಿ ನಡೆದಿದೆ.



ಪಟ್ಟಣದ ಪಾಲಾಗ್ರಹಾರ ರಸ್ತೆ ನಿವಾಸಿ ಧರ್ಮೇಶ್ ಚಂದ್ರ ಸಾವನ್ನಪ್ಪಿದವರು. ಈತ ಮಡಕೆಹೊಸೂರು ಗ್ರಾಮದಲ್ಲಿ ತೆಂಗಿನ ಕಾಯಿ ಸಾಗಿಸುವ ಕೆಲಸಕ್ಕೆ ಹೋಗಿದ್ದ ವೇಳೆ ಹಾವು ಕಚ್ಚಿದ್ದು, ತಕ್ಷಣ ಆತನನ್ನು ಬೆಳ್ಳೂರು ಕ್ರಾಸ್‌ನಲ್ಲಿರುವ ಬಿಜಿಎಸ್ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಆತ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ.



ಪಾಂಡವಪುರ ತಾಲೂಕಿನ ಎಲೆಕೆರೆ ಗ್ರಾಮದ ಆದರ್ಶ ವಿದ್ಯಾಲಯದ 6 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಉಚಿತವಾಗಿ ನೀಡುವ ಶೂ ಮತ್ತು ಸಾಕ್ಸ್‌ಗಳನ್ನು ಬಿಇಓ ಚಂದ್ರಶೇಖರ್ ವಿತರಿಸಿದರು. ಈ ವೇಳೆ ಬಿಆರ್‌ಸಿ ಪ್ರಕಾಶ್, ಎಸ್‌ಡಿಎಂಸಿ ಅಧ್ಯಕ್ಷ ಯೋಗೇಶ್, ಸದಸ್ಯ ಲಕ್ಷ್ಮೀಗೌಡ, ಇಸಿಓ ಅನಿತಾ, ಸಿಆರ್‌ಪಿ ನಾಗೇಶ್, ಶಿಕ್ಷಕ ಚಲುವರಾಜು ಹಾಜರಿದ್ದರು.

ಪ್ರವೇಶಾತಿಗೆ ಅರ್ಜಿ ಆಹ್ವಾನ

ಮಂಡ್ಯ, ಸೆ.12– ಮಂಡ್ಯ ವಿಶ್ವವಿದ್ಯಾನಿಲಯದ ಸರ್.ಎಂ.ವಿ ಸ್ನಾತಕೋತ್ತರ ಕೇಂದ್ರ, ತೂಬಿನಕೆರೆ ಹಾಗೂ ಮಂಡ್ಯ ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡಿರುವ ಎಲ್ಲಾ ಪ್ರಥಮ ದರ್ಜೆ ಕಾಲೇಜುಗಳ ಸ್ನಾತಕೋತ್ತರ ವಿಭಾಗಗಳಿಗೆ 2023–24ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಎಂಎ/ ಎಂಕಾಂ/ ಎಂಎಸ್ಸಿ / ಎಂ.ಎಸ್‌ಡಬ್ಲ್ಯೂಗೆ ಅರ್ಜಿ ಆಹ್ವಾನಿಸಲಾಗಿದೆ. ಸೆ.30 ಪ್ರವೇಶಾತಿಗೆ ಅರ್ಜಿ ಸಲ್ಲಿಸಲು ಕೊನೆ ದಿನ. ಮಾಹಿತಿಗೆ ದೂ: 08232–220039 ಅನ್ನು ಸಂಪರ್ಕಿಸಿ.

ಒಂದಂಶದ ಕನ್ನಡ ಕಾರ್ಯಕ್ರಮ ಘೋಷಿಸಬೇಕು



ಒಂದನೇ ಪುಟದಿಂದ

ದೊರೆಯುತ್ತದೆ ಎಂಬುದು ನಿಜ. ಈ ಕಾರಣದಿಂದಲೇ ಪೋಷಕರು ತಮ್ಮ ಮಕ್ಕಳಿಗೆ ಇಂಗ್ಲಿಷ್ ಕಲಿಕೆಯ ಒತ್ತಡ ಹೇರುತ್ತಾರೆ. ವೃತ್ತಿಗಾಗಿ ಇಂಗ್ಲಿಷ್ ಕಲಿಯಿರಿ, ಆದರೆ ತಾಯಿ ಭಾಷೆ ಕನ್ನಡವನ್ನು ಎಂದೂ ಮರೆಯಬೇಡಿ. ಕನ್ನಡ ಉಳಿಸಲು, ಕನ್ನಡದ ಅಸ್ಮಿತೆ ಗಟ್ಟಿಗೊಳಿಸಲು ಕನ್ನಡ ಭಾಷೆ ಕಲಿಕೆಯಿಂದ ವಿಮುಖರಾಗಬೇಡಿ ಎಂದು ಹಂಸಲೇಖ ಕಿವಿಮಾತು ಹೇಳಿದರು.

ಕನ್ನಡ ಭಾಷೆ ಕಾವ್ಯ, ಜಾನಪದ, ಸಾಂಸ್ಕೃತಿಕತೆಯ ಸಂಕೇತ. ಈ ಹಿನ್ನೆಲೆ ಕನ್ನಡ ಭಾಷೆಯ ಹಕ್ಕಿನ ಪ್ರಭುತ್ವ ಸಾಧಿಸಬೇಕು. ಕನ್ನಡ ಉಳಿಸಲು ಎಲ್ಲರೂ ಕೈ ಜೋಡಿಸಬೇಕು ಎಂದು ಕರೆ ನೀಡಿದರು.

ಸಿನಿಮಾ ರಂಗ ಕನ್ನಡ ಭಾಷೆಯನ್ನು ಕಾಪಾಡುವ ಪ್ರಮುಖ ಅಸ್ಮಿತೆಯಲ್ಲಿ ಒಂದು. ಕನ್ನಡ ಸಿನಿಮಾ ಸಾಹಿತ್ಯ ಕೂಡ ಕನ್ನಡ ಭಾಷೆಯನ್ನು ಬೆಳೆಸುತ್ತಿದೆ ಎಂದು ಸ್ಪಷ್ಟಪಡಿಸಿದರು. ಸಿನಿಮಾವನ್ನು ಎರಡನೆ ದರ್ಜೆ ಸಾಹಿತ್ಯ ಎಂಬ ಆರೋಪವನ್ನು ನಾನು ಒಪ್ಪುವುದಿಲ್ಲ. ಸಿನಿಮಾ ಸಾಹಿತ್ಯವನ್ನು ಸಾಹಿತ್ಯವೇ ಅಲ್ಲ ಎಂದು ಪರಿಗಣಿಸದಿದ್ದರೆ ಬೇಡ. ಆದರೆ ಸಿನಿಮಾ ಸಾಹಿತ್ಯ ಕಲಾದ್ಯೋಮವಾಗಿದೆ. ಕನ್ನಡ ಭಾಷೆಯ ಉಳಿವಿನ ಜೊತೆಗೆ ಸಿನಿಮಾ ಉದ್ಯೋಗ ಕೂಡ ನೀಡುತ್ತಿದೆ ಎಂದು ಹಂಸಲೇಖ ಅರ್ಥೈಸಿದರು.

ನಾನು ಕಾರ್ಮಿಕ ವರ್ಗದವ...: ದಸರಾ ಮಹೋತ್ಸವ ಉದ್ಘಾಟಿಸುವ ಈ ನನ್ನ ಸೌಭಾಗ್ಯವನ್ನು ಕೆಲವರು ಕಾವ್ಯ ನ್ಯಾಯವೆಂದು, ಮತ್ತೆ ಕೆಲವರು ಸಾಮಾಜಿಕ ನ್ಯಾಯವೆಂದು ವ್ಯಾಖ್ಯಾನಿಸಿದರು. ಕೃಷಿಕನಾದವನು, ಕಾರ್ಮಿಕರಾದವರು ಅರಮನೆಗೆ ಬರಬೇಕೆಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕನಸು ಕಂಡಿದ್ದರು. ಈ ಕಾರಣದಿಂದಲೇ ಸಂವಿಧಾನ ರಚನೆಗೂ ಮೊದಲೇ ಪ್ರಜಾ ಪ್ರತಿನಿಧಿ ಸಭೆ ಅಸ್ತಿತ್ವಕ್ಕೆ ತಂದಿದ್ದರು. ಕಾರ್ಮಿಕ ವರ್ಗದವನಾಗಿ ನಾನು ದಸರಾ ವೇಳೆ ಅರಮನೆಗೆ ಬರುತ್ತಿರುವೆ ಎಂದು ಹಂಸಲೇಖ ತಿಳಿಸಿದರು.

ಬೇರೆಯವರ ಆಯ್ಕೆಗೆ ಸಲಹೆ ನೀಡಿದ್ದೆ: ರಾಜೀವ್ ತಾರಾನಾಥ್, ದೇವನೂರು ಮಹದೇವ, ಗೋ.ರು.ಚನ್ನಬಸಪ್ಪ ಸೇರಿದಂತೆ ಇಂತಹ ಯಾರಾದರೊಬ್ಬರಿಂದ ದಸರಾ ಉದ್ಘಾಟನೆ ಮಾಡಿಸುವಂತೆ ನಾನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲಹೆ ನೀಡಿದ್ದೆ. ಆದರೆ ಅಂತಿಮವಾಗಿ ನನ್ನನ್ನೆ ದಸರಾ ಉದ್ಘಾಟಕರಾಗಿ ಆಯ್ಕೆ ಮಾಡಿದರು. ನಾಡಿನ ಜನರು ನೀಡುವ ಚೈತನ್ಯದಿಂದ ನಾನು ದಸರಾ ಜ್ಯೋತಿ ಬೆಳಗಿಸುತ್ತೇನೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಶಯದಂತೆ ಕಲಾ ಪ್ರತಿನಿಧಿಯಾಗಿ, ಪ್ರಜಾ ಪ್ರತಿನಿಧಿಯಾಗಿ ದಸರಾ ಉದ್ಘಾಟನೆಗೆ ಬರುತ್ತೇನೆ ಎಂದು ಹೇಳಿದರು.

ನನಗೆ ಕವಿ ಪಟ್ಟ ಬೇಡ: ಧರ್ಮಾತೀತವಾಗಿ ಹಾಗೂ ಜಾತ್ಯಾತೀತವಾಗಿ ಸಿನಿಮಾಗಳನ್ನು ನಿರ್ಮಾಣ ಮಾಡುತ್ತೇವೆ. ಸಿನಿಮಾ ಸಾಹಿತ್ಯ ರಚನೆಯ ಮೂಲಕ ಸಿನಿಮಾ ಸಾಹಿತಿಯಾಗಿಯೇ ನಾನು ಗುರುತಿಸಿಕೊಳ್ಳುತ್ತೇನೆ. ನನಗೆ ಕವಿ ಪಟ್ಟ ಬೇಡ. ನೈತಿಕ, ಸಾಹಿತ್ಯ ಹಾಗೂ ಶೈಕ್ಷಣಿಕ ಚಟುವಟಿಕೆಗಳಿಗೆ ಕವಿ ಸೀಮಿತವಾಗಿರುತ್ತಾನೆ. ಅದರ ಜೊತೆಗೆ ಕವಿಯನ್ನು ಎಡಪಂಥಿಯ, ಬಲಪಂಥಿಯ ಹಾಗೂ ಮಧ್ಯ ಎಂದು ವಿಂಗಡಣೆ ಮಾಡಲಾಗುತ್ತದೆ. ಆದ ಕಾರಣ ನನಗೆ ಕವಿ ಪಟ್ಟ ಬೇಡ, ಸಿನಿಮಾ ಸಾಹಿತಿಯಾಗಿಯೇ ಇರುತ್ತೇನೆ ಎಂದು ಹಂಸಲೇಖ ಸ್ಪಷ್ಟಪಡಿಸಿದರು.

ಬರಗಾಲದ ಹಿನ್ನೆಲೆ ಮೈಸೂರು ದಸರಾ ಮಹೋತ್ಸವವನ್ನು ಸರಳವಾಗಿ ಆಚರಣೆ ಮಾಡುವ ಆಗ್ರಹದ ಕುರಿತಂತೆ ಪ್ರತಿಕ್ರಿಯೆ ನೀಡಿದ ಹಂಸಲೇಖ, ರೈತರು ಹಲವು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ರೈತರ ನೋವಿಗೆ ನಾವು ಸ್ಪಂದಿಸಬೇಕು. ರೈತರಿಗೆ ಉತ್ತಮ ಮಾರುಕಟ್ಟೆ, ಪರ್ಯಾಯ ಬೆಳೆ ಸೇರಿದಂತೆ ಹಲವು ಮಾರ್ಗದರ್ಶನಗಳನ್ನು ಕೃಷಿ ತಜ್ಞರು ರೂಪಿಸಬೇಕು ಎಂದು ಒತ್ತಾಯಿಸಿದರು.

ರೈತನಿಗಾಗಿ ವಿಲೇಜ್ ಸಿಟಿ ಮಾಡಿ: ಇತ್ತೀಚೆಗೆ ದೇಶದಲ್ಲಿ ಸ್ಮಾರ್ಟ್ ಸಿಟಿಗಳನ್ನು ಮಾಡಲಾಗುತ್ತಿದೆ. ನನ್ನ ಪ್ರಕಾರ ದೇಶದ ಬೆನ್ನೆಲುಬಾದ ರೈತನಿಗಾಗಿ ವಿಲೇಜ್ ಸಿಟಿ ಮಾಡಬೇಕು. ಈ ಮೂಲಕ ರೈತರಿಗೆ ಅದ್ಭುತ ಭವಿಷ್ಯ ರೂಪಿಸಬೇಕು ಎಂದು ಹಂಸಲೇಖ ಸರ್ಕಾರಕ್ಕೆ ಸಲಹೆ ನೀಡಿದರು. ಆದರೆ ಅದ್ದೂರಿ ದಸರಾ ಆಚರಣೆ ಮಾಡಬೇಕೇ ಅಥವಾ ಸರಳ ದಸರಾ ಆಚರಣೆ ಮಾಡಬೇಕೇ ಎಂಬ ಬಗ್ಗೆ ಹಂಸಲೇಖ ಸ್ಪಷ್ಟವಾಗಿ ಏನನ್ನು ಹೇಳಲಿಲ್ಲ.

ದಸರಾ ಉದ್ಘಾಟಕರಾಗಿ ಸರ್ಕಾರ ಘೋಷಣೆ ಮಾಡಿದ ನಂತರ ಇದೇ ಮೊದಲ ಬಾರಿಗೆ ಮೈಸೂರಿಗೆ ಆಗಮಿಸಿದ ಹಂಸಲೇಖ ಅವರನ್ನು ಜಿಲ್ಲಾ ಪತ್ರಕರ್ತರ ಸಂಘದವರು ಮೈಸೂರು ಪೇಟ ತೊಡಿಸಿ ಸನ್ಮಾನಿಸಿದರು. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಉಪಾಧ್ಯಕ್ಷರಾದ ಬಸವಣ್ಣ, ಧರ್ಮಾಪುರ ನಾರಾಯಣ, ಕಾರ್ಯದರ್ಶಿ ರಂಗಸ್ವಾಮಿ ವೇದಿಕೆಯಲ್ಲಿದ್ದರು.

ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡಬೇಡಿ, ದಿಕ್ಕು ತಪ್ಪಿಸಬೇಡಿ...!

ಮುಂದೆ ನಿಂತು ಪರಿಹಾರ ಮಾಡುವವರು ಯಾರೂ ಇಲ್ಲದಂತಾಗಿದೆ. ಕನ್ನಡ ಚಿತ್ರರಂಗದಲ್ಲಿ ಸುಮಾರು 250 ಹೊಸ ನಿರ್ದೇಶಕರು ಹಾಗೂ 500 ಕ್ಕೂ ಹೆಚ್ಚು ನಿರ್ಮಾಪಕರಿದ್ದಾರೆ. ನಮಗೂ ಚಲನಚಿತ್ರ ವಾಣಿಜ್ಯ ಮಂಡಳಿಗೂ ಯಾವುದೇ ಸಂಬಂಧವಿಲ್ಲ ಎಂಬಂತೆ ಅವರು ವರ್ತಿಸುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈಗಿನ ಸಿನಿಮಾಗಳಲ್ಲಿ ಹಾಡುಗಳೇ ಇಲ್ಲದಂತಾಗಿದೆ. ಹೊಡಿ, ಬಡಿ ಎಂಬುದಕ್ಕೆ ಮಾತ್ರ ಸಿನಿಮಾ ಸೀಮಿತವಾಗಿದೆ. ಹಿಂದಿನ ಸಿನಿಮಾಗಳಲ್ಲಿ ಅಣ್ಣ, ತಂಗಿ, ಪ್ರೀತಿ ವಾತ್ಸಲ್ಯದ ಕಥೆಯಾಧಾರಿತ ಸಿನಿಮಾಗಳು ಬರುತ್ತಿದ್ದವು. ಹಬ್ಬದ ಸಡಗರದಲ್ಲಿ ಜನರು ಸಿನಿಮಾ ನೋಡುತ್ತಿದ್ದರು. ಆದರೆ ಈಗ ಇಂತಹ ಗಟ್ಟಿ ಕಥೆಗಳಿರುವ ಸಿನಿಮಾಗಳೇ ಬರುತ್ತಿಲ್ಲ ಎಂದು ಹಂಸಲೇಖ ಬೇಸರ ವ್ಯಕ್ತಪಡಿಸಿದರು.

ಅಲ್ಲದೆ ವಾರಕ್ಕೆ ಕನಿಷ್ಠ 15 ಸಿನಿಮಾ ಬಿಡುಗಡೆ ಆಗುವುದರಿಂದ ಪ್ರೇಕ್ಷಕನಿಗೆ ಯಾವ ಸಿನಿಮಾ ನೋಡಬೇಕು ಎಂಬ ಗೊಂದಲವಿದೆ. ಪ್ಯಾನ್ ಇಂಡಿಯಾ ಸಿನಿಮಾಗಳು ಹೆಚ್ಚಾಗಿ ಬರುತ್ತಿರುವ ಕಾರಣ ಭಾಷೆಯ ಮೇಲಿನ ಹಿಡಿತ ಕೂಡ ತಪ್ಪಿದೆ ಎಂದು ನೋವಿನಿಂದ ನುಡಿದರು. ನನ್ನ ಹಾಗೂ ರವಿಚಂದ್ರನ್ ಕಾಂಬಿನೇಷನ್‌ನಲ್ಲಿ ಸಿನಿಮಾ ಮಾಡಲು ಪ್ರಯತ್ನ ನಡೆಯುತ್ತಿದೆ. ಆದರೆ ಅದು ಸಾಧ್ಯವಾಗುತ್ತಿಲ್ಲ. ಈ ಹಿಂದೆ ಏನೂ ಗೊತ್ತಿಲ್ಲದೆ ಹಲವು ಪ್ರಯೋಗಗಳನ್ನು ಮಾಡಿ ಸಿನಿಮಾ ಗೆಲ್ಲಿಸುತ್ತಿದ್ದೆವು. ಆದರೆ ಈಗ ಎಲ್ಲಾ ರೀತಿಯ ಜ್ಞಾನವಿದ್ದರೂ ಏನು ಮಾಡದ ಪರಿಸ್ಥಿತಿಯಲ್ಲಿದ್ದೇವೆ ಎಂದು ಸ್ವತಃ ರವಿಚಂದ್ರನ್ ಅವರೇ ಹೇಳುತ್ತಾರೆ. ಒಟ್ಟಾರೆ ಹಿಂದಿನಂತೆ ಸಿನಿಮಾ ಎಂಬ ರುಚಿಕರವಾದ ಅಡುಗೆ ಮಾಡುವ ವಿಧಾನ ಹಿಡಿತಕ್ಕೆ ಸಿಗುತ್ತಿಲ್ಲ ಎಂದು ಹಂಸಲೇಖ ಹೇಳಿದರು. ತಮಿಳುನಾಡಿಗೆ ನಿರಂತರವಾಗಿ ನೀರು ಬಿಡುತ್ತಿದ್ದರೂ ಸಿನಿಮಾ ರಂಗದ ಯಾರೂ ಕೂಡ ದನಿ ಎತ್ತದಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಹಂಸಲೇಖ, ಸಿನಿಮಾ ಮಂದಿ ಮಾತ್ರವಲ್ಲ, ಯಾವ ಸಂಘ ಸಂಸ್ಥೆಗಳು ದನಿ ಎತ್ತುತ್ತಿಲ್ಲ ಎಂದು ಬೇಸರಿಸಿದರು.

ಮಹಿಷ ದಸರಾದ ಇತಿಹಾಸ ಕೆದಕಲ್ಲ; ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಜ್ಯೋತಿ ಬೆಳಗಿಸುವೆ ಅಷ್ಟೆ

ಮೈಸೂರು, ಸೆ.12(ಬಿಎಲ್‌ಯು)– ನಾನು ಮಹಿಷ ದಸರಾ ಆಚರಣೆಯ ಇತಿಹಾಸ ಕೆದಕಲು ಹೋಗಲ್ಲ. ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಜ್ಯೋತಿ ಬೆಳಗಿಸಿ ದಸರಾ ಉದ್ಘಾಟಿಸುತ್ತೇನೆ ಅಷ್ಟೆ ಎಂದು ಮೈಸೂರು ದಸರಾ ಉದ್ಘಾಟಕರೂ ಆದ ಖ್ಯಾತ ಚಲನಚಿತ್ರ ಸಂಗೀತ ನಿರ್ದೇಶಕ ಹಂಸಲೇಖ ಸ್ಪಷ್ಟಪಡಿಸಿದರು.

ಕೆಲವರು ಮಹಿಷ ದಸರಾ ಆಚರಣೆಗೆ ಮುಂದಾಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಹಂಸಲೇಖ, ಅದು ನನಗೆ ಸಂಬಂಧಿಸಿದ ವಿಚಾರವೇ ಅಲ್ಲ. ನಾನು ಆ ವಿಚಾರಗಳನ್ನು ಕೆದಕುವುದಿಲ್ಲ. ಬದಲಿಗೆ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಜ್ಯೋತಿ ಬೆಳಗಿಸುತ್ತೇನೆ ಅಷ್ಟೆ ಎಂದು ಹೇಳಿದರು. ಮಹಿಷ ದಸರಾ ಉದ್ಘಾಟನೆಗೆ ನಿಮ್ಮನ್ನು ಆಹ್ವಾನಿಸಿದರೆ ಸಮ್ಮತಿಸುತ್ತೀರಾ ಎಂಬ ಪ್ರಶ್ನೆಗೆ, ಎರಡು ಕಡೆ ಉದ್ಘಾಟನೆ ಮಾಡಲು ಸಾಧ್ಯವೆ? ಎಂದು ಮರು ಪ್ರಶ್ನಿಸಿದರು. ಯಾರಾದರೂ ನನ್ನ ಗೃಹ ಪ್ರವೇಶಕ್ಕೆ ಕರೆದರೆ, ಅಲ್ಲಿಗೆ ಹೋಗಿ ಅವರನ್ನು ಅಭಿನಂದಿಸಿ, ಆತಿಥ್ಯ ಸ್ವೀಕರಿಸಿ ಬರುತ್ತೇನೆ. ಅದು ಬಿಟ್ಟು ಪಕ್ಕದ ಮನೆಯಲ್ಲಿ ಏನಿದೆ, ಅವರೇನು ಮಾಡುತ್ತಿದ್ದಾರೆ ಎಂದು ನೋಡುವ ಉಸಾಬರಿ ನನಗೆ ಬೇಕಿಲ್ಲ. ಹಾಗೆಯೇ ದಸರಾ ಉದ್ಘಾಟನೆ ಮಾಡಲು ಸರ್ಕಾರ ನನ್ನನ್ನು ಆಹ್ವಾನಿಸಿದೆ. ಕಲಾ ಪ್ರತಿನಿಧಿಯಾಗಿ ನಾನು ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಜ್ಯೋತಿ ಬೆಳಗಿಸಿ ದಸರಾ ಉದ್ಘಾಟನೆ ಮಾಡುತ್ತೇನೆ. ಸರ್ಕಾರ ನನಗೆ ನೀಡಿರುವ ಜವಾಬ್ದಾರಿಯನ್ನಷ್ಟೇ ನಿರ್ವಹಿಸುತ್ತೇನೆ ಎಂದು ಹಂಸಲೇಖ ಸ್ಪಷ್ಟಪಡಿಸಿದರು. ಸನಾತನ ಧರ್ಮ ಕುರಿತಂತೆ ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ನೀಡಿರುವ ಹೇಳಿಕೆಗೆ ಯಾವುದೇ ಪ್ರತಿಕ್ರಿಯೆ ನೀಡದ ಹಂಸಲೇಖ, ನೋ ಕಾಮೆಂಟ್ಸ್ ಎಂದಷ್ಟೆ ಹೇಳಿದರು.

ಮಂಡ್ಯದಲ್ಲಿ ಭುಗಿಲೆದ್ದ ರೈತರ ಆಕ್ರೋಶ: ಹೋರಾಟ ಆರಂಭ

ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಖಂಡಿಸುತ್ತದೆ. ಇದು ಕಾವೇರಿ ಕೊಳ್ಳದ ರೈತರಿಗೆ ಕರಾಳ ತೀರ್ಪಾಗಿದೆ. ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀರು ಬಿಡಬಾರದು. ಈ ಕುರಿತು ಚರ್ಚಿಸಿ, ಹೋರಾಟದ ಬಗ್ಗೆ ತೀರ್ಮಾನ ಕೈಗೊಳ್ಳಲು ಬುಧವಾರ ಬೆಳಗ್ಗೆ 9ಗಂಟೆಗೆ ನಗರದ ಸರ್‌ಎಂವಿ ಪ್ರತಿಮೆ ಬಳಿ ಹಿತರಕ್ಷಣಾ ಸಮಿತಿಯೂ ಸರ್ವ ಸಂಘಟನೆಗಳು ಹಾಗೂ ನಾಗರಿಕರ ಸಭೆ ಕರೆಯಲಾಗಿದೆ ಎಂದರು.

ಕನ್ನಡ ಸೇನೆ ಪ್ರತಿಭಟನೆ: ತಮಿಳುನಾಡಿಗೆ ಕಾವೇರಿ ನೀರು ಬಿಡಬೇಕೆಂದು ಪ್ರಾಧಿಕಾರ ಮತ್ತೆ ಸೂಚನೆ ಕೊಟ್ಟಿರುವ ಹಿನ್ನೆಲೆಯಲ್ಲಿ ಮಂಡ್ಯದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಕನ್ನಡಸೇನೆ ಸೇರಿದಂತೆ ಕೆಲ ಸಂಘಟನೆಗಳು ಮಂಗಳವಾರ ರಾತ್ರಿ ಪ್ರತಿಭಟನೆ ಮಾಡಿ ರಸ್ತೆ ತಡೆ ನಡೆಸಿದರು.

ಜಿಲ್ಲಾಧ್ಯಕ್ಷ ಮಂಜು ನೇತೃತ್ವದಲ್ಲಿ ಮುತ್ತಿಗೆ ಹಾಕಿದ ಹೋರಾಟಗಾರರು ಪ್ರಾಧಿಕಾರ, ತಮಿಳುನಾಡು ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಸುನಂದಾ ಜಯರಾಂ, ಇಂಡುವಾಳು ಚಂದ್ರಶೇಖರ್, ಶಂಭೂನಹಳ್ಳಿ ಕೃಷ್ಣ, ಮಂಜು ಕನ್ನಡಸೇನೆ, ಮುದ್ದೇಗೌಡ, ಸಾತನೂರು ವೇಣುಗೋಪಾಲ್, ಶಿವು, ರವಿ, ಪ್ರಸನ್ನ, ಬೇಲೂರು ಶ್ರೀನಿವಾಸ್, ಶಿವಾಲಿ, ಯೋಗಾನಂದ್ ಭಾಗವಹಿಸಿದ್ದರು.

ಭೂಮಿ ತಾಯಿ ಹೋರಾಟ ಸಮಿತಿ ಪ್ರತಿಭಟನೆ: ಮತ್ತೊಂದೆಡೆ ಶ್ರೀರಂಗಪಟ್ಟಣದಲ್ಲೂ ಕಾವೇರಿ ಹೋರಾಟ ಭುಗಿಲೆದ್ದಿದ್ದು, ಕಾವೇರಿ ನದಿಗಿಳಿದು ಶ್ರೀರಂಗಪಟ್ಟಣದ ಸ್ನಾನಘಟ್ಟದಲ್ಲಿ ಕಾವೇರಿ ನದಿಗಿಳಿದು ಭೂಮಿ ತಾಯಿ ಹೋರಾಟ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು. ರೈತ ಮುಖಂಡ ನಂಜುಂಡೇಗೌಡರ ನೇತೃತ್ವದಲ್ಲಿ ಕಾವೇರಿ ನೀರು ನಿಯಂತ್ರಣ ಸಮಿತಿ, ಪ್ರಾಧಿಕಾರ, ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕಾವೇರಿ ನ್ಯಾಯಾಧೀಕರಣ ಪೋಸ್ಟರ್‌ಗೆ ಬೆಂಕಿಹಚ್ಚಿ ನದಿಯಲ್ಲಿ ಮುಳುಗಿ ಅನ್ನದಾತರು ಬಾಯಿ ಬಡಿದುಕೊಂಡು ಕಾವೇರಿ ವಿಚಾರದಲ್ಲಿ ರಾಜ್ಯದ ರೈತರನ್ನು ಮುಳುಗಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶ್ರೀರಂಗಪಟ್ಟಣದಲ್ಲಿ ಹೆದ್ದಾರಿಯಲ್ಲಿ ಬೆಂಕಿ ಹಾಕಿ, ವಾಹನ ತಡೆ



ಮಂಡ್ಯ, ಸೆ.12– ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ಮತ್ತೆ ನೀರು ಬಿಡುಗಡೆ ಮಾಡುವಂತೆ ಸೂಚನೆ ನೀಡಿರುವ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ವಿರುದ್ಧ ಶ್ರೀರಂಗಪಟ್ಟಣದಲ್ಲಿ ರೈತರು ಹೆದ್ದಾರಿ ತಡೆ ನಡೆಸಿದರು.

ನವದೆಹಲಿಯಲ್ಲಿ ನಡೆದ ಸಮಿತಿ ಸಭೆಯಲ್ಲಿ ತಮಿಳುನಾಡಿಗೆ ಇನ್ನೂ 15 ದಿನಗಳ ಕಾಲ ಪ್ರತಿನಿತ್ಯ 5 ಸಾವಿರ ಕ್ಯುಸೆಕ್ ನೀರು ಬಿಡಬೇಕೆಂದು ಸೂಚಿಸಿದ ಬೆನ್ನಲ್ಲೇ ರೈತ ಸಂಘದ ಆಶ್ರಯದಲ್ಲಿ ರೈತರು ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಟೈರ್‌ಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿ ವಾಹನ ಸಂಚಾರಕ್ಕೆ ಅಡ್ಡಿಪಡಿಸಿದರು. ರಾಜ್ಯ ಸರ್ಕಾರ ರೈತರ ಹಿತ ಕಾಪಾಡುವ ದೃಢ ನಿರ್ಧಾರ ಮಾಡಬೇಕು. ಸಮಿತಿ ಆದೇಶವನ್ನು ಧಿಕ್ಕರಿಸಬೇಕು. ಯಾವುದೇ ಕಾರಣಕ್ಕೂ ನೀರು ಹರಿಸಬಾರದು ಎಂದು ರೈತರು ಒತ್ತಾಯಿಸಿದರು. ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ನಿರಂತರ ನೀರು ಹರಿಸಿದ ಪರಿಣಾಮ ಕೆಆರ್‌ಎಸ್ ಜಲಾಶಯದಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದೆ. ಸದ್ಯಕ್ಕೆ ಕುಡಿಯುವ ನೀರಿಗೂ ಸಾಕಾಗುವುದಿಲ್ಲ. ವಾಸ್ತವ ಪರಿಸ್ಥಿತಿ ಪರಿಗಣಿಸದೆ ಏಕಾಏಕಿ ಮತ್ತೆ ನೀರು ಹರಿಸಿ ಎಂದಿರುವುದು ಅವೈಜ್ಞಾನಿಕ ನಿರ್ಧಾರ ಎಂದು ಕಿಡಿಕಾರಿದರು.

ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ತಮಿಳುನಾಡಿಗೆ ಹೆಚ್ಚಿನ ಪ್ರಮಾಣದ ನೀರು ಹರಿದು ಹೋಗಿದೆ. ಅಂದಾಜು 34 ಟಿಎಂಸಿ ನೀರು ಬಿಡಲಾಗಿದೆ. ಕರ್ನಾಟಕದ ಅಧಿಕಾರಿಗಳು ಮಾಹಿತಿ ನೀಡಿದರೂ ವಾಸ್ತವ ಪರಿಸ್ಥಿತಿ ತಿಳಿಯದೆ ನೀರು ಬಿಡುಗಡೆ ಮಾಡಿ ಎಂದು ಸೂಚಿಸಿರುವುದು ರೈತರಿಗೆ ಮಾಡಿದ ದ್ರೋಹವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಬಡಗಲಪುರ ನಾಗೇಂದ್ರ, ರೈತ ಸಂಘದ ಜಿಲ್ಲಾಧ್ಯಕ್ಷ ಕೆಂಪೂಗೌಡ ಸೇರಿದಂತೆ ಇನ್ನಿತರರಿದ್ದರು.



ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ



ಕುಶಾಲನಗರ, ಸೆ.12– ನೂರು ದಿನಗಳ ರಾಜ್ಯ ಸರ್ಕಾರದ ವೈಫಲ್ಯ, ರೈತ ವಿರೋಧಿ ನೀತಿ ಹಾಗೂ ಕೊಡಗು ವಿಶ್ವ ವಿದ್ಯಾನಿಲಯ ರದ್ದು ಹುನ್ನಾರದ ವಿರುದ್ಧ ಬಿಜೆಪಿ ಮಂಗಳವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿತು.

ಇಲ್ಲಿನ ಕಾರ್ಯಪ್ಪ ವೃತ್ತದಿಂದ ತಹಸೀಲ್ದಾರ್ ಕಚೇರಿಯವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಮಾಜಿ ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಮಾತನಾಡಿ, ಕಾಂಗ್ರೆಸ್ ಸರ್ಕಾರ ರೈತ ವಿರೋಧಿ ನೀತಿ ಅನುಸರಿಸುತ್ತಿದೆ. ಬಿಜೆಪಿ ಜಾರಿಗೊಳಿಸಿದ್ದ ರೈತಪರ, ವಿದ್ಯಾರ್ಥಿ ಪರ ಯೋಜನೆಗಳು ಸೇರಿದಂತೆ ಹಲವು ಯೋಜನೆಗಳನ್ನು ರದ್ದುಗೊಳಿಸಿದೆ. ಕಿಸಾನ್ ಸಮ್ಮಾನ್ ನಿಧಿ, ರೈತ ವಿದ್ಯಾನಿಧಿ, ಭೂಸಿರಿ ಯೋಜನೆ, ಶ್ರಮಶಕ್ತಿ ಯೋಜನೆ, ರೈತ ಸಂಪದ ಯೋಜನೆ, ಎಪಿಎಂಸಿ ಕಾನೂನು, ಕೃಷಿ ಭೂಮಿ ಮಾರಾಟ ಕಾನೂನು, ಜಿಲ್ಲೆಗೊಂದು ಗೋಶಾಲೆ ಯೋಜನೆ, ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಮತ್ತಿತರ ಜನಪರ, ರೈತಪರ ಯೋಜನೆಗಳನ್ನು ರದ್ದು ಮಾಡಿ ಕೃಷಿ ಕ್ಷೇತ್ರವನ್ನು ನಿರ್ಲಕ್ಷಿಸಿದೆ ಎಂದು ಆರೋಪಿಸಿದರು.

ಬಿಟ್ಟಿ ಯೋಜನೆಗಳಿಂದ ಅಭಿವೃದ್ಧಿ ಕುಂಠಿತಗೊಂಡಿದೆ, ದೇಶ ಹಾಗೂ ರಾಜ್ಯದ ಆರ್ಥಿಕತೆ ಅಧಃಪತನಕ್ಕೆ ಕೊಂಡೊಯ್ಯುತ್ತಿದ್ದಾರೆ. ಇದುವರೆಗೆ ಯಾವುದೇ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಿಲ್ಲ ಎಂದರು.

ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಬಿ.ಬಿ.ಭಾರತೀಶ್ ಮಾತನಾಡಿ, ಸರ್ಕಾರಕ್ಕೆ ನೂರು ದಿನ ತುಂಬಿದರೂ ಕೂಡ ರಸ್ತೆ ಗುಂಡಿ ಮುಚ್ಚುವ ಕಾರ್ಯ ಕೂಡ ಇದುವರೆಗೆ ಆರಂಭಿಸಿಲ್ಲ. ಉಚಿತ ಯೋಜನೆಗಳ ಸಾಕಾರಕ್ಕೆ ಬಿಜೆಪಿ ಜಾರಿಗೆ ತಂದಿದ್ದ ರೈತಪರ ಯೋಜನೆಗಳನ್ನು ಕಡಿತಗೊಳಿಸಲಾಗಿದೆ ಎಂದು ದೂರಿದರು. ಇದೇ ಸಂದರ್ಭ ತಹಸೀಲ್ದಾರ್ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಮುಖಂಡರಾದ ಕುಮಾರಪ್ಪ, ಎಂ.ವಿ.ನಾರಾಯಣ, ಜಿ.ಎಲ್.ನಾಗರಾಜು, ಗಣಿಪ್ರಸಾದ್, ಕೃಷ್ಣಪ್ಪ, ಗೌತಮ್, ಉಮಾ ಶಂಕರ್, ಕೆ.ಜಿ.ಮನು, ಜಯವರ್ಧನ್, ಗಣಪತಿ, ವರದ ಚಂದ್ರಶೇಖರ್, ನವನೀತ್, ರಾಮನಾಥನ್, ಬೋಸ್ ಮೊಣ್ಣಪ್ಪ, ಚರಣ್, ರೂಪ, ವೇದಾವತಿ, ರುಕ್ಮಿಣಿ, ಶೋಭಾ ಪ್ರಕಾಶ್, ಬನಶಂಕರಿ, ಭಾಸ್ಕರ್ ನಾಯಕ್, ಪ್ರವೀಣ್, ನಿತ್ಯಾನಂದ, ರವಿ, ದೇವರಾಜ್, ಮಹೇಶ್, ಪ್ರಭಾಕರ್, ಮಣಿಕಂಠ, ಮೂಡ್ಲಿ ಗೌಡ ಚಂದ್ರು, ದಿನೇಶ್, ಪಟ್ಟು, ಚಿದಾನಂದ, ಸುಶೀಲ್, ಪ್ರದೀಪ್, ಡೈಮಂಡ್ ಮಣಿ, ಪುಂಡರಿಕಾಕ್ಷ, ಪ್ರವೀಣ್, ರಮೇಶ್, ವೈಶಾಕ್, ಆದರ್ಶ, ಸೋಮಣ್ಣ ಮತ್ತಿತರರು ಇದ್ದರು.

ಮಾಲ್ದಾರೆ ಬಳಿ ಹಾಡಹಗಲೇ ಹುಲಿ ದಾಳಿ

ಮೇಯಲು ಬಿಟ್ಟಿದ್ದ ಹಸು ಬಲಿ, ಸಾರ್ವಜನಿಕರಲ್ಲಿ ಆತಂಕ

ಸಿದ್ದಾಪುರ, ಸೆ.12– ಮನೆಯ ಸಮೀಪವೇ ಮೇಯಲು ಬಿಟ್ಟಿದ್ದ ಹಸುವೊಂದರ ಮೇಲೆ ಹುಲಿಯೊಂದು ದಾಳಿ ಮಾಡಿ ಬಲಿ ತೆಗೆದುಕೊಂಡಿರುವ ಘಟನೆ ವಿರಾಜಪೇಟೆ ತಾಲೂಕಿನ ಮಾಲ್ದಾರೆ ಸಮೀಪದ ಆಸ್ಥಾನ ಹಾಡಿಯಲ್ಲಿ ಹಾಡಹಗಲಿನಲ್ಲಿ ಸಂಭವಿಸಿದೆ.

ಹಸುವನ್ನು ಮೇಯಲು ಬಿಟ್ಟು ಮನೆಗೆ ಊಟಕ್ಕೆ ತೆರಳಿದ ಸಂದರ್ಭದಲ್ಲಿ ಸ್ಥಳೀಯರ ಕಣ್ಣೆದುರಲ್ಲೇ ಹುಲಿ ದಾಳಿ ಮಾಡಿದೆ. ಈ ವೇಳೆ ಜನರ ಕಿರುಚಾಟ ಕೇಳಿ ಹುಲಿ ಸಮೀಪದ ಅರಣ್ಯಕ್ಕೆ ನುಸುಳಿದ್ದು, ಸ್ಥಳೀಯರು ಭಯಭೀತರಾಗಿದ್ದಾರೆ.

ಸ್ವಾಮಿ ಎಂಬುವರಿಗೆ ಸೇರಿದ ಸುಮಾರು 2 ವರ್ಷ ಪ್ರಾಯದ ಹಸು ಹುಲಿ ದಾಳಿಗೆ ಬಲಿಯಾಗಿದ್ದು, 40 ಸಾವಿರ ನಷ್ಟ ಸಂಭವಿಸಿದೆ. ಪರಿಹಾರ ನೀಡಬೇಕೆಂದು ಅರಣ್ಯ ಇಲಾಖೆಗೆ ಮನವಿ ಮಾಡಿದ್ದಾರೆ. ಈ ಹಿಂದೆಯೂ ಸ್ವಾಮಿ ಅವರಿಗೆ ಸೇರಿದ ಹಸುವೊಂದನ್ನು ಹುಲಿ ದಾಳಿ ಮಾಡಿ ಗಂಭೀರ ಗಾಯಗೊಳಿಸಿತ್ತು. ಇದೀಗ ಮತ್ತೊಂದು ಹಸುವನ್ನು ಹುಲಿ ಬಲಿ ತೆಗೆದುಕೊಂಡಿದ್ದು, ಹಾಡಹಗಲಿನಲ್ಲೇ ಹುಲಿ ಕಾಣಿಸಿಕೊಳ್ಳುತ್ತಿದ್ದು, ಶಾಲಾ ವಿದ್ಯಾರ್ಥಿಗಳು, ಕಾರ್ಮಿಕರು, ಭಯಭೀತರಾಗಿದ್ದಾರೆ.

ಕಾಡು ಪ್ರಾಣಿಗಳ ಭಯದ ನಡುವೆ ಜೀವನ ನಡೆಯುತ್ತಿರುವ ಸುತ್ತಮುತ್ತಲಿನ ನಿವಾಸಿಗಳು ಮನೆಯಿಂದ ಹೊರ ಬರಲು ಸಾಧ್ಯವಾಗುತ್ತಿಲ್ಲ. ಕೂಡಲೇ ಹುಲಿ ಸೆರೆ ಹಿಡಿಯಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ. ಸ್ಥಳಕ್ಕೆ ಉಪ ವಲಯ ಅರಣ್ಯ ಅಧಿಕಾರಿ ಶರಣ್ ಕುಮಾರ್ ವಿಭೂತಿ, ಅರಣ್ಯ ರಕ್ಷಕ ಮಣಿಕಂಠ, ಸಿಬ್ಬಂದಿಗಳಾದ ಕೃಷ್ಣಪ್ಪ, ಶಶಿ ಸೇರಿದಂತೆ ಮತ್ತಿತರರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಸಂಕೇತ್ ಪೂವಯ್ಯ ಭೇಟಿ: ಹುಲಿ ದಾಳಿಗೆ ಹಸು ಬಲಿಯಾದ ಸ್ಥಳಕ್ಕೆ ಕೆಪಿಸಿಸಿ ವಕ್ತಾರ ಮೇರಿಯಂಡ ಸಂಕೇತ್ ಪೂವಯ್ಯ ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್ ಪೊನ್ನಣ್ಣ ಅವರ ಗಮನಕ್ಕೆ ಹುಲಿ ದಾಳಿ ವಿಷಯವನ್ನು ತಂದರು. ಕೂಡಲೇ ಪರಿಹಾರ ಹಾಗೂ ಹುಲಿಯ ಚಲನ–ವಲನ ಬಗ್ಗೆ ನಿಗಾವಹಿಸಲು ಅರಣ್ಯ ಇಲಾಖೆ ಅಧಿಕಾರಿಗಳಿಗೆ ದೂರವಾಣಿ ಮೂಲಕ ಶಾಸಕರು ಸೂಚನೆ ನೀಡಿದರು. ನಂತರ ಮಾತನಾಡಿದ ಸಂಕೇತ್ ಪೂವಯ್ಯ ಕಾಡುಪ್ರಾಣಿಗಳ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಶಾಸಕರು ಮುಖ್ಯಮಂತ್ರಿಗಳು ಹಾಗೂ ಅರಣ್ಯ ಸಚಿವರ ಗಮನ ಸೆಳೆದಿದ್ದು, ಅರಣ್ಯ ಸಚಿವರು ಜಿಲ್ಲೆಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಕಾಡುಪ್ರಾಣಿಗಳ ಹಾವಳಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಶಾಶ್ವತ ಯೋಜನೆಗಳನ್ನು ರೂಪಿಸಲಾಗುತ್ತಿದ್ದು, ಸದ್ಯದಲ್ಲೇ ಸಮಸ್ಯೆ ಬಗೆಹರಿಯಲಿದೆ ಎಂದರು. ಈ ಸಂದರ್ಭ ಗ್ರಾಪಂ ಉಪಾಧ್ಯಕ್ಷ ಕುನ್ನಣ್ಣ, ಸದಸ್ಯ ಕಿರಣ್, ಹನೀಫ, ಜಿಪಂ ಮಾಜಿ ಸದಸ್ಯ ಗಣೇಶ್ ಸೇರಿದಂತೆ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಹಾಜರಿದ್ದರು.

ಶೀಘ್ರದಲ್ಲೇ ಕಾಡುಪ್ರಾಣಿಗಳ ಹಾವಳಿ ತಡೆಗೆ ಶಾಶ್ವತ ಯೋಜನೆ: ಸಂಕೇತ್ ಪೂವಯ್ಯ



ಸೆ.14 ರಂದು ಉದ್ಯೋಗ ಮೇಳ

ಮಡಿಕೇರಿ, ಸೆ.12– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಸೆಪ್ಟೆಂಬರ್, 14 ರಂದು ಬೆಳಗ್ಗೆ 10.30 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಉದ್ಯೋಗ ಮೇಳ ನಡೆಯಲಿದೆ.

ಈ ಉದ್ಯೋಗ ಮೇಳದಲ್ಲಿ ಕಲ್ಯಾಣಿ ಮೋಟಾರ್ಸ್, ಮಡಿಕೇರಿ, ಮಾಂಡವಿ ಮೋಟಾರ್ಸ್, ಮೈಸೂರು, ಅಟೋ ಲೈವ್, ಮೈಸೂರು, ಎಸ್‌ಎಲ್‌ಎನ್ ಕಾಫಿ ಕೂಡಿಗೆ, ಸಮರ್ಥ ನಿಧಿ ಲಿ., ಮಡಿ ಕೇರಿ ತಮ್ಮ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದ್ದಾರೆ.

ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಈ ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು. ಅಭ್ಯರ್ಥಿಗಳು ವಿದ್ಯಾರ್ಹತೆಯ ಮೂಲ ದಾಖಲಾತಿಗಳು ಹಾಗೂ ಸ್ವ–ವಿವರಗಳ ಪ್ರತಿಗಳೊಂದಿಗೆ ಉದ್ಯೋಗ ಮೇಳದಲ್ಲಿ ಹಾಜರಾಗಲು ತಿಳಿಸಿದೆ ಹೆಚ್ಚಿನ ಮಾಹಿತಿಗೆ ದೂ.ಸಂ. 08272–225821 ನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ಉಮಾ ಅವರು ಕೋರಿದ್ದಾರೆ.

ವಿ.ಪೇಟೆ ತಾಲೂಕು ಬರಪೀಡಿತ: ಸಿಎಂ ಬಳಿಗೆ ನಿಯೋಗ

ಅಮ್ಮತ್ತಿನಾಡು ರೈತ ಸಂಘದ ವಾರ್ಷಿಕ ಸಭೆಯಲ್ಲಿ ನಿರ್ಣಯ

ವಿರಾಜಪೇಟೆ, ಸೆ.12– ವಿರಾಜಪೇಟೆ ತಾಲೂಕು ಬರಪೀಡಿತ ಪ್ರದೇಶವೆಂದು ಸರಕಾರ ಘೋಷಿಸಬೇಕು, ರೈತರ ಸಾಲ ಮನ್ನಾ ಮಾಡಬೇಕು ಹಾಗೂ ಕಾಡಾನೆಗಳ ದಾಳಿಯನ್ನು ನಿಯಂತ್ರಿಸಬೇಕೆಂದು ಮುಖ್ಯಮಂತ್ರಿಗಳ ಬಳಿ ನಿಯೋಗ ತೆರಳಿ ಮನವಿ ಸಲ್ಲಿಸಲು ಅಮ್ಮತ್ತಿನಾಡು ರೈತ ಸಂಘದ ಗೌರವ ಅಧ್ಯಕ್ಷ ಕಾವಾಡಿ ಚಂಡಯ್ಯ, ಗಣಪತಿ ಅವರ ಅಧ್ಯಕ್ಷತೆ ಯಲ್ಲಿ ನಡೆದ ಸಂಘದ ಮಹಾಸಭೆಯಲ್ಲಿ ತೀರ್ಮಾನಿಸಲಾಯಿತು.

ವಿರಾಜಪೇಟೆ ಸಮೀಪದ ಅಮ್ಮತಿ ಬಸವೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ 'ಅಮ್ಮತ್ತಿ ರೈತ ಸಂಘದ 11ನೇ ವಾರ್ಷಿಕ ಮಹಾಸಭೆ'ಯಲ್ಲಿ ಮಾತನಾಡಿದ ಅವರು, ರೈತರಿಗೆ 10 ಹೆಚ್.ಪಿ.ಮೋಟರ್‌ಗೆ ಉಚಿತ ವಿದ್ಯುತ್ ನೀಡಲು ಹಿಂದಿನ ಸರಕಾರ ನಿರ್ಧರಿಸಿತ್ತು. ಆದರೆ ಈಗಿನ ಸರಕಾರವು ರೈತರಿಗೆ ಸ್ಪಂದಿಸಿ ಸೆಸ್ಕಾಂ ಇಲಾಖೆಗೆ ಸೂಚನೆ ನೀಡುವಂತೆ ಕೋರಿದರು. ಅಮ್ಮತ್ತಿ ವ್ಯಾಪ್ತಿಯ ಗ್ರಾಮೀಣ ಭಾಗದ ರಸ್ತೆಗಳು ದುಸ್ಥಿತಿಯಲ್ಲಿದ್ದು ಸಂಬಂಧಪಟ್ಟ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಇತ್ತ ಗಮನ ಹರಿಸುವಂತಾಗಬೇಕು. ಹಾಗೂ ಪೌತಿ ಖಾತೆ ಇನ್ನಿತರ ಸೌಲಭ್ಯಗಳ ಬಗ್ಗೆ ಸಭೆಯಲ್ಲಿ ತಿಳಿಸಿದರು.



ರೈತ ಸಂಘದ ಕಾನೂನು ಸಲಹೆಗಾರ ಬಿದ್ದಂಡ ಸಿ. ಸುಬ್ಬಯ್ಯ ಮಾತನಾಡಿ, ರೈತರು ಸಮಯ ಪಾಲನೆ ಮಾಡಬೇಕು. ಹಿರಿಯರು ಮಾಡಿರುವಂತ ಭೂಮಿಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಶ್ರಮ ವಹಿಸಬೇಕು. ಕೃಷಿಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಂಪರ್ಕಿಸಿ ಅವರಿಂದ ಸಿಗುವ ಸೌಲಭ್ಯ ಮತ್ತು ಮಾಹಿತಿಯನ್ನು ಪಡೆದುಕೊಂಡು ಆಸ್ತಿ ಯನ್ನು ಉಳಿಸಿಕೊಳ್ಳುವ ಮೂಲಕ ಅಭಿವೃದ್ಧಿ ಪಡಿಸಿಕೊಳ್ಳುವಂತೆ ಕಿವಿಮಾತು ಹೇಳಿದರು.

ರೈತ ಸಂಘದ ಅಧ್ಯಕ್ಷ ಕೆ.ಎಂ.ಕುಶಾಲಪ್ಪ ಮಾತನಾಡಿದರು, ಗೌರವ ಕಾರ್ಯದರ್ಶಿ ಎಂ.ಜಿ.ಪೊನ್ನಪ್ಪ, ಜಂಟಿ ಕಾರ್ಯದರ್ಶಿ ಪಿ.ಬಿ.ಹರಿ ವಾರ್ಷಿಕ ವರದಿ ವಾಚಿಸಿದರು, ಮಾಚಿಮಂಡ ಸುರೇಶ್ ಅಯ್ಯಪ್ಪ ಸ್ವಾಗತಿಸಿ ವಂದಿಸಿದರು, ಸಭೆಯಲ್ಲಿದ್ದ ನೆಲ್ಲಮಕ್ಕಡ ಶಂಭು ಸೋಮಯ್ಯ, ಪಟ್ಟಡ ನರು ನಂಜಪ್ಪ, ಕೆ.ಪ್ರಶಾಂತ್ ಮಾದಯ್ಯ, ಕೆ.ಪಿ.ಪೂಣಚ್ಚ ಮತ್ತಿತರರು ಚರ್ಚೆಯಲ್ಲಿ ಭಾಗವಹಿಸಿದ್ದರು.

ಜನರಲ್ ತಿಮ್ಮಯ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮಡಿಕೇರಿ, ಸೆ.12– 2022–23 ನೇ ಸಾಲಿನಲ್ಲಿ ಹತ್ತನೇ ತರಗತಿ ಮತ್ತು ದ್ವಿತೀಯ ಪಿಯುಸಿ ಸಾರ್ವತ್ರಿಕ ಪರೀಕ್ಷೆಗಳಲ್ಲಿ ಗರಿಷ್ಠ ಅಂಕಗಳನ್ನು ಪಡೆದ ಕರ್ನಾಟಕ ಮೂಲ ನಿವಾಸಿ ಮಾಜಿ ಸೈನಿಕರ ಮಕ್ಕಳಿಗೆ 'ಜನರಲ್ ಕೆ.ಎಸ್.ತಿಮ್ಮಯ್ಯ' ನಗದು ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅ.31 ಕೊನೆಯ ದಿನವಾಗಿದೆ ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ

ಮಡಿಕೇರಿ, ಸೆ.12– ಸೆ.13 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಕುಶಾಲನಗರ, ಕೂಡಿಗೆ, ನಂಜರಾಯಪಟ್ಟಣ, ಸುಂಟಿಕೊಪ್ಪ, ಚೆಟ್ಟಳ್ಳಿ, ಸೋ.ಪೇಟೆ, ಶಾಂತಳ್ಳಿ, ಕುಮಾರಹಳ್ಳಿ, ಗೌಡಳ್ಳಿ, ಹೆಗ್ಗಡಮನೆ, ಅಬ್ಬೂರುಕಟ್ಟೆ, ಐಗೂರು, ಹೊಸಗುತ್ತಿ ಗಣಗೂರು ಗೋಣಿ ಮರೂರು, ಆಲೂರು ಸಿದ್ದಾಪುರ, ಮಾಲಂಬಿ, ಸಿದ್ದಲಿಂಗಪುರ, ಮಡಿಕೇರಿ ಪಟ್ಟಣ, ಬೋಯಿ ಕೇರಿ, ಗಾಳಿಬೀಡು, ಹುಂಡಾಮೇಸ್ತ್ರಿ ಪೇಟೆ, ಕಡಗದಾಳು, ಸಂಪಾಜೆ, ಭಾಗಮಂಡಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಮಹಿಳೆ ನಾಪತ್ತೆ



ಗೋಣಿಕೊಪ್ಪ ಸೆ.12– ತಿತಿಮತಿ ಜಂಗಲ್ ಹಾಡಿ ನಿವಾಸಿ ಮಾದ ಅವರ ಪತ್ನಿ ಚಿನ್ನಿ (65) ಶುಕ್ರವಾರದಿಂದ ಕಾಣೆಯಾಗಿದ್ದಾರೆ. ಮನೆಯಿಂದ ಹೋದವರು ಹಿಂದಿರುಗಿ ಬಂದಿಲ್ಲ ಎಂದು ಮಗ ಕಾಳ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಸುಳಿವು ಸಿಕ್ಕವರು ದೂ. ಸಂಖ್ಯೆ 08274247333 ಮಾಹಿತಿ ನೀಡಲು ಕೋರಿದೆ.

'ಸಂವಿಧಾನ ಪೀಠಿಕೆ ವಾಚನ' ಕಾರ್ಯಕ್ರಮ

ಕೊಡಗು ಜಿಲ್ಲೆಯಲ್ಲಿ 2 ಲಕ್ಷಕ್ಕೂ ಹೆಚ್ಚು ಜನರು ಹೆಸರು ನೋಂದಣಿ

ಮಡಿಕೇರಿ, ಸೆ.12– ಅಂತರ ರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಪ್ರಯುಕ್ತ ಸೆ.15 ರಂದು ಬೆಳಗ್ಗೆ 10 ಗಂಟೆಗೆ ನಗರದ ಕೊಡಗು ಗೌಡ ಸಮಾಜದ ಸಭಾಂಗಣದಲ್ಲಿ ನಡೆಯುವ 'ಸಂವಿಧಾನ ಪೀಠಿಕೆ ವಾಚನ' ಕಾರ್ಯಕ್ರಮದಲ್ಲಿ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಪಾಲ್ಗೊಳ್ಳಲಿದ್ದು, ಕಾರ್ಯಕ್ರಮ ಯಶಸ್ಸಿಗೆ ಎಲ್ಲರೂ ಸಹಕರಿಸುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ ಕೋರಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಪ್ರಯುಕ್ತ ವಿವಿಧ ಸಮಾಜಗಳ ಮುಖಂಡರ ಜೊತೆ ಮಂಗಳವಾರ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಭಾರತ ಸಂವಿಧಾನ ಪ್ರಸ್ತಾವನೆಯನ್ನು ಓದುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆ ನಿಟ್ಟಿನಲ್ಲಿ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಸಮಾಜದ ಮುಖಂಡರು ಪಾಲ್ಗೊಂಡು ಕಾರ್ಯಕ್ರಮ ಯಶಸ್ಸುಗೊಳಿಸುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಅವರು ಮನವಿ ಮಾಡಿದರು.

ಜಿಲ್ಲೆಯಲ್ಲಿ 54 ಸಾವಿರ ಗುರಿಯಲ್ಲಿ ಈಗಾಗಲೇ 2 ಲಕ್ಷ ಕ್ಕೂ ಹೆಚ್ಚು ಜನರು ಹೆಸರು ನೋಂದಣಿ ಮಾಡಿದ್ದಾರೆ. ಸೆ.15 ರಂದು ಬೆಳಗ್ಗೆ 10 ಗಂಟೆಗೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರು ಕಾರ್ಯಕ್ರಮದಲ್ಲಿ ಪಾಲ್ಗೊಂಡು 'ಸಂವಿಧಾನ ಪೀಠಿಕೆ ವಾಚನ' ಮಾಡಲಿದ್ದಾರೆ. ಜನಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು. ಕೊಡಗು ಜಿಲ್ಲೆಯ 103 ಗ್ರಾ.ಪಂ.ಗಳಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯಕ್ರಮ ನಡೆಯಲಿದೆ. ಸ್ಥಳೀಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡು 'ಸಂವಿಧಾನ ಪೀಠಿಕೆ' ಓದಬಹುದಾಗಿದೆ ಎಂದರು. ಸೆ.15 ರ ಬೆಳಗ್ಗೆ 10 ಗಂಟೆ ವರೆಗೂ ಹೆಸರು ನೋಂದಣಿಗೆ ಅವಕಾಶವಿದ್ದು, ನೋಂದಣಿ ಮಾಡದಿರುವವರು ಹೆಸರು ನೋಂದಾಯಿಸಿಕೊಳ್ಳುವಂತೆ ಕೋರಿದರು.

ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ಪ್ರತಿಭಟನೆ



ಚಾಮರಾಜನಗರ, ಸೆ.12– ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ನಗರದಲ್ಲಿ ಮಂಗಳವಾರ ರಾಜ್ಯ ರೈತ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ದೇವಸ್ಥಾನದ ಸಮೀಪದ ಜನನ ಮಂಟಪದಿಂದ ಮೆರವಣಿಗೆ ಹೊರಟ ಪ್ರತಿಭಟನಾಕಾರರು ಭುವನೇಶ್ವರಿ ವೃತ್ತದ ಮೂಲಕ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಕಚೇರಿ ಮುಂಭಾಗ ಜಮಾಯಿಸಿ ಕೆಇಬಿ ಅಧಿಕಾರಿಗಳು ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ಮಳೆ ಇಲ್ಲದೇ ಬರಗಾಲ ಆವರಿಸಿದ್ದು, ಪಂಪ್‌ಸೆಟ್‌ಗಳಿಂದ ನೀರು ಹರಿಸಲು ಸಾಧ್ಯವಾಗದೇ ಬೆಳೆಗಳು ಒಣಗುತ್ತಿವೆ. ದಿನಕ್ಕೆ ಹಗಲು ವೇಳೆ 4 ಗಂಟೆ ವಿದ್ಯುತ್ ಸರಬರಾಜು ಮಾಡುತ್ತೇವೆ ಎಂದು ಹೇಳಿ ಕೇವಲ ಒಂದೆರಡು ಗಂಟೆ ಮಾತ್ರ ವಿದ್ಯುತ್ ನೀಡುತ್ತಿರುವುದು ಸರಿಯಲ್ಲ ಎಂದರು.

ಅಲ್ಲದೇ ವಿದ್ಯುತ್ ವ್ಯತ್ಯಯದಿಂದಾಗಿ ಮಕ್ಕಳ ವಿದ್ಯಾಭ್ಯಾಸ, ಕೈಗಾರಿಕೆಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಈ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಂಡು ಕೃಷಿಗೆ ಹಗಲು ವೇಳೆ ಕನಿಷ್ಠ 8 ಗಂಟೆ ನಿರಂತರ ವಿದ್ಯುತ್ ಸರಬರಾಜು ಮಾಡಲು ಹಾಗೂ ಗ್ರಾಮಾಂತರ ಪ್ರದೇಶಗಳಿಗೆ ಎನ್‌ಜೆವೈ ಫೀಡರ್‌ಗಳಿಗೆ 24 ಗಂಟೆ ವಿದ್ಯುತ್ ಸರಬರಾಜು ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಹೆಬ್ಬಸೂರು ಬಸವಣ್ಣ, ತಾಲೂಕು ಅಧ್ಯಕ್ಷ ಮರಿಯಾಲ ಮಹೇಶ್, ಪ್ರಧಾನ ಕಾರ್ಯದರ್ಶಿ ಮಹೇಶ್, ದೇಮಹಳ್ಳಿ ಪ್ರಸಾದ್, ಕೆರೆಹಳ್ಳಿ ಮಹೇಶ್, ಯಶ್ವಂತ್, ನಟರಾಜು, ಸಿದ್ದರಾಜು, ಶಿವಕುಮಾರ್, ಲಕ್ಷ್ಮಣ್, ಪ್ರಭು, ಸಂತೋಷ್, ಶೇಖರ್, ಚೆಲುವಣ್ಣ, ಮಲ್ಲೇಶ್, ಸುಂದರ ಮೂರ್ತಿ, ಚಿನ್ನಸ್ವಾಮಿ ಸೇರಿದಂತೆ ಇತರರಿದ್ದರು.

ಪ್ರಾಮಾಣಿಕ ಪ್ರಯತ್ನ, ಕಠಿಣ ಪರಿಶ್ರಮದಿಂದ ಯಶಸ್ಸು ಸಾಧ್ಯ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು



ಚಾಮರಾಜನಗರ, ಸೆ.12– ಪ್ರಾಮಾಣಿಕ ಪ್ರಯತ್ನ, ಕಠಿಣ ಪರಿಶ್ರಮದಿಂದ ಉನ್ನತ ಸಾಧನೆ ಮಾಡಿ ಯಶಸ್ಸು ಪಡೆಯಲು ಸಾಧ್ಯವಾಗುತ್ತದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ತಿಳಿಸಿದರು.

ನಗರದ ಹೊರವಲಯದಲ್ಲಿರುವ ಚಾಮರಾಜನಗರ ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಿದ್ದ ಸುವರ್ಣ ಸಂಭ್ರಮ ಕಾರ್ಯಕ್ರಮವನ್ನುದ್ದೇಶಿಸಿ ಅವರು ಮಾತನಾಡಿದರು. ಕಾಲೇಜು ವಿದ್ಯಾರ್ಥಿಗಳು ನಿಮ್ಮ ಮುಂದಿನ ಭವಿಷ್ಯ ನಿರ್ಧರಿಸಿಕೊಳ್ಳಬಲ್ಲವರಾಗಿದ್ದೀರಿ. ನೀವು ಏನಾಗಬೇಕೆಂದು ಬಯಸುವಿರೋ ಅದಕ್ಕೆ ಶೇ. 100ರಷ್ಟು ಪ್ರಾಮಾಣಿಕ ಪ್ರಯತ್ನ, ಶ್ರದ್ಧೆ ಪರಿಶ್ರಮ ಇರಲಿ. ಇದರಿಂದ ನೀವು ಅಂದುಕೊಂಡ ಉನ್ನತಿಯನ್ನು ಖಚಿತವಾಗಿ ಪಡೆಯಲು ಸಾಧ್ಯವಾಗಲಿದೆ ಎಂದರು.

ಕಾಲೇಜು ವಿದ್ಯಾರ್ಥಿಗಳು ಕಡ್ಡಾಯವಾಗಿ ಸಂಚಾರಿ ನಿಯಮ ಪಾಲನೆ ಮಾಡಬೇಕು. ದ್ವಿಚಕ್ರ ವಾಹನ ಚಾಲನೆ ಮಾಡುವಾಗ ಹೆಲ್ಮೆಟ್ ಧರಿಸಬೇಕು. ಕಾರು ಚಲಾಯಿಸುವಾಗ ಸೀಟ್‌ಬೆಲ್ಟ್ ಹಾಕಿಕೊಳ್ಳಬೇಕು. ಮಾದಕ ವಸ್ತುಗಳ ಸೇವನೆಯಿಂದ ದೂರವಿರಬೇಕು. ಮಾದಕ ವಸ್ತುಗಳ ಮಾರಾಟ ಕಂಡುಬಂದರೆ ಪೊಲೀಸರಿಗೆ ಮಾಹಿತಿ ನೀಡಬೇಕೆಂದು ತಿಳಿಸಿದರು.

ಹಾಸನ ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ.ಟಿ.ಸಿ.ತಾರನಾಥ್ ಮಾತನಾಡಿ, ಜ್ಯೋತಿ ಜ್ಞಾನದ ಸಂಕೇತ. ಬೆಳಕು ಇರುವ ಕಡೆ ಕತ್ತಲೆಗೆ ಅವಕಾಶವಿಲ್ಲ. ವಿದ್ಯಾರ್ಥಿಗಳ ಪರಿಪೂರ್ಣ ಬೆಳವಣಿಗೆಗೆ ಶಿಕ್ಷಣ ಬಹಳ ಮುಖ್ಯ. ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಂಡಾಗ ದೈಹಿಕ, ಮಾನಸಿಕ ಬೆಳವಣಿಗೆ ಸಾಧ್ಯವಾಗುತ್ತದೆ. ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳು ಮನಸ್ಸನ್ನು ಕೇಂದ್ರೀಕೃತ ಮಾಡುವ ಸಾಧನವಾಗಿದೆ ಎಂದರು.

ಜಗತ್ತಿನಲ್ಲಿ ಯಾರು ಯಾರನ್ನು ದೊಡ್ಡವರನ್ನಾಗಿ ಮಾಡಲು ಸಾಧ್ಯವಿಲ್ಲ. ಕ್ರಿಯಾಶಕ್ತಿ, ಜ್ಞಾನಶಕ್ತಿ ಸಂಯೋಜನೆಗೊಂಡು ಕಾರ್ಯ ನಿರ್ವಹಿಸಿದರೆ ಯಶಸ್ಸು ಲಭಿಸುತ್ತದೆ. ಆಗ ಮಾತ್ರ ವ್ಯಕ್ತಿ ಎತ್ತರಕ್ಕೆ ಬೆಳೆಯಬಹುದೆಂದು ತಿಳಿಸಿದರು.

ಚಾಮರಾಜನಗರ ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ.ಎಂ.ಆರ್.ಗಂಗಾಧರ್ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಮೌಲ್ಯಮಾಪನ ರಿಜಿಸ್ಟಾರ್ ಪ್ರೊ.ಪಿ.ಮಾದೇಶ್, ಪ್ರೊ.ಆರ್.ಮಹೇಶ್, ಪಿಎಂಇಬಿ ನಿರ್ದೇಶಕರಾದ ಡಾ.ವಿ.ಜಿ.ಸಿದ್ದರಾಜು, ಸಂದರ್ಶಕ ಪ್ರಾಧ್ಯಾಪಕ ಪ್ರೊ.ಕೃಷ್ಣಮೂರ್ತಿ ಹನೂರು ಇತರರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಸೆ.12– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಸಂತೇಮರಹಳ್ಳಿ ಉಪ ವಿಭಾಗ ವ್ಯಾಪ್ತಿಯಲ್ಲಿ 2ನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಸೆ.14ರಂದು ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ಉಮ್ಮತ್ತೂರು, ಬಾಗಳಿ, ಲಿಂಗಣಾಪುರ, ಜನ್ನೂರು, ಜನ್ನೂರು ಹೊಸೂರು, ಹೊಸೂರು, ಹಳ್ಳಿಕೆರೆಹುಂಡಿ, ಗಣಗನೂರು, ಗಣಗನೂರುಪುರ, ನವಿಲೂರು, ಆಲ್ದೂರು, ಬಿ.ಎಂ.ಕೆ ಹುಂಡಿ, ಗೊದ್ದಲಹುಂಡಿ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಿ.ಎಸ್.ಕೃಷ್ಣಮೂರ್ತಿ ನಿಧನ



ಚಾಮರಾಜನಗರ, ಸೆ.12– ನಗರದ ಡಾ. ಬಿ.ಆರ್.ಅಂಬೇಡ್ಕರ್ ಬಡಾವಣೆ ನಿವಾಸಿ, ನಗರಸಭೆ ಮಾಜಿ ಅಧ್ಯಕ್ಷ ಎಸ್. ನಂಜುಂಡಸ್ವಾಮಿ ಅವರ ಸಹೋದರ ಸಿ.ಎಸ್. ಕೃಷ್ಣಮೂರ್ತಿ(70) ಮಂಗಳವಾರ ನಿಧನರಾದರು. ಮೃತರು ಪತ್ನಿ ನೇತ್ರಾವತಿ, ಇಬ್ಬರು ಪುತ್ರರು, ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ನಗರದ ಮೃತರ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪರಿಶಿಷ್ಟ ಜಾತಿ, ಪಂಗಡಗಳ ಅಹವಾಲುಗಳನ್ನು

ಮುಂದಿನ ಸಭೆಯೊಳಗೆ ಪರಿಹರಿಸಲು ಸೂಚನೆ



ಚಾಮರಾಜನಗರ, ಸೆ.12– ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಅಹವಾಲುಗಳನ್ನು ಮುಂದಿನ ಸಭೆಯೊಳಗೆ ಪರಿಹರಿಸಬೇಕು ಎಂದು ಅಧಿಕಾರಿಗಳಿಗೆ ಸಮಿತಿ ಅಧ್ಯಕ್ಷರೂ ಆದ ತಹಸೀಲ್ದಾರ್ ಬಸವರಾಜು ಸೂಚಿಸಿದರು.

ನಗರದ ತಾಪಂ ಸಭಾಂಗಣದಲ್ಲಿ ನಡೆದ ತಾಲೂಕು ಪರಿಶಿಷ್ಟ ಜಾತಿ ಮತ್ತು ವರ್ಗಗಳ ಹಿತರಕ್ಷಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದಲಿತರ ಮುಖಂಡರ ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕೊಡಿಸುವ ಕೆಲಸವನ್ನು ಅಧಿಕಾರಿಗಳು ಮಾಡಬೇಕು ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಕೆ. ಮಂಜುನಾಥ್ ಮಾತನಾಡಿ, ಎಸ್‌ಇಪಿ ಮತ್ತು ಟಿಎಸ್‌ಪಿ ಯೋಜನೆ ಅನುದಾನ ತಾಲೂಕು ವ್ಯಾಪ್ತಿಯಲ್ಲಿ ಎಷ್ಟರ ಮಟ್ಟಿಗೆ ಸದ್ಬಳಕೆಯಾಗಿದೆ ಎಂಬ ಬಗ್ಗೆ ಮಾಹಿತಿ ನೀಡಬೇಕು. ರಾಜ್ಯ ಸರ್ಕಾರ ಬಜೆಟ್‌ನಲ್ಲಿ 34 ಸಾವಿರ ಕೋಟಿ ರೂ. ಮೀಸಲಿಟ್ಟಿದೆ. ಇದರಲ್ಲಿ ಚಾಮರಾಜನಗರ ತಾಲೂಕಿಗೆ ಯೋಜನೆಯಡಿ ಎಷ್ಟು ಅನುದಾನ ಬಳಕೆ ಮಾಡಲಾಗಿದೆ ಎಂಬ ಬಗ್ಗೆ ಮಾಹಿತಿ ನೀಡುವಂತೆ ತಾಲೂಕು ಸಮಾಜ ಕಲ್ಯಾಣಾಧಿಕಾರಿ ಚಿಕ್ಕಬಸವಯ್ಯ ಅವರನ್ನು ಒತ್ತಾಯಿಸಿದರು.

ತಹಸೀಲ್ದಾರ್ ಬಸವರಾಜು ಮಧ್ಯೆ ಪ್ರವೇಶಿಸಿ, ಇದು ರಾಜ್ಯ ಮಟ್ಟದ ಕಾರ್ಯಸೂಚಿಯಾಗಿದೆ. ಈ ಯೋಜನೆಯ ಅನುದಾನವನ್ನು ಜಿಲ್ಲಾ ಹಾಗೂ ರಾಜ್ಯ ಮಟ್ಟದ ಅಧಿಕಾರಿಗಳು ನಿಭಾಯಿಸುತ್ತಾರೆ. ಆದರೂ ಮುಂದಿನ ಸಭೆಗೆ ತಾವು ತಿಳಿಸಿರುವಂತೆ ಯೋಜನೆಯಡಿ ತಾಲೂಕಿನಲ್ಲಿ ಸದ್ಬಳಕೆಯಾಗಿರುವ ಅನುದಾನ ಬಗ್ಗೆ ಮಾಹಿತಿ ನೀಡಲಾಗುವುದು ಎಂದರು.

ಅನುಮಾನಸ್ಪದವಾಗಿ ಸಾವನ್ನಪ್ಪಿದ ರಮೇಶ್ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರ ಕುಟುಂಬಕ್ಕೆ ನ್ಯಾಯ ಕಲ್ಪಿಸಬೇಕು. ಇದು ಅಪಘಾತವಲ್ಲ. ಕೊಲೆ ಎಂಬ ಗುಮಾನಿ ಇದೆ. ಈ ಬಗ್ಗೆ ತನಿಖೆ ನಡೆಸಿ, ನ್ಯಾಯ ಕಲ್ಪಿಸಿಕೊಡಬೇಕು ಎಂದು ಮುಖಂಡ ಶಂಕರ್ ಒತ್ತಾಯಿಸಿದರು.

ಸಭೆಯಲ್ಲಿ ತಾಪಂ ಇಓ ಪೂರ್ಣಿಮಾ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಚಿಕ್ಕಬಸವಯ್ಯ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಸುಬ್ಬರಾಯ್, ಪಟ್ಟಣ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ರಾಜೇಶ್, ಮುಖಂಡರಾದ ಚಾ.ಗು ನಾಗರಾಜು, ಮೂರ್ತಿ, ಬಸವಣ್ಣ, ನಾಗರಾಜು, ನಾಗೇಂದ್ರ ಶ್ರೀಕಂಠ ಇತರರಿದ್ದರು.

ಮ್ಯಾರಥಾನ್, ನಾಟಕ ಸ್ಪರ್ಧೆ

ಚಾಮರಾಜನಗರ, ಸೆ.12– ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದಿಂದ ಯುವ ಜನೋತ್ಸವ–2023 ಅಂಗವಾಗಿ ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಜಿಲ್ಲಾ ಮಟ್ಟದ ಮ್ಯಾರಥಾನ್ ಹಾಗೂ ನಾಟಕ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಸೆ.13ರಂದು ಬೆಳಗ್ಗೆ 8 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಆಯೋಜಿಸಲಾಗಿರುವ ಮ್ಯಾರಥಾನ್ ಸ್ಪರ್ಧೆಗೆ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಚಾಲನೆ ನೀಡುವರು. ಸೆ.14ರಂದು ಬೆಳಗ್ಗೆ 10.30ಕ್ಕೆ ನಗರದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ನಾಟಕ ಸ್ಪರ್ಧೆ ಏರ್ಪಡಿಸಲಾಗಿದೆ. ಮಧ್ಯಾಹ್ನ 3 ಗಂಟೆಗೆ ಜಿಲ್ಲಾಧಿಕಾರಿಯಿಂದ ಪ್ರಶಸ್ತಿ ಪ್ರಮಾಣ ಪತ್ರ ವಿತರಣೆ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸೆ.27, ಉಚಿತ ಸಾಮೂಹಿಕ ವಿವಾಹ

ಚಾಮರಾಜನಗರ, ಸೆ.12– ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದಲ್ಲಿ ಶ್ರೀಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸೆ.27 ರಂದು ಉಚಿತ ಸಾಮೂಹಿಕ ವಿವಾಹ ಆಯೋಜಿಸಲಾಗಿದೆ.

ಮುಖ್ಯಮಂತ್ರಿಗಳು ಹಾಗೂ ಶ್ರೀಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಪ್ರಾಧಿಕಾರದ ಉಪಾಧ್ಯಕ್ಷ ಕೆ.ವೆಂಕಟೇಶ್ ಉಪಸ್ಥಿತಿಯಲ್ಲಿ ಅಂದು ಬೆಳಗ್ಗೆ 9.50 ರಿಂದ 10.20 ಗಂಟೆಯೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ಉಚಿತ ಸಾಮೂಹಿಕ ವಿವಾಹ ನಡೆಯಲಿದೆ.

ಪ್ರಾಧಿಕಾರದಿಂದ ವಧುವಿಗೆ 4 ಗ್ರಾಂ ತೂಕದ ಚಿನ್ನದ ಮಾಂಗಲ್ಯ, ಬೆಳ್ಳಿ ಕಾಲುಂಗುರ, ಸೀರೆ, ರವಿಕೆ, ವರನಿಗೆ ಪಂಚೆ, ಷರ್ಟ್, ಟವಲ್ ಉಚಿತವಾಗಿ ನೀಡಲಾಗುತ್ತದೆ. ವಧು–ವರರಿಗೆ ವಾಸ್ತವ್ಯಕ್ಕೆ ಕೊಠಡಿಗಳ ವ್ಯವಸ್ಥೆ ಮಾಡಲಾಗುತ್ತದೆ. ವಧು–ವರ ಮತ್ತು ಅವರ ಸಂಬಂಧಿಕರಿಗೆ ಊಟ, ತಿಂಡಿ ವ್ಯವಸ್ಥೆಯನ್ನು ದಾಸೋಹ ಭವನದಲ್ಲಿ ಮಾಡಲಾಗುವುದೆಂದು ಶ್ರೀಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಸರಸ್ವತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೃತ ರಮೇಶ್ ಮನೆಗೆ ಕೆ.ಶಿವರಾಂ ಭೇಟಿ, ಸಾಂತ್ವನ



ದಡದಹಳ್ಳಿ, ಸೆ.12– ನಗರದ ಹುದಾ ಪಬ್ಲಿಕ್ ಶಾಲೆ ಬಳಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದ ದಡದಹಳ್ಳಿ ಗ್ರಾಮದ ರಮೇಶ್ ನಿವಾಸಕ್ಕೆ ಛಲವಾದಿ ಮಹಾಸಭಾ ರಾಜ್ಯಾಧ್ಯಕ್ಷರೂ ಆದ ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಂ ಭೇಟಿ ನೀಡಿ, ಮೃತನ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಬಳಿಕ ಮಾತನಾಡಿದ ಅವರು, ರಮೇಶ್ ಸಾವಿನ ತನಿಖೆ ನಿಷ್ಪಕ್ಷಪಾತವಾಗಿ ನಡೆದು ಸತ್ಯಾಸತ್ಯತೆ ಜನರಿಗೆ ತಿಳಿಯಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಅಲ್ಲದೇ ಮೃತನ ಪತ್ನಿ ಪ್ರತಿಮಾಗೆ ಸರ್ಕಾರ ಉದ್ಯೋಗ ಹಾಗೂ ಪರಿಹಾರ ನೀಡಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಮೃತರ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಬೇಕು ಎಂದು ಒತ್ತಾಯಿಸಿದರು. ಇದೇ ವೇಳೆ ಮೃತ ರಮೇಶ್ ಕುಟುಂಬಕ್ಕೆ ವೈಯಕ್ತಿಕವಾಗಿ ಧನಸಹಾಯ ಮಾಡಿದರು.

ಇದೇ ವೇಳೆ ದಲಿತ ಮಹಾಸಭಾ ರಾಜ್ಯಾಧ್ಯಕ್ಷ ವೆಂಕಟರಮಣಸ್ವಾಮಿ, ಪ್ರಕಾಶ್, ಗೋವಿಂದರಾಜು, ಮೂರ್ತಿ ಇತರರಿದ್ದರು.

ಮೃತನ ಪತ್ನಿಯಿಂದ ಮತ್ತೊಂದು ದೂರು ಸಾಧ್ಯತೆ: ಅನುಮಾನಾಸ್ಪದವಾಗಿ ಸಾವನ್ನಪ್ಪಿದ ರಮೇಶ್ ಪತ್ನಿ ಪ್ರತಿಮಾ ನಾಳೆ(ಸೆ.13) ಮತ್ತೊಂದು ದೂರು ದಾಖಲಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ಈ ವೇಳೆ ಮಾತನಾಡಿದ ಪ್ರತಿಮಾ, ನನ್ನ ಪತಿ ಲಾರಿ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ ಎಂಬ ವಿಷಯ ನನಗೆ ಫೋನಿನ ಮೂಲಕ ತಿಳಿಯಿತು. ಆಗ ನಾನು ಏನನ್ನು ಹೇಳುವ ಸ್ಥಿತಿಯಲ್ಲಿ ಇರಲಿಲ್ಲ. ಆದರೆ ವಿಡಿಯೋ ನೋಡಿದ ಮೇಲೆ ಇದು ಅಪಘಾತವಲ್ಲ ಎನಿಸುತ್ತಿದೆ. ಇದು ಕೊಲೆ ಎಂದು ಅನುಮಾನವಿದೆ ಹೀಗಾಗಿ ಮತ್ತೊಂದು ದೂರು ದಾಖಲಿಸಲು ನಿರ್ಧರಿಸಿದ್ದೇನೆ. ನನ್ನ ಪತಿ ಸಾವಿಗೆ ನ್ಯಾಯ ಸಿಗಬೇಕು. ಆ ಮೂಲಕ ಅವರ ಆತ್ಮಕ್ಕೆ ಶಾಂತಿ ದೊರೆಯಬೇಕು ಎಂದು ಮಾಧ್ಯಮದ ಮೂಲಕ ಅಲವತ್ತುಕೊಂಡರು.

ಅರ್ಜಿ ಆಹ್ವಾನ

ಚಾಮರಾಜನಗರ, ಸೆ.12– ರಾಜ್ಯ ಸರ್ಕಾರ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಸ್ಥಾಪಿಸಿರುವ 5 ಲಕ್ಷ ರೂ. ಒಳಗೊಂಡ "ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ–ಕರ್ನಾಟಕ" ಗೆ ಪ್ರಸಕ್ತ ಸಾಲಿಗೆ ಅರ್ಹ ಸಾಧಕರನ್ನು ಅಥವಾ ಸಂಘ ಸಂಸ್ಥೆಗಳನ್ನು ಆಯ್ಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಾರ್ವಜನಿಕ ಜೀವನದಲ್ಲಿ ಮಹಾತ್ಮ ಗಾಂಧೀಜಿ ಅವರ ಆದರ್ಶ ಅಳವಡಿಸಿಕೊಂಡು ಜೀವನ ನಡೆಸುತ್ತಿರುವ ಕನಿಷ್ಠ 60 ವರ್ಷದ ವ್ಯಕ್ತಿಗಳು ಅಥವಾ 25 ವರ್ಷ ತುಂಬಿರುವ ಸೇವಾ ಸಂಸ್ಥೆಗಳನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುವುದು. ಪ್ರಶಸ್ತಿ ಆಯ್ಕೆ ಮಾಡಲು ಸಮಿತಿ ರಚಿಸಲಾಗುವುದು. 2023ರ ಅ.2 ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು. ಆಸಕ್ತರು ಸೆ.15 ರೊಳಗೆ ಅರ್ಜಿಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಾರ್ತಾ ಸೌಧ ನಂ.17, ಭಗವಾನ್ ಮಹಾವೀರ ರಸ್ತೆ (ಇನ್‌ಫೆಂಟ್ರಿ ರಸ್ತೆ), ಬೆಂಗಳೂರು–560 001 ಅಥವಾ ಇ–ಮೇಲ್ : informationdiprawards@gmail.com ವಿಳಾಸಕ್ಕೆ ಕಳುಹಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ಚಾಲಕರ ಸುಲಿಗೆ; ಖದೀಮನ ಬಂಧನ



ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಮುತ್ತುರಾಜ್, ಜಾಹ್ನವಿ, ಎಸಿಪಿ ಗಂಗಾಧರಸ್ವಾಮಿ, ಇನ್ಸ್‌ಪೆಕ್ಟರ್ ಎಲ್.ಅರುಣ್, ಸಬ್‌ಇನ್ಸ್‌ಪೆಕ್ಟರ್‌ಗಳು ಹಾಗೂ ಸಿಬ್ಬಂದಿ, ಆರೋಪಿಯಿಂದ ವಶಪಡಿಸಿಕೊಂಡ ವಸ್ತುಗಳ ವೀಕ್ಷಿಸುತ್ತಿರುವುದು.

ಎಎಸ್‌ಐ ದೇವಯ್ಯನವರು ಸೆ.2ರಂದು ಬೆಳಗ್ಗೆ 10.30ರ ಸಮಯ ದಲ್ಲಿ ತಮ್ಮ ಹುಂಡೈ ಸ್ಯಾಂಟ್ರೋ(ಕೆಎ-09, ಎಂಎ-4244) ಕಾರಿನಲ್ಲಿ ಕುವೆಂಪುನಗರದ ಉದಯರವಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಆರೋಪಿ ಜಮೀಲ್ ನಕಲಿ ಅಪಘಾತ ಸೃಷ್ಟಿಸಿ, 40 ಸಾವಿರ ರೂ. ದೋಚಿದ್ದ. ಕಾರು ವಾಹನಕ್ಕೆ ಡಿಕ್ಕಿಯಾದಂತೆ ಶಬ್ದ ಮಾಡಿದ್ದ ಆಸಾಮಿ ಸ್ಕೂಟರ್‌ನಲ್ಲಿ ಹಿಂಬಾಲಿಸಿ, ಕಾರನ್ನು ತಡೆದು ನಿಲ್ಲಿಸಿದ್ದ. ನೀವು ನನ್ನ ಸ್ನೇಹಿತನಿಗೆ ಆಕ್ಸಿಡೆಂಟ್ ಮಾಡಿ, ಕಾರು ನಿಲ್ಲಿಸದೆ ಹಾಗೇ ಹೋಗುತ್ತಿದ್ದೀರಿ ಎಂದು ಕತೆ ಕಟ್ಟಿದ್ದಲ್ಲದೆ, ಆತನ ಕಾಲು ಮುರಿದಿದ್ದು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು. ಚಿಕಿತ್ಸೆ ಕೊಡಿಸಲು ಹಣ ನೀಡದಿದ್ದರೆ ಅಪಘಾತ ಸ್ಥಳದಲ್ಲಿರುವ ಜನರನ್ನು ಕರೆಸಿ, ಹೊಡೆಸಬೇಕಾಗುತ್ತದೆ ಎಂದು ಹೆದರಿಸಿದ್ದ. ಹಣ ಇಲ್ಲ ಎಂದರೂ ಕೇಳದೆ ಆರೋಪಿ ಪಟ್ಟು ಹಿಡಿದಿದ್ದ. ಕೊನೆಗೆ ದೇವಯ್ಯ ಅವರಿಂದ ಎಟಿಎಂನಲ್ಲಿ 40 ಸಾವಿರ ರೂ. ಡ್ರಾ ಮಾಡಿಸಿಕೊಂಡು ಸ್ಥಳದಿಂದ ಕಾಲ್ಕಿತ್ತಿದ್ದ ಎಂದು ವಿವರಿಸಿದರು.

ಬಳಿಕ ದೇವಯ್ಯನವರು ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಇದೇ ರೀತಿ ಅಪಘಾತದ ನೆಪದಲ್ಲಿ ಹಲವರಿಂದ ಹಣ ದೋಚಿರುವ ಮಾಹಿತಿ ಲಭ್ಯವಾಯಿತು. ಆದರೆ ಯಾರೂ ಲಿಖಿತ ದೂರು ನೀಡಿಲ್ಲ. ಆದರೂ ಇದನ್ನು ಗಂಭೀರವಾಗಿ ಪರಿಗಣಿಸಿ, ತನಿಖೆ ನಡೆಸಲಾಗುತ್ತಿತ್ತು. ಮಂಗಳವಾರ(ಸೆ.12) ಮಧ್ಯಾಹ್ನ 1 ಗಂಟೆ ಸಮಯದಲ್ಲಿ ಗಸ್ತಿನಲ್ಲಿದ್ದ ಕುವೆಂಪುನಗರ ಠಾಣೆ ಪೊಲೀಸರು, ಬಾತ್ಮೀದಾರರ ಮಾಹಿತಿ ಹಾಗೂ ತಾಂತ್ರಿಕ ಮಾಹಿತಿ ಆಧಾರದಲ್ಲಿ ಆರೋಪಿ ಜಮೀಲ್‌ನನ್ನು ಬಂಧಿಸಿದ್ದಾರೆ ಎಂದರು.

5 ಕೇಸ್‌ಗಳಿವೆ: ಈ ಹಿಂದೆಯೇ ಆರೋಪಿ ಜಮೀಲ್ ವಿರುದ್ಧ ಸುಲಿಗೆ ಇನ್ನಿತರ ಆರೋಪದಡಿ 5 ಪ್ರಕರಣಗಳು ದಾಖಲಾಗಿವೆ ಎಂದು ಪ್ರಾಥಮಿಕ ವಿಚಾರಣೆಯಲ್ಲಿ ತಿಳಿದುಬಂದಿದೆ. ಇಂದು ದಸ್ತಗಿರಿ ಮಾಡಿ, ವಿಚಾರಣೆ ನಡೆಸಿದಾಗ ನಿವೃತ್ತ ಎಎಸ್‌ಐ ದೇವಯ್ಯ ಸೇರಿ ಒಟ್ಟು ಮೂವರನ್ನು ಈ ರೀತಿ ವಂಚಿಸಿ, ಹಣ ದೋಚಿರುವುದಾಗಿ ತಿಳಿಸಿದ್ದಾನೆ. ತಾನೊಬ್ಬನೇ ಕೃತ್ಯ ನಡೆಸಿದ್ದಾಗಿ ಹೇಳಿದ್ದಾನಾದರೂ ಮತ್ತೋರ್ವ ಸಹಚರನಿರಬಹುದೆಂಬ ಅನುಮಾನವಿದೆ. ಸ್ನೇಹಿತನಿಗೆ ಅಪಘಾತ ಮಾಡಿದ್ದೀರಿ ಎಂದು ಹೆದರಿಸಿ, ಚಾಲಕರನ್ನು ಹಣ ದೋಚುತ್ತಿದ್ದ. ಹಾಗಾದರೆ ಆ ಸ್ನೇಹಿತ ಯಾರು ಎಂದು ಪತ್ತೆಹಚ್ಚುವ ನಿಟ್ಟಿನಲ್ಲಿ ಪೊಲೀಸರು ಕಾರ್ಯೋನ್ಮುಖರಾಗಿದ್ದಾರೆ ಎಂದು ತಿಳಿಸಿದರು. ನಗರ ಸಂಚಾರ ಮತ್ತು ಅಪರಾಧ ವಿಭಾಗದ ಡಿಸಿಪಿ ಎಸ್.ಜಾಹ್ನವಿ ಅವರ ಮಾರ್ಗದರ್ಶನ ಹಾಗೂ ಕೃಷ್ಣರಾಜ ಉಪವಿಭಾಗದ ಎಸಿಪಿ ಗಂಗಾಧರಸ್ವಾಮಿ ಉಸ್ತುವಾರಿಯಲ್ಲಿ ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಎಲ್.ಅರುಣ್, ಸಬ್‌ಇನ್ಸ್‌ಪೆಕ್ಟರ್‌ಗಳಾದ ಎಸ್.ಪಿ.ಗೋಪಾಲ್, ಎಂ.ರಾಧಾ, ಅಪರಾಧ ವಿಭಾಗದ ಸಿಬ್ಬಂದಿ ವಿ.ಆನಂದ್, ಎಂ.ಪಿ.ಮಂಜುನಾಥ, ಹಜರತ್, ಎನ್.ಕೆ.ಪುಟ್ಟಪ್ಪ, ಸುರೇಶ್, ನಾಗೇಶ್, ಅಮೋಘ್, ತಾಂತ್ರಿಕ ವಿಭಾಗದ ಸಿಬ್ಬಂದಿ ಕುಮಾರ್ ಕಾರ್ಯಾಚರಣೆ ನಡೆಸಿ, ಖತರ್ನಾಕ್‌ನನ್ನು ಬಂಧಿಸಿದ್ದಾರೆ.

ಪೊಲೀಸರಿಗೆ ಮಾಹಿತಿ ನೀಡಿ...

ಈ ರೀತಿ ಅಪಘಾತ ಮಾಡಿದ್ದೀರಿ ಎಂದು ಹೆದರಿಸಿದಾಗ 5-10 ಸಾವಿರ ರೂ. ಕೊಟ್ಟು ಹೋಗಿರುವ ಪ್ರಕರಣಗಳು ನಡೆದಿವೆ ಎಂಬ ಮಾಹಿತಿ ಇದೆ. ಹೀಗೆ ವಂಚನೆಗೊಳಗಾದವರಲ್ಲಿ ಮತ್ತೊಬ್ಬರು ದೂರು ನೀಡಲು ಮುಂದೆ ಬಂದಿದ್ದಾರೆ. ಹೀಗೆ ಯಾವುದೋ ನೆಪದಲ್ಲಿ ಹಣ ದೋಚಲು ಪ್ರಯತ್ನಿಸುವವರ ಬಗ್ಗೆ ಎಚ್ಚರವಾಗಿರಿ. ಅವರ ಮಾತಿಗೆ ಹೆದರಿ, ಹಣ ಕೊಟ್ಟು ಹೊರಟು ಹೋಗಬೇಡಿ. ಹಾಗೇನಾದರೂ ಅಪಘಾತದ ನೆಪದಲ್ಲಿ ಪೀಡಿಸಿದರೆ ಪೊಲೀಸರಿಗೆ ಮಾಹಿತಿ ನೀಡಿ. ಪೊಲೀಸ್ ಠಾಣೆಗೆ ಬನ್ನಿ, ಅಲ್ಲಿಯೇ ಹಣ ಕೊಡುತ್ತೇನೆ ಎಂದು ಹೇಳಿ. ಪೊಲೀಸರಿಗೆ ಕನಿಷ್ಠ ಮಾಹಿತಿ ನೀಡುವುದರಿಂದ ಮತ್ತೊಬ್ಬರು ವಂಚನೆಗೊಳಗಾಗದಂತೆ ತಡೆಯಬಹುದು.

-ಬಿ.ರಮೇಶ್, ಪೊಲೀಸ್ ಆಯುಕ್ತ, ಮೈಸೂರು ನಗರ

3 ತಿಂಗಳ ಹಿಂದೆ ಶಿಕ್ಷಕರಿಂದ 5 ಸಾವಿರ ದೋಚಿದ್ದರು...

ಮೂರು ತಿಂಗಳ ಹಿಂದೆ ಶಿಲ್ಪಕಲಾ ಶಿಕ್ಷಕರೊಬ್ಬರು ಈ ರೀತಿಯಲ್ಲೇ ವಂಚನೆಗೊಳಗಾಗಿದ್ದಾರೆ. ಅವರು ವಾಲ್ಮೀಕಿ ರಸ್ತೆ ಕಡೆಯಿಂದ ಕಲಾಮಂದಿರದ ಕಡೆಗೆ ಕಾರಿನಲ್ಲಿ ಬರುವಾಗ ಇಬ್ಬರು ಸ್ಕೂಟರ್‌ನಲ್ಲಿ ಹಿಂಬಾಲಿಸಿಕೊಂಡು ಬಂದು ಕಾರು ತಡೆದು ನಿಲ್ಲಿಸಿದ್ದಾರೆ. ಸ್ನೇಹಿತನಿಗೆ ಅಪಘಾತ ಮಾಡಿ, ಕಾರು ನಿಲ್ಲಿಸದೆ ಹಾಗೇ ಹೋಗುತ್ತಿದ್ದೀರಲ್ಲಾ? ನಿಮಗೆ ಆಕ್ಸಿಡೆಂಟ್ ಆದ ಶಬ್ದ ಕೇಳಿಸಲಿಲ್ಲವೇ? ಎಂದು ಪ್ರಶ್ನಿಸಿದ್ದಾರೆ. ನಾನು ಅಪಘಾತ ಮಾಡಿಲ್ಲ, ಕಾರಿನ ಬಾನೆಟ್ ಓಪನ್ ಆಗಿತ್ತು. ಅದರಿಂದ ಶಬ್ದ ಬಂದಿದೆ ಎಂದಿದ್ದಾರೆ. ಅಷ್ಟರಲ್ಲಿ ಸ್ಕೂಟರ್‌ನಲ್ಲಿ ಹಿಂದೆ ಕುಳಿತಿದ್ದವನನ್ನು ಕಾರಿನಲ್ಲಿ ಕೂರಿಸಿ, ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು ನಡೀರಿ. ಇವರ ಕಡೆಯವರು ಅಲ್ಲಿ ತುಂಬಾ ಜನ ಇದ್ದಾರೆ. ಇಲ್ಲಿಗೆ ಬಂದರೆ ದೊಡ್ಡ ಗಲಾಟೆ ಮಾಡುತ್ತಾರೆ ಎಂದು ಹೆದರಿಸಿದ್ದಾರೆ. ಬಳಿಕ ಹಣ ನೀಡುವಂತೆ ಪೀಡಿಸಿದ್ದಾರೆ. ಹಣ ಇಲ್ಲ ಎಂದಾಗ ಎಟಿಎಂನಲ್ಲಿ ಡ್ರಾ ಮಾಡಿಕೊಡುವಂತೆ ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಕಡೆಗೆ ಕರೆದುಕೊಂಡು ಹೋಗಿದ್ದಾರೆ. ನನ್ನ ಬಳಿ ಎಟಿಎಂ ಇಲ್ಲ, ನನ್ನ ಮಗನ ಬಳಿ ಕೊಟ್ಟಿದ್ದೀನಿ. ಹಣ ಬೇಕಾದಾಗ ಅವನೇ ಡ್ರಾ ಮಾಡಿ ಕೊಡುತ್ತಾನೆ ಎಂದರೂ ಬಿಡದೆ ಪಟ್ಟು ಹಿಡಿದಿದ್ದಾರೆ. ಕಾರಿನಲ್ಲಿ ಕುಳಿತವನು ತುಂಬಾ ಪೆಟ್ಟಾದಂತೆ ನಟಿಸಿದರೆ ಮತ್ತೊಬ್ಬ ಆತನನ್ನು ಆರೈಕೆ ಮಾಡುವವನಂತೆ ನಾಟಕ ಮಾಡಿದ್ದಾನೆ. ಆ ಶಿಕ್ಷಕರು ಕಾಲೇಜಿಗೆ ತುರ್ತಾಗಿ ಹೋಗಬೇಕಿದ್ದ ಕಾರಣ ಅವರು 1 ಸಾವಿರ ರೂ. ಕೊಡಲು ಹೋದಾಗ ಒಪ್ಪದೆ 5 ಸಾವಿರ ರೂ. ದೋಚಿ ಪರಾರಿಯಾಗಿದ್ದಾರೆ. ಆದರೆ ಮನೆಯವರು ಆತಂಕಪಡುತ್ತಾರೆ ಎಂದು ಅವರು ದೂರು ನೀಡಿಲ್ಲ ಎಂದು ತಿಳಿದುಬಂದಿದೆ.

ನೇಮಕಾತಿ ರದ್ದು

ಆಲಿಸಿದ ನ್ಯಾಯಮೂರ್ತಿ ಸಂಜಯ್‌ಗೌಡ ಅವರು, ಪ್ರೊ.ಲೋಕನಾಥ್ ನೇಮಕವನ್ನು ರದ್ದು ಮಾಡಿದ್ದಾರೆ. ಜೊತೆಗೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ನೂತನ ಕುಲಪತಿ ನೇಮಕ ಸಂಬಂಧ ಹೊಸದಾಗಿ ಪ್ರಕ್ರಿಯೆ ಆರಂಭಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಿದ್ದಾರೆ. ಈ ಬಗ್ಗೆ 'ಮೈಸೂರು ಮಿತ್ರ' ಪ್ರತಿಕ್ರಿಯೆ ನೀಡಿದ ಪ್ರೊ.ಶರತ್ ಅನಂತಮೂರ್ತಿ, ಕೆಲವು ಮಹತ್ವದ ನಿರ್ಣಯ ಕೈಗೊಳ್ಳುವ ವೇಳೆ ಕಾನೂನು ನಿಯಮ ಪಾಲಿಸಬೇಕು ಎಂಬ ಸಂದೇಶವನ್ನು ಈ ಪ್ರಕರಣ ಸಾರಿ ಹೇಳಿದೆ. ಬೇರೆ ವಿಶ್ವ ವಿದ್ಯಾನಿಲಯಗಳ ಕುಲಪತಿಗಳ ನೇಮಕ ಮಾಡುವ ವೇಳೆ ಈ ಪ್ರಕರಣದ ತೀರ್ಪು ಮಾದರಿಯಾಗಲಿದೆ ಎಂದರು. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಕುಲಪತಿ ನೇಮಕ ಮಾಡುವ ಸಂಬಂಧ ಸ್ಕ್ರೀನಿಂಗ್ ಕಮಿಟಿಯು ಮೂವರ ಹೆಸರನ್ನು ಅಂತಿಮಗೊಳಿಸಿತ್ತು. ನಾನು, ಪ್ರೊ.ಗುರು ಹಾಗೂ ಪ್ರೊ.ವೆಂಕಟೇಶ್ ಅವರನ್ನು ರಾಜ್ಯಪಾಲರಿಗೆ ಶಿಫಾರಸು ಮಾಡಿತ್ತು. ಆದರೆ ಅಂದಿನ ಉನ್ನತ ಶಿಕ್ಷಣ ಸಚಿವರು ಸ್ಕ್ರೀನಿಂಗ್ ಕಮಿಟಿಯಲ್ಲಿ ಪ್ರಸ್ತಾಪವಾಗದ ಪ್ರೊ.ಲೋಕನಾಥ್ ಅವರನ್ನು ರಾಜ್ಯಪಾಲರಿಗೆ ಶಿಫಾರಸು ಮಾಡಿದ್ದರು ಎಂದು ತಿಳಿಸಿದರು.

ಇದು ಯುಜಿಸಿ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಪ್ರೊ.ಲೋಕನಾಥ್ ನೇಮಕಾತಿ ಆದೇಶ ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗಿದ್ದೆ. ಈಗ ಹೈಕೋರ್ಟ್ ನ್ಯಾಯಯುತ ತೀರ್ಪು ನೀಡಿದೆ ಎಂದು ಪ್ರೊ.ಶರತ್ ಅನಂತಮೂರ್ತಿ ಹೇಳಿದರು.

ಈಗ ನೂತನ ಕುಲಪತಿ ನೇಮಕ ಸಂಬಂಧ ಹೊಸ ಪ್ರಕ್ರಿಯೆ ಆರಂಭಿಸಬೇಕಿದೆ. ನಾನು ಸಹ ಈಗ ಕುಲಪತಿ ಸ್ಥಾನಕ್ಕೆ ಅರ್ಜಿ ಸಲ್ಲಿಸುತ್ತೇನೆ ಎಂದು ಪ್ರೊ.ಶರತ್ ಅನಂತಮೂರ್ತಿ ತಿಳಿಸಿದರು. ಪ್ರೊ.ಲೋಕನಾಥ್ ಅವರ ನೇಮಕಾತಿ ರದ್ದು ಮಾಡಿ ಹೈಕೋರ್ಟ್ ನೀಡಿರುವ ತೀರ್ಪಿನ ಸಂಬಂಧ ಇನ್ನು ನನಗೆ ಯಾವುದೇ ಮಾಹಿತಿ ಬಂದಿಲ್ಲ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಡಾ.ಶೈಲಜಾ ತಿಳಿಸಿದರು.

ದೆಹಲಿಗೆ ಯಡಿಯೂರಪ್ಪ; ವರಿಷ್ಠರ ಭೇಟಿ


ಬಗ್ಗೆ ಕೇಂದ್ರ ನಾಯಕರದ್ದೇ ಅಂತಿಮ ನಿರ್ಧಾರ ಎಂದು ಹೇಳಿದ್ದಾರೆ. ರಾಜ್ಯದಲ್ಲಿನ ರಾಜಕೀಯ ಪರಿಸ್ಥಿತಿಯ ಬಗ್ಗೆ ಚರ್ಚಿಸಲು ಮತ್ತು ಅವರ ಸಲಹೆಗಳನ್ನು ಪಡೆಯಲು ಪ್ರಯತ್ನಿಸಲಾಗುವುದು. ಭೇಟಿ ವೇಳೆ ಜೆಡಿಎಸ್ ಜೊತೆ ಮೈತ್ರಿ ಬಗ್ಗೆ ಚರ್ಚೆ ನಡೆಸುತ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ನನಗೆ ಗೊತ್ತಿಲ್ಲ, ಅದು ಪ್ರಧಾನಿ ಹಾಗೂ ಅಮಿತ್ ಶಾ ಅವರಿಗೆ ಬಿಟ್ಟಿದ್ದು, ಚರ್ಚೆ ಹೇಗೆ ನಡೆಯುತ್ತೋ ನೋಡೋಣ... ಕೇಂದ್ರ ನಾಯಕರು ಯಾವ ನಿರ್ಧಾರ ತೆಗೆದುಕೊಳ್ಳುತ್ತಾರೋ ಅದರಂತೆ ನಾವು ನಡೆಯುತ್ತೇವೆ ಎಂದು ತಿಳಿಸಿದ್ದಾರೆ. ಮುಂದಿನ ಮಾತುಕತೆ ದೆಹಲಿ ಮಟ್ಟದಲ್ಲಿ ನಡೆಯಲಿದ್ದು, ಎಲ್ಲಾ ಸಾಧಕ-ಬಾಧಕಗಳನ್ನು ಪರಿಗಣಿಸಿ ಎರಡೂ ಪಕ್ಷಗಳ ನಾಯಕರು ನಿರ್ಧರಿಸಲಿದ್ದಾರೆ ಎಂದು ಮತ್ತೋರ್ವ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಬಿಜೆಪಿ ಮತ್ತು ಜೆಡಿಎಸ್ ನಡುವಿನ ಸಂಭವನೀಯ ಮೈತ್ರಿಯನ್ನು ಅಸಹಾಯಕ ಪಕ್ಷಗಳು ಎಂಬ ಕಾಂಗ್ರೆಸ್ ಅನ್ನು ಟೀಕೆಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ಅವರು ಭಾರತ ಮೈತ್ರಿ ಮಾಡಿಕೊಂಡಿದ್ದಾರೆ. ಅಲ್ಲಿ ವಿರೋಧಿಗಳೇ ಒಗ್ಗೂಡಿದ್ದಾರೆ. ಭಾರತದ ರಾಜಕೀಯ ಇತಿಹಾಸದಲ್ಲಿ ವಿವಿಧ ರೀತಿಯ ತಿಳುವಳಿಕೆಗಳು ವಿವಿಧ ಸವಾಲುಗಳನ್ನು ಎದುರಿಸಲು ಮೈತ್ರಿಯಾದ ನಿದರ್ಶನಗಳಿವೆ. ಕರ್ನಾಟಕದಲ್ಲಿನ ಈ ದುಷ್ಟ ಸರ್ಕಾರದ ವಿರುದ್ಧ ಬಲವಾಗಿ ಹೋರಾಡಲು ನಾವು ಕೈಜೋಡಿಸುತ್ತಿದ್ದೇವೆ ಎಂದು ಅವರು ಹೇಳಿದರು.

ಮೈಸೂರು ದಸರಾ-2023

ಮುಂದಿನ ವಾರದಿಂದ ವೃತ್ತ, ರಸ್ತೆ ಸೌಂದರ್ಯ ಕಾಮಗಾರಿ

ಮೇಯರ್, ಪಾಲಿಕೆ ಆಯುಕ್ತರಿಂದ ಸ್ಥಳ ಪರಿಶೀಲನೆ





ಮೈಸೂರು, ಸೆ. 12 (ಆರ್‌ಕೆ)- 2023ರ ದಸರಾ ಮಹೋತ್ಸವಕ್ಕೆ ಮೈಸೂರಲ್ಲಿ ಭರದ ಸಿದ್ಧತೆ ಆರಂಭವಾಗಿದೆ.

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ವಿಶ್ವ ವಿಖ್ಯಾತ ನಾಡಹಬ್ಬ ದಸರೆಯ ವೈಭವದ ವಿಜಯದಶಮಿ ಮೆರವಣಿಗೆ ವೀಕ್ಷಿಸಲು ದೇಶ-ವಿದೇಶಗಳಿಂದ ಲಕ್ಷಾಂತರ ಮಂದಿ ಆಗಮಿಸುವ ಹಿನ್ನೆಲೆಯಲ್ಲಿ ಅರಮನೆ ಸುತ್ತಲಿನ ರಸ್ತೆ, ಸರ್ಕಲ್, ಪಾದಚಾರಿ ರಸ್ತೆ ಹಾಗೂ ರಾಜಮಾರ್ಗದ ಅಭಿವೃದ್ಧಿ ಮತ್ತು ಸೌಂದರ್ಯೀಕರಣ ಗೊಳಿಸಲು ಮೈಸೂರು ಮಹಾನಗರ ಪಾಲಿಕೆ ಮುಂದಾಗಿದೆ.

ಮೇಯರ್ ಶಿವಕುಮಾರ್, ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ಅವರು, ಬೆಳಗ್ಗೆ ಅಧಿಕಾರಿಗಳೊಂದಿಗೆ ಪಾದಯಾತ್ರೆ ನಡೆಸಿ ಸ್ಥಳ ಪರಿಶೀಲನೆ ಮಾಡಿದರು. ಅರಮನೆ ಉತ್ತರ ದ್ವಾರದ ಚಾಮರಾಜ ಒಡೆಯರ್ ವೃತ್ತ, ಹಾರ್ಡಿಂಜ್ ಸರ್ಕಲ್, ದಕ್ಷಿಣ ದ್ವಾರ, ಕೆ.ಆರ್. ಸರ್ಕಲ್‌ಗಳ ಅಭಿವೃದ್ಧಿ, ಫುಟ್‌ಪಾತ್ ರಿಪೇರಿ, ಕಲ್ಲಿನ ಬ್ಯಾರಿಕೇಡ್ ದುರಸ್ತಿ, ಅರಮನೆ ಸುತ್ತಲಿನ ರಸ್ತೆ ಅಭಿವೃದ್ಧಿ ಕಾರ್ಯವನ್ನು ಮುಂದಿನ ವಾರ ಕೈಗೊಳ್ಳಲು ಖುದ್ದು ಭೇಟಿ ನೀಡಿ ಅಗತ್ಯ ಮಾಹಿತಿ ಪಡೆದುಕೊಂಡರು.

ಅದೇ ರೀತಿ ಜಂಬೂಸವಾರಿ ಮೆರವಣಿಗೆ ಸಾಗುವ ರಾಜಮಾರ್ಗದ ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್, ಓಲ್ಡ್ ಆರ್‌ಎಂಸಿ ಸರ್ಕಲ್, ಹೈವೇ ಸರ್ಕಲ್ ಹಾಗೂ ಬನ್ನಿಮಂಟಪದ ಎಲ್‌ಐಸಿ ಸರ್ಕಲ್‌ಗಳ ಅಭಿವೃದ್ಧಿ ಮತ್ತು ಸೌಂದರ್ಯೀಕರಣಗೊಳಿಸುವುದು, ಫುಟ್‌ಪಾತ್ ರಿಪೇರಿ ಕಾಮಗಾರಿಯನ್ನು ಕೈಗೆತ್ತಿಗೊಳ್ಳಲಾಗುವುದು ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಪುರಭವನಕ್ಕೂ ಭೇಟಿ ನೀಡಿದ ಅವರು, ಮಲ್ಟಿ ಲೆವೆಲ್ ಪಾರ್ಕಿಂಗ್ ಲಾಟ್ ಕಾಮಗಾರಿಯನ್ನೂ ವೀಕ್ಷಿಸಿದರು. ಈಗಾಗಲೇ ಸಿವಿಲ್ ಕಾಮಗಾರಿ ಪೂರ್ಣಗೊಂಡಿರುವುದರಿಂದ ಮಳೆ ನೀರು ಹರಿದು ಹೋಗಲು ಸೂಕ್ತ ವ್ಯವಸ್ಥೆ ಕಲ್ಪಿಸಿ ಅತೀ ಶೀಘ್ರ ಅಲ್ಲಿ ಸಾರ್ವಜನಿಕರ ವಾಹನ ನಿಲುಗಡೆ ವ್ಯವಸ್ಥೆಯನ್ನು ಉದ್ಘಾಟಿಸಲಾಗುವುದು ಎಂದು ಅವರು ತಿಳಿಸಿದರು.

ಪುರಭವನದ ಆವರಣ ಸ್ವಚ್ಛಗೊಳಿಸುವ ಮೂಲಕ ಪುರಭವನದಲ್ಲಿ ಕಾರ್ಯಕ್ರಮ ನಡೆಸುವವರಿಗೆ ಅನುಕೂಲ ಕಲ್ಪಿಸುವುದು, ಸುತ್ತಲಿನ ಫುಟ್‌ಪಾತ್ ಅಭಿವೃದ್ಧಿ ಕಾರ್ಯವನ್ನು ಮುಂದಿನ ವಾರ ಕೈಗೊಂಡು ದಸರಾ ಮಹೋತ್ಸವ ಉದ್ಘಾಟನೆಯಾಗುವುದರೊಳಗಾಗಿ ಪೂರ್ಣಗೊಳಿಸುತ್ತೇವೆ ಎಂದು ಅವರು ತಿಳಿಸಿದರು.

ಬೆಳಗ್ಗೆ 6.45 ರಿಂದ 10.30 ಗಂಟೆವರೆಗೆ ಪಾದಯಾತ್ರೆ ಮೂಲಕ ಸ್ಥಳ ಪರಿಶೀಲಿಸಿದ ವೇಳೆ ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಸಿಂಧು, ಎಕ್ಸಿಕ್ಯೂಟಿವ್ ಇಂಜಿನಿಯರ್ ನಾಗರಾಜ್, ವಾಣಿ ವಿಲಾಸ ವಾಟರ್ ವರ್ಕ್ಸ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಶ್ವಿನ್‌ಕುಮಾರ್, ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ, ಪರಿಸರ ಇಂಜಿನಿಯರ್‌ಗಳು, ಆರೋಗ್ಯ ನಿರೀಕ್ಷಕರು ಉಪಸ್ಥಿತರಿದ್ದರು.

ಬಿ.ವಿ.ಕಾರಂತ ಕಾಲೇಜು ರಂಗ ತರಬೇತಿ ಶಿಬಿರ ಉದ್ಘಾಟನೆ

ನಾಟಕ, ಕಲೆ, ಸಂಸ್ಕೃತಿಯನ್ನು ಎತ್ತಿ ಹಿಡಿಯಲಿದೆ



ಮೈಸೂರು, ಸೆ.12(ಜಿಎ)-ವಿದ್ಯಾರ್ಥಿಗಳು ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲೂ ತೊಡಗಿಸಿಕೊಳ್ಳಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ತಿಳಿಸಿದರು.

ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ವಿಭಾಗದ ವತಿಯಿಂದ ಆಯೋಜಿಸಿದ್ದ ಬಿ.ವಿ.ಕಾರಂತ ಕಾಲೇಜು ರಂಗ ತರಬೇತಿ ಶಿಬಿರ ಮತ್ತು ನಾಟಕ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲಾ ಗುಣಗಳೂ ನಮ್ಮೊಳಗಿವೆ. ಅದನ್ನು ಸರಿಯಾದ ಸಮಯದಲ್ಲಿ, ಸರಿಯಾದ ಪ್ರಮಾಣದಲ್ಲಿ ಬಳಸಬೇಕು. ಆಗ ಮಾತ್ರ ಸಮಾಜಕ್ಕೆ ಒಳಿತು. ನಾಟಕ ಜೀವನ ಹಾಳು ಮಾಡುವುದಿಲ್ಲ, ಬದಲಿಗೆ ಕಲೆ, ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತದೆ ಎಂದು ತಿಳಿಸಿದರು.

ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜಿನ ಉಪ ಪ್ರಾಂಶುಪಾಲ ಡಾ.ಜಿ.ಪ್ರಸಾದ ಮೂರ್ತಿ ಮಾತನಾಡಿ, ಸಮಾಜದ ಅರಿವು ಮತ್ತು ಸಂಸ್ಕಾರವನ್ನು ಶಿಕ್ಷಣ ಮಾತ್ರವಲ್ಲದೇ ಕಲೆ ಕಲಿಸಿ ಕೊಡುತ್ತದೆ. ನಾಟಕ ವ್ಯಂಗ್ಯವಲ್ಲ, ಅದು ಜಂಗಮ ರೂಪವಾದದ್ದು ಎಂದು ತಿಳಿಸಿದರು.

ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ ಮಾತನಾಡಿ, ನಾಟಕಗಳು ಜೀವನದ ವಿವಿಧ ಆಯಾಮಗಳನ್ನು ತಿಳಿಸುತ್ತವೆ. ಕಲೆ, ಸಾಹಿತ್ಯ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ತಿಳಿಸಿದರು.

ಇದೇ ವೇಳೆ ಸೋರುತಿಹುದು ಸಂಬಂಧ ಎಂಬ ನಾಟಕ ಪ್ರದರ್ಶನವಾಯಿತು. ಕಾರ್ಯಕ್ರಮದಲ್ಲಿ ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಚಿದಾನಂದಸ್ವಾಮಿ, ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜಿನ ಪ್ರಭಾರ ಪ್ರಾಂಶುಪಾಲ ಡಾ.ಲೋಕೇಶ್.ಎನ್.ಜಿ, ಶಿಬಿರದ ನಿರ್ದೇಶಕ ಪ್ರವೀಣ್ ಬೆಳ್ಳಿ, ಸಂಚಾಲಕರು, ಬಿ.ವಿ.ಕಾರಂತ ಕಾಲೇಜು ರಂಗ ತರಬೇತಿ ಶಿಬಿರದ ಸಂಚಾಲಕಿ ಸಂಧ್ಯಾರಾಣಿ.ಎಂ.ಎಸ್ ಉಪಸ್ಥಿತರಿದ್ದರು.

ಗಣೇಶ ಚತುರ್ಥಿ, ಈದ್‌ಮಿಲಾದ್ ಹಿನ್ನೆಲೆ

ಎನ್.ಆರ್.ಮೊಹಲ್ಲಾದಲ್ಲಿ ಶಾಂತಿ ಸಭೆ



ಮೈಸೂರು, ಸೆ.12(ಆರ್‌ಕೆ)- ಮುಂಬರುವ ಗೌರಿ ವ್ರತ, ಗಣೇಶ ಚತುರ್ಥಿ ಮತ್ತು ಈದ್‌ಮಿಲಾದ್ ಹಿನ್ನೆಲೆಯಲ್ಲಿ ಮೈಸೂರಿನ ಎನ್.ಆರ್. ಮತ್ತು ಮಂಡಿ ಠಾಣೆ ಪೊಲೀಸರು ಇಂದು ಸಂಜೆ ಶಾಂತಿ ಸಭೆ ನಡೆಸಿ, ನಾಗರಿಕರಿಗೆ ಹಲವು ಸಲಹೆಗಳನ್ನು ನೀಡಿದರು.

ಎನ್.ಆರ್.ಮೊಹಲ್ಲಾದ ಶಿವಾಜಿ ರಸ್ತೆಯ ಉತ್ಸವ ಹಾಲ್‌ನಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಮಂಡಿ ಠಾಣೆ ಇನ್ಸ್‌ಪೆಕ್ಟರ್ ನಾಗೇಶ್, ಎನ್.ಆರ್.ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ತಳವಾರ, ಸಬ್ ಇನ್ಸ್‌ಪೆಕ್ಟರ್ ರಾಜು ಪಾಲ್ಗೊಂಡು, ಗಣಪತಿ ಪ್ರತಿಷ್ಠಾಪಿಸುವವರು ಹಗಲು-ರಾತ್ರಿ ಪೆಂಡಾಲ್‌ನಲ್ಲಿ ಯಾರಾದರೂ ಇದ್ದು ಕಾವಲು ಕಾಯಬೇಕು. ನಿಯಮಾನುಸಾರ ಅನುಮತಿ ಪಡೆದು ಗಣಪತಿ ಪ್ರತಿಷ್ಠಾಪಿಸಿ ಶಾಂತಿಯಿಂದ ವಿಸರ್ಜಿಸಬೇಕು. ಡಿಜೆ ಹಾಕಬಾರದು. ಗಲಾಟೆ, ಘರ್ಷಣೆಗೆ ಅವಕಾಶ ನೀಡಬಾರದು ಎಂದು ಸಲಹೆ ನೀಡಿದರು.

ಸ್ಥಳದಲ್ಲಿ ಬ್ಯಾರಲ್‌ಗಳಲ್ಲಿ ನೀರು ತುಂಬಿಡಬೇಕು. ಧ್ವನಿವರ್ಧಕಗಳನ್ನು ಹಾಕಿ ಸಾರ್ವಜನಿಕರಿಗೆ ತೊಂದರೆ ನೀಡಬಾರದು. ಗಣಪತಿ ಹೆಸರಲ್ಲಿ ದೇಣಿಗೆ ವಸೂಲಿ, ಮೆರವಣಿಗೆ ವೇಳೆ ಗದ್ದಲ ಉಂಟು ಮಾಡದೇ ಶಾಂತಿಯುತವಾಗಿ ವಿಸರ್ಜನೆ ಮಾಡಬೇಕೆಂದು ಅವರು ತಿಳಿವಳಿಕೆ ಹೇಳಿದರಲ್ಲದೇ, ನಿಯಮ ಮೀರಿ ವರ್ತಿಸಿದರೆ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈದ್ ಮಿಲಾದ್ ಆಚರಣೆ ಸಂದರ್ಭ ಸಾರ್ವಜನಿಕರಿಗೆ ತೊಂದರೆ ಉಂಟಾಗದಂತೆ ಸೌಹಾರ್ದತೆಯಿಂದ ವರ್ತಿಸಬೇಕೆಂದು ಇನ್ಸ್‌ಪೆಕ್ಟರ್‌ಗಳು ನಾಗರಿಕರಿಗೆ ತಿಳಿಸಿದರು. ಮಾಜಿ ಕಾರ್ಪೊರೇಟರ್ ಸುಹೇಲ್ ಬೇಗ್, ಮುಖಂಡರಾದ ಗಿರಿಧರ್, ಮುಮ್ತಾಜ್ ಫಾರೂಖ್ ಸೇರಿದಂತೆ 100ಕ್ಕೂ ಹೆಚ್ಚು ಮಂದಿ ಸಭೆಯಲ್ಲಿ ಉಪಸ್ಥಿತರಿದ್ದರು.

ಜಾಲಿ ರೈಡ್ ವೇಳೆ ವಿದ್ಯುತ್ ಕಂಬಗಳಿಗೆ ಕಾರು ಡಿಕ್ಕಿ

ಬೋಗಾದಿ ಬಳಿ ಗದ್ದಿಗೆ ರಸ್ತೆಯಲ್ಲಿ ಮಂಗಳವಾರ ಮುಂಜಾನೆ ಘಟನೆ; ವಿದ್ಯಾರ್ಥಿಗಳಿಬ್ಬರಿಗೆ ಗಾಯ



ಮೈಸೂರು, ಸೆ.12(ಆರ್‌ಕೆ)-ಜಾಲಿ ರೈಡ್ ಹೋಗುತ್ತಿರುವಾಗ ಕ್ರೇಟಾ ಕಾರೊಂದು ವಿದ್ಯುತ್ ಕಂಬಗಳಿಗೆ ಡಿಕ್ಕಿ ಹೊಡೆದ ಪರಿಣಾಮ ವಿದ್ಯಾರ್ಥಿಗಳಿಬ್ಬರು ಗಾಯಗೊಂಡಿರುವ ಘಟನೆ ಮೈಸೂರಿನ ಬೋಗಾದಿ ಬಳಿ, ಗದ್ದಿಗೆ ರಸ್ತೆಯಲ್ಲಿ ಇಂದು ಮುಂಜಾನೆ ಸಂಭವಿಸಿದೆ.

ಮೈಸೂರಿನ ವಿಜಯನಗರ 4ನೇ ಹಂತದ ನಿವಾಸಿ ನಿಶ್ಚಲ್(19) ಹಾಗೂ ಸಂಬಂಧಿಕನಾದ ಬೆಂಗಳೂರಿನ ರಾಘವ (20) ಗಾಯಗೊಂಡವರಾಗಿದ್ದು, ಅವರನ್ನು ಕುವೆಂಪುನಗರದ ಭಾನವಿ ಆಸ್ಪತ್ರೆಗೆ ದಾಖಲಿಸಲಾಗಿದೆ. ನಿನ್ನೆಯಷ್ಟೇ ಮೈಸೂರಿಗೆ ಆಗಮಿಸಿದ್ದ ರಾಘವನನ್ನು ಕರೆದುಕೊಂಡು ಇಂದು ಮುಂಜಾನೆ 3.45 ಗಂಟೆಯಲ್ಲಿ ಗದ್ದಿಗೆ ರಸ್ತೆಯಲ್ಲಿ ಬೋಗಾದಿ ಕಡೆಗೆ ವೇಗವಾಗಿ ಬರುತ್ತಿದ್ದಾಗ ರಸ್ತೆ ಎಡ ಬದಿಯ 3 ವಿದ್ಯುತ್ ಕಂಬಗಳಿಗೆ ಡಿಕ್ಕಿ ಹೊಡೆದಿದ್ದಾರೆ.

ಪರಿಣಾಮ ಕಂಬಗಳು ಉರುಳಿ ಬಿದ್ದಿದ್ದು, ಅದೃಷ್ಟವಶಾತ್ ವಿದ್ಯುತ್ ಸಂಪರ್ಕ ಕಡಿತವಾದ್ದರಿಂದ ಕಾರಿನಲ್ಲಿದ್ದ ಇಬ್ಬರೂ ಸಣ್ಣಪುಟ್ಟ ಗಾಯಗಳಾಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಘಟನೆಯಿಂದ ಕಾರು ಸಂಪೂರ್ಣ ಜಖಂಗೊಂಡಿದ್ದು, ಸಾರ್ವಜನಿಕರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಧಾವಿಸಿದ ಕುವೆಂಪುನಗರ ಸಂಚಾರ ಠಾಣೆ ಸಬ್ ಇನ್ಸ್‌ಪೆಕ್ಟರ್ ಮದನ್ ಹಾಗೂ ಸಿಬ್ಬಂದಿ ಮಹಜರು ನಡೆಸಿದರು.

ಗಾಯಗೊಂಡಿದ್ದ ನಿಶ್ಚಲ್ ಮತ್ತು ರಾಘವನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನಾ ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದ ಚೆಸ್ಕಾಂ ಅಧಿಕಾರಿಗಳು, ಸಾರ್ವಜನಿಕ ಆಸ್ತಿ ನಷ್ಟ ಮಾಡಿದ್ದಾರೆಂದು ದೂರು ನೀಡಿದ ಹಿನ್ನೆಲೆಯಲ್ಲಿ ಕಾರು ಚಾಲನೆ ಮಾಡುತ್ತಿದ್ದ ನಿಶ್ಚಲ್ ವಿರುದ್ಧ ಎಫ್‌ಐಆರ್ ದಾಖಲಿಸಿರುವ ಸಂಚಾರ ಪೊಲೀಸರು, ಕಾರನ್ನು ವಶಕ್ಕೆ ಪಡೆದಿದ್ದಾರೆ.

ವಿದ್ಯುತ್ ಕಂಬಗಳಿಗೆ ಡಿಕ್ಕಿ ಹೊಡೆಯುತ್ತಿದ್ದಂತೆಯೇ ಕಾರಿನ ಏರ್‌ಬ್ಯಾಗ್ ತೆರೆದುಕೊಂಡಿದ್ದರಿಂದಾಗಿ ಇಬ್ಬರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಮಹಜರು ಮಾಡಿದ ಪೊಲೀಸರು ತಿಳಿಸಿದ್ದಾರೆ.

ವಾಕ್, ಶ್ರವಣ ಉಚಿತ ತಪಾಸಣೆ, ಚಿಕಿತ್ಸಾ ಶಿಬಿರ

ಮೈಸೂರು, ಸೆ.12-ಮೈಸೂರಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ ಮತ್ತು ಲಯನ್ಸ್ ಕ್ಲಬ್ ಆಫ್ ಮೈಸೂರು ಸಹಯೋಗದಲ್ಲಿ ವಾಕ್ (ಮಾತು) ಮತ್ತು ಶ್ರವಣ(ಕಿವಿ) ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರವನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪ್ರಾದೇಶಿಕ ಕೇಂದ್ರದ ಪಾರ್ಕಿಂಗ್ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು ಶಿಬಿರದ ಅಧ್ಯಕ್ಷತೆಯನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕಾರ್ಯಕಾರಿ ಮಂಡಳಿ ಸದಸ್ಯರು ಹಾಗೂ ಲಯನ್ಸ್ ಜಿಲ್ಲಾ ರಾಜ್ಯಪಾಲರಾದ ಲಯನ್ ಡಾ. ಕೃಷ್ಣೇಗೌಡ ವಹಿಸಿದ್ದರು. ಶಿಬಿರದಲ್ಲಿ ವಾಕ್ ಮತ್ತು ಶ್ರವಣ ಸಂಸ್ಥೆಯ ಬೆಂಗಳೂರಿನ ಡಾ. ಎಸ್.ಆರ್ ಚಂದ್ರಶೇಖರ್, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಪ್ರಾದೇಶಿಕ ನಿರ್ದೇಶಕರಾದ ಡಾ. ಟಿ.ಪಿ ರೇಣುಕಾ ಮೂರ್ತಿ, ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.



ಮೈಸೂರು ಜಿಲ್ಲೆ ತಿ.ನರಸೀಪುರ ತಾಲೂಕಿನ ಮುಸುವಿನಕೊಪ್ಪಲು ಗ್ರಾಮದ ಸರ್ಕಾರಿ ಪ್ರೌಢಶಾಲೆಗೆ ಮೈಸೂರಿನ ಪ್ರತಿಷ್ಠಿತ ರಘುಲಾಲ್ ಕಂಪನಿ ವತಿಯಿಂದ 65 ಟ್ರೀ ಗಾರ್ಡ್‌ಗಳನ್ನು ಹಸ್ತಾಂತರಿಸಲಾಯಿತು. ಈ ವೇಳೆ ಶಾಲೆಯ ಪ್ರಾಂಶುಪಾಲರಾದ ಮಹದೇವಸ್ವಾಮಿ ಮತ್ತು ವಿದ್ಯಾರ್ಥಿಗಳಿದ್ದರು.

ಗಣೇಶ ಹಬ್ಬದಲ್ಲಿ ಡಿಜೆ ಧ್ವನಿವರ್ಧಕ ಬಳಕೆಗೆ ಅನುಮತಿ ಕೋರಿಕೆ

ಶಾಮಿಯಾನ ಮಾಲೀಕರ ಅಧಿವೇಶನಕ್ಕೆ ತೆರೆ



ಮೈಸೂರು,ಸೆ.12(ಪಿಎಂ)- ಮೂರು ದಿನಗಳ ಕಾಲ ಮೈಸೂರಿನಲ್ಲಿ ನಡೆದ ಶಾಮಿಯಾನ ಮಾಲೀಕರ ಸಂಘಟನೆಯ ಮಹಾ ಅಧಿವೇಶನಕ್ಕೆ ಮಂಗಳವಾರ ತೆರೆ ಬಿದ್ದಿತು.

ದಸರಾ ವಸ್ತು ಪ್ರದರ್ಶನ ಮೈದಾನದಲ್ಲಿ ಕರ್ನಾಟಕ ರಾಜ್ಯ ಶಾಮಿಯಾನ ಡೆಕೊರೇಷನ್, ಧ್ವನಿ ಮತ್ತು ಬೆಳಕು ಕ್ಷೇಮಾಭಿವೃದ್ಧಿ ಸಂಘ, ಆಲ್ ಇಂಡಿಯಾ ಟೆಂಟ್ ಅಂಡ್ ಡೆಕೋರೇಟರ್ಸ್ ವೆಲ್‌ಫೇರ್ ಅಸೋಸಿಯೇಷನ್ ಮತ್ತು ಮೈಸೂರು ಜಿಲ್ಲಾ ಪೆಂಡಾಲ್ ಮಾಲೀಕರ ಸಂಘದ ಸಂಯುಕ್ತಾಶ್ರಯದಲ್ಲಿ ನಡೆದ ರಾಜ್ಯ ಮಟ್ಟದ 3ನೇ ಮಹಾ ಅಧಿವೇಶನ ಸಮಾಪ್ತಿಗೊಂಡಿತು.

ಇದೇ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕರ್ನಾಟಕ ರಾಜ್ಯ ಶಾಮಿಯಾನ ಡೆಕೋರೇಷನ್ ಧ್ವನಿ ಮತ್ತು ಬೆಳಕು ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಆರ್.ಲಕ್ಷ್ಮಣ್, ಈ ಬಾರಿಯ ಗಣೇಶ ಹಬ್ಬದಲ್ಲಿ ಡಿಜೆ ಧ್ವನಿವರ್ಧಕ ಬಳಕೆಗೆ ಅವಕಾಶ ನೀಡಬೇಕೆಂದು ರಾಜ್ಯ ಸರ್ಕಾರದಲ್ಲಿ ಮನವಿ ಮಾಡುತ್ತಿದ್ದೇವೆ. ಈ ಸಂಬಂಧ ಶಾಸಕ ತನ್ವೀರ್‌ಸೇಠ್ ಅವರಲ್ಲಿ ಮೌಖಿಕವಾಗಿ ಮನವಿ ಮಾಡಿದ್ದು, ಅವರು ಮುಖ್ಯಮಂತ್ರಿಗಳೊಂದಿಗೆ ಮಾತನಾಡುತ್ತೇನೆಂದು ಸಕಾರಾತ್ಮಕ ಸ್ಪಂದನೆ ನೀಡಿದ್ದಾರೆ ಎಂದು ತಿಳಿಸಿದರು.

ಗಣಪತಿ ಹಬ್ಬ ಮತ್ತು ಈದ್ ಮಿಲಾದ್ ಸಂದರ್ಭದಲ್ಲಿ ರಾಜ್ಯದಲ್ಲಿ ಡಿಜೆ ಧ್ವನಿವರ್ಧಕ ಬಳಕೆಗೆ ಅವಕಾಶ ಕಲ್ಪಿಸಬೇಕೆಂದು ರಾಜ್ಯ ಸರ್ಕಾರದಲ್ಲಿ ಮನವಿ ಮಾಡುತ್ತಿದ್ದೇವೆ. ಈ ಸಂಬಂಧ ಇಂದು ಸಮಾರೋಪ ಸಮಾರಂಭದಲ್ಲಿ ಅತಿಥಿಯಾಗಿ ಪಾಲ್ಗೊಂಡಿದ್ದ ಶಾಸಕ ತನ್ವೀರ್ ಸೇಠ್ ಅವರಲ್ಲಿ ಮೌಖಿಕ ಮನವಿ ಮಾಡಿದ್ದೇವೆ. ಅವರಿಂದ ಸಕಾರಾತ್ಮಕ ಸ್ಪಂದನೆ ಸಿಕ್ಕಿದೆ. ಮುಖ್ಯಮಂತ್ರಿಗಳೊಂದಿಗೆ ಮಾತನಾಡುವುದಾಗಿ ಹೇಳಿದ್ದಾರೆ ಎಂದರು.

ಬಹುತೇಕ ಶಾಮಿಯಾನ ಮಾಲೀಕರು ಡಿಜೆಗೆ ಸಂಬಂಧಿಸಿದ ಸಾಧನ-ಸಲಕರಣೆ ಹೊಂದಿದ್ದಾರೆ. ಇದು ಬಾಡಿಗೆಯಿಂದ ಮಾಲೀಕರಿಗೆ ಸಾಕಷ್ಟು ಆದಾಯ ಹರಿದು ಬರಲಿದೆ. ಹಾಗಾಗಿ ಅವಕಾಶ ಕಲ್ಪಿಸಿ ನಮ್ಮ ವಹಿವಾಟಿಗೆ ಪೂರಕ ವಾತಾವರಣ ಕಲ್ಪಿಸಬೇಕೆಂದು ಮನವಿ ಮಾಡಿದ್ದೇವೆ ಎಂದು ತಿಳಿಸಿದರು.

ಮೂರು ದಿನಗಳ ಈ ಅಧಿವೇಶನದಲ್ಲಿ ಇಡೀ ರಾಜ್ಯದಿಂದ ಶಾಮಿಯಾನ ಮಾಲೀಕರು ಹಾಗೂ ಕಾರ್ಮಿಕರು ಸೇರಿದಂತೆ 4 ಸಾವಿರ ಮಂದಿ ಪಾಲ್ಗೊಂಡಿದ್ದರು. ಈ ಪೈಕಿ ಹೆಚ್ಚಿನವರು ಶಾಮಿಯಾನ ಮಾಲೀಕರು. ರಾಜ್ಯದಲ್ಲಿರುವ ಎಲ್ಲಾ ಸಣ್ಣ ಮಟ್ಟದ ಶಾಮಿಯಾನ ಮಾಲೀಕರು ವಿವಿಧ ರಾಜ್ಯಗಳಿಗೆ ಭೇಟಿ ನೀಡಿ ಶಾಮಿಯಾನದ ಸಾಧನ-ಸಲಕರಣೆ ಖರೀದಿಸುವುದು ಕಷ್ಟಸಾಧ್ಯ. ಹಾಗಾಗಿ ಈ ಅಧಿವೇಶನದಲ್ಲಿ ವಸ್ತು ಪ್ರದರ್ಶನದ ಮೂಲಕ ಇಂತಹ ಸಾಧನ ಸಲಕರಣೆ ಖರೀದಿಗೆ ಅವಕಾಶ ಕಲ್ಪಿಸಲಾಗಿತ್ತು. ಪ್ರತಿ ಅಧಿವೇಶನದಲ್ಲಿ ಇಂತಹ ವ್ಯವಸ್ಥೆ ಮಾಡುತ್ತಿದ್ದೇವೆ. ಇದು ಅಧಿವೇಶನದ ಪ್ರಮುಖ ಉದ್ದೇಶವೂ ಹೌದು. ಈ ಅಧಿವೇಶನದಲ್ಲಿ 90ಕ್ಕೂ ಹೆಚ್ಚು ಮಳಿಗೆಗಳಿದ್ದವು ಎಂದರು.

ಜೊತೆಗೆ ರಾಜ್ಯದ ಎಲ್ಲಾ ಶಾಮಿಯಾನ ಮಾಲೀಕರನ್ನು ಒಂದೆಡೆ ಸೇರಿಸಿ ಸಂಘಟಿಸುವ ಮತ್ತೊಂದು ಉದ್ದೇಶದಲ್ಲಿ ಈ ಅಧಿವೇಶನ ಆಯೋಜಿಸುತ್ತಿದ್ದೇವೆ. ರಾಜ್ಯ ಮಟ್ಟದ ಈ 3ನೇ ಅಧಿವೇಶನ ಯಶಸ್ವಿಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಸಮಾರೋಪ ಸಮಾರಂಭದ ಅತಿಥಿಯಾಗಿ ಶಾಸಕ ತನ್ವೀರ್ ಸೇಠ್ ಭಾಗವಹಿಸಿದ್ದರು. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಓ ರಾಜೇಶ್‌ಗೌಡ ಸೇರಿದಂತೆ ಸಂಘದ ರಾಜ್ಯ ಮತ್ತು ಜಿಲ್ಲಾ ಘಟಕಗಳ ಪದಾಧಿಕಾರಿಗಳು ಹಾಜರಿದ್ದರು.

ಸ್ಮಶಾನ ಅಭಿವೃದ್ಧಿಗಾಗಿ ರಸ್ತೆ ತಡೆದ ಗ್ರಾಮಸ್ಥರು

● ಸರ್ಕಾರ, ಅಧಿಕಾರಿಗಳ ವಿರುದ್ಧ ಮಾದಿಗ ಸಮುದಾಯ ಆಕ್ರೋಶ
● ಮೈಸೂರು–ಮಳವಳ್ಳಿ ರಸ್ತೆಯಲ್ಲಿ ಸಂಚಾರ ಅಸ್ತವ್ಯಸ್ತ, ಪ್ರಯಾಣಿಕರ ಪರದಾಟ

ತಿ.ನರಸೀಪುರ, ಸೆ.12 –ತಾಲೂಕಿನ ಬನ್ನೂರು ಪಟ್ಟಣದ ಸುಭಾಷ್‌ನಗರದ ಆದಿ ಜಾಂಬವ ಸಮುದಾಯದವರ ರುದ್ರಭೂಮಿಗೆ ರಸ್ತೆ ಸೌಕರ್ಯ ಕಲ್ಪಿಸಿಕೊಡುವಂತೆ ಹಾಗೂ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಸಮುದಾಯ ಭವನ ನಿರ್ಮಿಸಿಕೊಡುವಂತೆ ಆಗ್ರಹಿಸಿ ಮಾದಿಗ ಜನಾಂಗದ 28 ಗ್ರಾಮಗಳ ನೂರಾರು ಮಂದಿ ಗ್ರಾಮಸ್ಥರು ಕಾವೇರಿ ಸೇತುವೆ ಬಳಿ ಮೈಸೂರು–ಮಳವಳ್ಳಿ ರಸ್ತೆ ತಡೆದು ದಿಢೀರ್ ಪ್ರತಿಭಟನೆ ನಡೆಸಿದರು.



ಸುಭಾಷ್‌ನಗರದ ಆದಿ ಜಾಂಬವ ಸಮುದಾಯದವರ ರುದ್ರಭೂಮಿಗೆ ರಸ್ತೆ ಸಂಪರ್ಕ ಕಲ್ಪಿಸಿಕೊಡುವಂತೆ ಒತ್ತಾಯಿಸಿ ಕಾವೇರಿ ನದಿಯ ಬಳಿಯ ರುದ್ರಭೂಮಿಯ ಬಳಿ ಡಾ.ಬಾಬು ಜಗಜೀವನರಾಂ ಜನ ಕಲ್ಯಾಣ ಸಂಘ ಹಾಗೂ ಬನ್ನೂರು ಕಟ್ಟಡ ಕೂಲಿ ಕಾರ್ಮಿಕರ ಸಂಘದ ವತಿಯಿಂದ ತಹಸೀಲ್ದಾರ್‌ರಿಗೆ ಮನವಿ ಪತ್ರ ಸಲ್ಲಿಸಲು ಸಭೆ ಆಯೋಜಿಸಲಾಗಿತ್ತು.

ಸಭೆಯಲ್ಲಿ ತಾಲೂಕಿನ 28 ಗ್ರಾಮಗಳ ಮಾದಿಗ ಜನಾಂಗದ ನೂರಾರು ಮಂದಿ ಗ್ರಾಮಸ್ಥರು ಸೇರಿ ಜನಾಂಗದ ಸಮಸ್ಯೆಗಳ ಕುರಿತಂತೆ ಚರ್ಚೆ ನಡೆಸುತ್ತಿದ್ದ ವೇಳೆ ತಹಸೀಲ್ದಾರ್ ಸುರೇಶ್ ಆಚಾರ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಾಮೇಗೌಡ ಸ್ಥಳಕ್ಕೆ ಆಗಮಿಸಿದರು. ಈ ವೇಳೆ ಮುಖಂಡರು ರುದ್ರಭೂಮಿಗೆ ರಸ್ತೆ ಸಂಪರ್ಕ ಇಲ್ಲದ ಬಗ್ಗೆ ಅಳಲು ತೋಡಿಕೊಂಡರು. ಈ ಸಂಬಂಧ ಮನವಿ ಪತ್ರವನ್ನು ಮಳವಳ್ಳಿ –ಮೈಸೂರು ಮುಖ್ಯ ರಸ್ತೆಯಲ್ಲೇ ನೀಡುವುದಾಗಿ ಮುಖಂಡರು ಪಟ್ಟು ಹಿಡಿದರು.

ಮುಖ್ಯ ರಸ್ತೆಗೆ ಆಗಮಿಸಿದ ಗ್ರಾಮಸ್ಥರು ಕಾವೇರಿ ಸೇತುವೆ ಬಳಿ ರಸ್ತೆಗೆ ಅಡ್ಡಲಾಗಿ ಕುಳಿತು ದಿಢೀರ್ ರಸ್ತೆ ತಡೆದು ಪ್ರತಿಭಟಿಸಿದರು. ಈ ವೇಳೆ ಆದಿ ಜಾಂಬವ ಸಮಾಜದ ಹಿತ ಕಾಪಾಡಲು ರಾಜ್ಯಸರ್ಕಾರ ವಿಫಲವಾಗಿದೆಯೆಂದು ಆರೋಪಿಸಿ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ದಿಢೀರ್ ಪ್ರತಿಭಟನೆ ಮಾಡಿ ರಸ್ತೆ ಬಂದ್ ಆದ ಕಾರಣ ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿತು. ಮುಖ್ಯ ರಸ್ತೆಯ ಎರಡೂ ಬದಿಯಲ್ಲಿ ಕಿ.ಮೀ.ಗಟ್ಟಲೆ ವಾಹನಗಳು ಸಾಲುಗಟ್ಟಿ ನಿಂತ ಪರಿಣಾಮ ಸಾರ್ವಜನಿಕರು ಪರದಾಡಬೇಕಾಯಿತು.

ಈ ವೇಳೆ ತಹಸೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ಅವರಿಗೆ ಡಾ.ಬಾಬು ಜಗಜೀವನರಾಂ ಜನ ಕಲ್ಯಾಣ ಸಂಘದ ಅಧ್ಯಕ್ಷ ಮಲಿಯೂರು ಡಿ.ಶಂಕರ್ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿದ ತಹಸೀಲ್ದಾರ್ ಸುರೇಶ್ ಆಚಾರ್ ಸಮಸ್ಯೆಯನ್ನು ಕಾನೂನು ವ್ಯಾಪ್ತಿಯಲ್ಲಿ ಅತಿ ತ್ವರಿತವಾಗಿ ಬಗೆಹರಿಸಲು ಪ್ರಯತ್ನಿಸುತ್ತೇನೆ. ಇಲಾಖಾ ವತಿಯಿಂದ ಸ್ಮಶಾನಕ್ಕೆ ಎಷ್ಟು ಸಾಧ್ಯವೋ ಅಷ್ಟು ಬೇಗ ಮೂಲ ಸೌಕರ್ಯವನ್ನು ಸರ್ಕಾರದ ವತಿಯಿಂದ ಮಾಡಿಸಿಕೊಡುತ್ತೇನೆ ಎಂದು ಭರವಸೆ ನೀಡಿದ ಹಿನ್ನೆಲೆಯಲ್ಲಿ ರಸ್ತೆತಡೆಯನ್ನು ಕೈಬಿಡಲಾಯಿತು.

ಪ್ರತಿಭಟನೆಯಲ್ಲಿ ಕಟ್ಟಡ ಕೂಲಿ ಕಾರ್ಮಿಕರ ಸಂಘದ ಅಧ್ಯಕ್ಷ ಹಾಗೂ ಪುರಸಭಾ ಸದಸ್ಯ ಶಿವಣ್ಣ, ಡಾ.ಬಾಬು ಜಗಜೀವನರಾಂ ಸಂಘದ ಉಪಾಧ್ಯಕ್ಷ ಸಿದ್ದನಹುಂಡಿ ಗೋವಿಂದರಾಜು, ಜನ ಕಲ್ಯಾಣ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಎನ್.ಪುಟ್ಟಸ್ವಾಮಿ, ಖಜಾಂಚಿ ಬನ್ನೂರು ಶಿವಣ್ಣ, ಮಂಗಿಪಚ್ಚನ ಹುಂಡಿ ಸಿ.ಲಿಂಗರಾಜು, ಮರಡೀಪುರ ಎಸ್.ಬಸವರಾಜು, ಕಳ್ಳೀಪುರ ನಾರಾಯಣ, ಗ್ರಾಪಂ ಸದಸ್ಯ ಶಿವಪ್ರಸಾದ್, ತಾಲೂಕು ಮಾದಿಗ ಮಹಾಸಂಘದ ತಾಲೂಕು ಅಧ್ಯಕ್ಷ ಭಾಸ್ಕರ್, ವಿಶ್ವಕರ್ಮ ಸಂಘದ ಅಧ್ಯಕ್ಷ ನಾಗರಾಜ ಚಾರ್ಯ, ಪ್ರಜ್ಞಾಮತ ಜಾಗೃತಿ ವೇದಿಕೆ ಅಧ್ಯಕ್ಷ ಬಿ.ಎಸ್.ಸುನೀಲ್ ಕುಮಾರ್, ದೊಡ್ಡ ಮುಲಗೂಡು ರಮೇಶ್, ಹೆಗ್ಗೂರು ಕೆಂಪಣ್ಣ, ಎಂಸಿ ಹುಂಡಿ ಜೈರಾಂ, ಸುರೇಶ್ ಗ್ರಾ.ಪಂ.ಸದಸ್ಯ ರಾಚಪ್ಪ, ಸಿದ್ದಮಲ್ಲಯ್ಯ, ನಿಂಗಣ್ಣ, ಬಿ.ಆರ್.ಮಂಜುನಾಥ್, ರಾಜಣ್ಣ ಸೇರಿದಂತೆ ಗೋಪಾಲಪುರ ಹಾಗೂ ತಿ.ನರಸೀಪುರ ಗ್ರಾಮದ ಯಜಮಾನರು, ಮುಖಂಡರು ಭಾಗವಹಿಸಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಕಿಕ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜೈಲರ್(ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಜವಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಥಾ ಚಿತ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತಸಾಗರದಾಚೆ ಎಲ್ಲೋ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಜವಾನ್ (ಹಿ)	4 ಪ್ರದರ್ಶನಗಳು
ಸಂಗಂ	
ಜವಾನ್ (ಹಿ)	4 ಪ್ರದರ್ಶನಗಳು
ಲಿಡೋ	
ಖುಷಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜವಾನ್ (ಹಿ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಸಪ್ತಸಾಗರದಾಚೆ ಎಲ್ಲೋ (ಕ): ಬೆ.10.20ಕ್ಕೆ, ಮ.1.10ಕ್ಕೆ, ರಾ.7.15ಕ್ಕೆ, ರಾ.10.05ಕ್ಕೆ, ಜವಾನ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 2	ಲೂಸಿಯಾ (ಕ): ಬೆ.10.05ಕ್ಕೆ, ಜೈಲರ್ (ಕ): ಮ.12.45ಕ್ಕೆ, ಜೈಲರ್ (ತ): ಮ.3.55ಕ್ಕೆ, ಖುಷಿ (ತೆ): ರಾ.7.10ಕ್ಕೆ, ಜವಾನ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಬೆ.10.55ಕ್ಕೆ, ರಾ.10.10ಕ್ಕೆ, ಟೋಬಿ (ಕ): ಮ.1.10ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಸಂ.4.05ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.45ಕ್ಕೆ, ಮ.1ಕ್ಕೆ, ಸಂ.6.55ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಜೈಲರ್ (ಕ): ಬೆ.11.20ಕ್ಕೆ, ರಾ.9.50ಕ್ಕೆ, ಜೈಲರ್ (ತ): ಮ.2.50ಕ್ಕೆ, ಸಂ.6.20ಕ್ಕೆ.
ಸ್ಕ್ರೀನ್ 2	ಗೂಮರ್ (ಹಿಂ): ಬೆ.9.55ಕ್ಕೆ, ಓಎಂಜಿ 2 (ಹಿಂ): ಮ.12.55ಕ್ಕೆ, ರಾ.7.15ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಸಂ.4.10ಕ್ಕೆ, ಬ್ಲೂ ಬೀಟಲ್ (ಇಂ): ರಾ.10.30ಕ್ಕೆ.
ಸ್ಕ್ರೀನ್ 3	ಗದರ್ 2 (ಹಿಂ): ಬೆ.9.55ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಮ.1.25ಕ್ಕೆ, ಬ್ಲೂ ಬೀಟಲ್ (ಇಂ): ಸಂ.4.55ಕ್ಕೆ, ಆಚಾರ್ & ಕೋ (ಕ): ರಾ.7.45ಕ್ಕೆ, ಗೂಮರ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಜೈಲರ್ (ತ): ಬೆ.10.30ಕ್ಕೆ, ಗದರ್ 2(ಹಿಂ): ಮ.2ಕ್ಕೆ, ಸಂ.6.10ಕ್ಕೆ, ಓಎಂಜಿ 2 (ಹಿಂ): ರಾ.9.40ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
ಸ್ಕ್ರೀನ್ 3	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅಪ್ರಾಪ್ತೆ ವಿವಾಹವಾಗಿರುವ ಗ್ರಾಪಂ ಅಧ್ಯಕ್ಷ

ಸಿಡಿಪಿಓ ದೂರಿನ ಮೇರೆಗೆ ಪ್ರಕರಣ ದಾಖಲು

ನಂಜನಗೂಡು, ಸೆ.12– ತಾಲೂಕಿನ ಗ್ರಾಮ ಪಂಚಾಯಿತಿಯೊಂದರ ಅಧ್ಯಕ್ಷನೋರ್ವ ಅಪ್ರಾಪ್ತ ಬಾಲಕಿಯನ್ನು ಮದುವೆಯಾಗಿದ್ದು, ಆಕೆ ಗರ್ಭಿಣಿಯೂ ಆಗಿದ್ದಾರೆ, ಈ ಸಂಬಂಧ ನಂಜನಗೂಡು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂತ್ರಸ್ತ ಬಾಲಕಿಯ ಗ್ರಾಮದ ಜನರು ಹಾಗೂ ರೈತ ಸಂಘದ ಉಪಾಧ್ಯಕ್ಷ ಮಹೇಶ್ ಈ ಸಂಬಂಧ ನಂಜನಗೂಡಿನ ಶಿಶು ಅಭಿವೃದ್ಧಿ ಅಧಿಕಾರಿಗೆ ದೂರು ನೀಡಿದ್ದಾರೆ. ಬಳಿಕ ಅವರು ನೀಡಿದ ಮಾಹಿತಿಯನ್ನಾಧರಿಸಿ ಸಿಡಿಪಿಓ ಪೊಲೀಸರಿಗೆ ದೂರು ನೀಡಿದ್ದಾರೆ.

ವಿವರ: ತಾಲೂಕಿನ ಹಾಡ್ಯ ಗ್ರಾಮ ಪಂಚಾಯತ್ ಅಧ್ಯಕ್ಷ ಹರೀಶ್ ಕುಮಾರ್ ಎಂಬಾತ, ತಾಲೂಕಿನ ಗ್ರಾಮವೊಂದರ 17 ವರ್ಷದ ಅಪ್ರಾಪ್ತ ಯುವತಿಯನ್ನು 2023ರಲ್ಲಿ ನಂಜನಗೂಡಿನ ಕಲ್ಯಾಣ ಮಂಟಪವೊಂದರಲ್ಲಿ ವಿವಾಹವಾಗಿದ್ದಾರೆ. ಶಾಲಾ ದಾಖಲಾತಿ ಪ್ರಕಾರ ಆಕೆ ಹುಟ್ಟಿದ ದಿನಾಂಕ 19–11–2005 ಆಗಿದ್ದು, ಆ ಪ್ರಕಾರ ಆಕೆಗೆ ಇನ್ನೂ 18 ವರ್ಷ ಪೂರ್ಣವಾಗಿಲ್ಲ. ಆದರೆ ಅಪ್ರಾಪ್ತ ಯುವತಿಯನ್ನು ಮದುವೆಯಾಗಿದ್ದು ಈಗ ಆಕೆ ಗರ್ಭಿಣಿಯೂ ಆಗಿದ್ದಾರೆ. ಈ ಸಂಬಂಧ ಸಮಗ್ರ ತನಿಖೆ ನಡೆಸಿ ಈತನ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಿಡಿಪಿಓಗೆ ದೂರು ಸಲ್ಲಿಸಿದ್ದಾರೆ.

ಇನ್ನು ದೂರು ದಾಖಲಿಸುವ ಮೊದಲು ಹರೀಶ್ ಕುಮಾರ್ ಮತ್ತು ಅಪ್ರಾಪ್ತ ಯುವತಿ ಮದುವೆ ನಡೆದ ನಂಜನಗೂಡು ನಗರದ ಖಾಸಗಿ ಕಲ್ಯಾಣ ಮಂಟಪದಲ್ಲಿ ಸಿಡಿಪಿಓ ಹಾಗೂ ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿದ್ದರು.

ಹೊಸ ಅಗ್ರಹಾರ ಸಹಕಾರ ಸಂಘಕ್ಕೆ 5.56 ಲಕ್ಷ ರೂ. ಲಾಭ



ಭೇರ್ಯ, ಸೆ.12– ಹೊಸ ಅಗ್ರಹಾರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ 10.95 ಕೋಟಿ ವಹಿವಾಟು ನಡೆಸಿ 5.56 ಲಕ್ಷ ವ್ಯಾಪಾರ ಲಾಭ ಮಾಡಿದೆ ಎಂದು ಸಂಘದ ಅಧ್ಯಕ್ಷ ಗೋಪಾಲಗೌಡ ತಿಳಿಸಿದರು.

ಸಂಘದ ಆವರಣದಲ್ಲಿ 2022–23 ಸಾಲಿನ ಸರ್ವ ಸದಸ್ಯರುಗಳ ವಾರ್ಷಿಕ ಮಹಾಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ರೈತರಿಂದ ರೈತರಿಗೋಸ್ಕರ ಆರಂಭಿಸಿರುವ ಸಹಕಾರ ಸಂಘ ಉತ್ತಮವಾಗಿ ರೈತರಿಗೆ ಸಾಲ ಸೌಲಭ್ಯಗಳನ್ನು ಒದಗಿಸುತ್ತಿದೆ. ನಿಮ್ಮಗಳ ಸಹಕಾರ ಅಗತ್ಯ ಎಂದು ತಿಳಿಸಿದರು.

ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ರವಿ ಮಾತನಾಡಿ, ಸಂಘ ಆಡಳಿತ ಮಂಡಳಿಯ ಸಹಕಾರದಿಂದ ಈ ಬಾರಿ 10 ಕೋಟಿಗೂ ಹೆಚ್ಚು ವಹಿವಾಟು ನಡೆಸಲಾಗಿದೆ, ಕೆಸಿಸಿ, ಎಂಟಿಎಲ್, ಮಧ್ಯಮಾವಧಿ ಸೇರಿದಂತೆ ಸಂಘದಿಂದ ರೈತರಿಗೆ 8.63 ಕೋಟಿ ಸಾಲ ನೀಡಲಾಗಿದ್ದು ಅದರಂತೆ ಶೇ.100 ರಷ್ಟು ವಸೂಲಾತಿ ಮಾಡಿದ್ದೇವೆ ಎಂದು ತಿಳಿಸಿದರು.

ಸಂಘದ ಉಪಾಧ್ಯಕ್ಷ ಚಂದ್ರಶೇಖರ್, ನಿರ್ದೇಶಕರಾದ ಚಂದ್ರೇಗೌಡ, ಹೆಚ್.ಕೆ.ಓಬೇಗೌಡ, ಡಿ.ಎಸ್.ಯೋಗೇಶ್, ರಾಮೇಗೌಡ, ಹೆಚ್.ಎಸ್.ಗೋಪಾಲ, ಸ್ವಾಮೀಗೌಡ, ಎಂ.ಜೆ.ಮಂಜೇಗೌಡ, ಸೋಮನಾಯಕ, ಶಾರದಮ್ಮ, ನಾಗಮ್ಮ ಎಂ.ಡಿ.ಸಿ.ಸಿ. ಬ್ಯಾಂಕ್ ಮೇಲ್ವಿಚಾರಕ ಎಂ.ಸತೀಶ್, ಸಂಘದ ಸಿಬ್ಬಂದಿಗಳಾದ ದೊರೆಸ್ವಾಮಿ, ಹೆಚ್.ಆರ್.ಹರ್ಷಿತ, ಮನೋಜ್ ಇದ್ದರು.

ಹೊಸೂರು ಸಹಕಾರ ಸಂಘಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಚುಂಚನಕಟ್ಟೆ, ಸೆ.12– ಹೊಸೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಜಾದಳ ಬೆಂಬಲಿತ ಕಮಲಮ್ಮ ಶಿವಣ್ಣ, ಉಪಾಧ್ಯಕ್ಷರಾಗಿ ಹಳಿಯೂರು ನವೀನ್ ಕುಮಾರ್ ಆಯ್ಕೆಯಾದರು.

ಸಂಘಕ್ಕೆ ಚುನಾವಣೆ ನಡೆದು ಒಂದು ಬಾರಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ ಸಭೆಯು ವಿಫಲವಾಗಿ ಮುಂದೂಡಿದ್ದ ಈ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಮಲಮ್ಮ ಮತ್ತು ವಿವೇಕಾನಂದ, ಉಪಾಧ್ಯಕ್ಷ ಸ್ಥಾನಕ್ಕೆ ನವೀನ್ ಮತ್ತು ಪಾರ್ಥಯ್ಯ ನಾಮಪತ್ರ ಸಲ್ಲಿಸಿದ್ದರು. ಕಮಲಮ್ಮ ಅವರು 8 ಮತಗಳನ್ನು ಪಡೆದು ಗೆದ್ದು ಬೀಗಿದರೆ ವಿವೇಕಾನಂದ 4ಮತಗಳನ್ನು ಪಡೆದರು. ಉಪಾಧ್ಯಕ್ಷ ಸ್ಥಾನಕ್ಕೆ ಪಾರ್ಥಯ್ಯ ಅವರು ನಾಮಪತ್ರ ವಾಪಸ್ ಪಡೆದ ಕಾರಣ ನವೀನ್ ಕುಮಾರ್ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಹಕಾರ ಇಲಾಖೆಯ ಎಸ್.ರವಿ ಪ್ರಕಟಿಸಿದರು.

ಸಭೆಯಲ್ಲಿ ನಿರ್ದೇಶಕರಾದ ಹೆಚ್.ಆರ್ ಕೃಷ್ಣಮೂರ್ತಿ, ರಮೇಶ್, ಹೆಚ್.ಎನ್. ಜಗದೀಶ್, ಹುಚ್ಚೇಗೌಡ, ರಾಜೇಗೌಡ, ಕಲ್ಯಾಣಮ್ಮ, ಕೆಂಪನಾಯಕ ಹಾಜರಿದ್ದರು. ಅನಾರೋಗ್ಯ ಕಾರಣ ಹೆಚ್.ಆರ್ ಮಹೇಶ ಗೈರು ಹಾಜರಾದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಹಾಪ್‌ಕಾಮ್ಸ್ ಮಾಜಿ ಅಧ್ಯಕ್ಷರಾದ ಹೆಚ್.ಟಿ ಸುದರ್ಶನ್, ಸಹಕಾರ ಸಂಘದ ಮಾಜಿ ಅಧ್ಯಕ್ಷರಾದ ಮಧುಚಂದ್ರ, ಶಿವಸ್ವಾಮಿ, ಸುದರ್ಶನ್, ಮಾಜಿ ಉಪಾಧ್ಯಕ್ಷ ಎಲ್‌ಐಸಿ ರಮೇಶ್, ಗ್ರಾಪಂ ಮಾಜಿ ಉಪಾಧ್ಯಕ್ಷ ಭಾಸ್ಕರ್, ಡೈರಿ ನಿರ್ದೇಶಕರಾದ ಸ್ವಾಮಿ, ಬುದ್ದಿಸಾಗರ, ಜಾದಳ ಮುಖಂಡ ಬಿ.ರಮೇಶ್ ಗುತ್ತಿಗೆದಾರ ಕೀರ್ತಿ, ಮುಖಂಡರಾದ ರಾಘವೇಂದ್ರ ರಾಜೇಶ್, ಅವಿನಾಶ್, ಅಭಿ, ದೊಡ್ಡಕೊಪ್ಪಲು ನವೀನ್ ಅಭಿನಂದಿಸಿದರು. ಸಂಘದ ಸಿಇಒ ಚಂದ್ರಕಲಾ, ಸಿಬ್ಬಂದಿ ಮಹದೇವ, ಅರುಣ, ರವಿ ಹಾಜರಿದ್ದರು ಆಯ್ಕೆ ಪ್ರಕಟವಾಗುತ್ತಿದ್ದಂತೆ ಪಟಾಕಿ ಸಿಡಿಸಿ, ಸಿಹಿಹಂಚಿ ಬೆಂಬಲಿಗರು ಸಂಭ್ರಮಿಸಿದರು.

ತಂದೆ ಆಸೆಯಂತೆ ನಂಜನಗೂಡು ಕ್ಷೇತ್ರವನ್ನು ಅಭಿವೃದ್ಧಿ ಮಾಡುವೆ



ಮಲ್ಲುಂಡಿ, ಸೆ.12– ನನ್ನ ತಂದೆ ದಿ.ಆರ್.ಧ್ರುವನಾರಾಯಣ್ ಅವರ ಆಸೆಯಂತೆ ಕ್ಷೇತ್ರದ ಅಭಿವೃದ್ಧಿಯೇ ನನ್ನ ಗುರಿಯಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಹೇಳಿದರು.

ಸಮೀಪದ ಹುರ ಗ್ರಾಮದಿಂದ ಸಿದ್ದೇಗೌಡನಹುಂಡಿ ಗ್ರಾಮದವರಗೆ ತೆರಳುವ ರಸ್ತೆಗೆ 1.50 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ರಸ್ತೆ ಇಂದು ಅಭಿವೃದ್ಧಿ ಭಾಗ್ಯ ಕಂಡಿದೆ. ಕಾಮಗಾರಿಯನ್ನು ಗುಣಮಟ್ಟದಿಂದ ಮಾಡಬೇಕು ಎಂದರು.

ನನ್ನ ತಂದೆ ಎರಡು ಬಾರಿ ಸಂಸದರಾಗಿ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರು ಈ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡುವ ಕನಸು ಕಂಡಿದ್ದರು. ಅದೇ ರೀತಿ ನಾನು ಅವರ ಹಾದಿಯಲ್ಲಿ ಸಾಗಿ ಅವರ ಆಸೆಯಂತೆ ಕ್ಷೇತ್ರದ ಮನೆ ಮಗನಾಗಿ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ತಿಳಿಸಿದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠ ನಾಯಕ, ಬ್ಲಾಕ್ ಅಧ್ಯಕ್ಷ ಕುರಹಟ್ಟಿ ಕೆ ಜಿ ಮಹೇಶ್, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ ಮಾರುತಿ, ತಾ ಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಗ್ರಾ ಪಂ ಅಧ್ಯಕ್ಷೆ ತಾಯಮ್ಮ, ಉಪಾಧ್ಯಕ್ಷ ಮಹದೇವ ಸ್ವಾಮಿ, ಗ್ರಾ ಪಂ ಮಾಜಿ ಅಧ್ಯಕ್ಷ ಶಿವಣ್ಣ, ಸೇರಿದಂತೆ ಪ್ರಮುಖರು ಹಾಜರಿದ್ದರು.

ಮೊಬೈಲ್ ಯೂನಿಟ್ ವಾಹನದ ಮೂಲಕ ತಪಾಸಣಾ ಶಿಬಿರ

ನಂಜನಗೂಡು, ಸೆ.12– ಲಯನ್ಸ್ ಸೇವಾ ಸಂಸ್ಥೆಯು ಮೊಬೈಲ್ ಯೂನಿಟ್ ವಾಹನದ ಮೂಲಕ ಗ್ರಾಮೀಣ ಭಾಗದ ಬಡವರಿಗೆ ವಾಕ್ ಮತ್ತು ಶ್ರವಣ ತಪಾಸಣಾ ಮತ್ತು ಚಿಕಿತ್ಸಾ ಶಿಬಿರವನ್ನು ಏರ್ಪಡಿಸಿ ಬಡವರಿಗೆ ನೆರವಾಗುತ್ತಿರುವುದು ಶ್ಲಾಘನೀಯ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಹೇಳಿದರು.



ನಗರದ ಬೈಪಾಸ್ ರಸ್ತೆಯಲ್ಲಿರುವ ಮಹದೇಶ್ವರ ಪ್ಯಾಲೇಸ್ ಬಳಿ ಲಯನ್ಸ್ ಕ್ಲಬ್ ವತಿಯಿಂದ ವಾಕ್ ಮತ್ತು ಶ್ರವಣ ತಪಾಸಣಾ ಮತ್ತು ಚಿಕಿತ್ಸಾ ಶಿಬಿರದ ಮೊಬೈಲ್ ಯೂನಿಟ್ ವಾಹನಕ್ಕೆ ಚಾಲನೆ ನೀಡಿ ಮಾತನಾಡಿದರು.

ನಾನು ಸಹ ಒಂದನೇ ತರಗತಿಯಿಂದ ನಾಲ್ಕನೇ ತರಗತಿಯವರೆಗೆ ಲಯನ್ಸ್ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿದ್ದೇನೆ. ಆದ್ದರಿಂದಲೇ ಲಯನ್ಸ್ ಸೇವಾ ಸಂಸ್ಥೆಯನ್ನು ನಾನು ಹತ್ತಿರದಿಂದ ಬಲ್ಲವನಾಗಿದ್ದೇನೆ. ಲಯನ್ಸ್ ಸೇವಾ ಸಂಸ್ಥೆ ತನ್ನ ಸೇವಾ ಕಾರ್ಯಗಳಿಂದ ಅನೇಕ ಬಡವರಿಗೆ ನೆರವು ನೀಡುವ ಮೂಲಕ ಬೇಕಾಗಿದೆ ಎಂದ ಅವರು, ಲಯನ್ ಸೇವಾ ಸಂಸ್ಥೆ ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ನೆರವು ನೀಡುವುದಲ್ಲದೆ, ಸಾರ್ವಜನಿಕರಿಗೆ ನೆರವಾಗುವಂತಹ ಕಣ್ಣಿನ ತಪಾಸಣಾ ಶಿಬಿರ, ಉಚಿತ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ಶಿಬಿರಗಳನ್ನು ಏರ್ಪಡಿಸುವ ಮೂಲಕ ಬಡವರಿಗೆ ನೆರವಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಲಯನ್ಸ್ ಕ್ಲಬ್ ಅಧ್ಯಕ್ಷ ಗೋಪಾಲಕೃಷ್ಣ, ಡಾ. ಎಸ್.ಆರ್. ಚಂದ್ರಶೇಖರ್, ಎನ್ .ನಾಗರಾಜು, ಉಮೇಶ್, ಅಂಬಿ, ಬಸವಣ್ಣ, ಲಯನ್ ಮಂಜುನಾಥ್, ನಂಜುಂಡಿ, ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ನಾಳೆಯಿಂದ ವಾಲಿಬಾಲ್ ಪಂದ್ಯಾವಳಿ

ಹುಣಸೂರು, ಸೆ.12–ಸಾರ್ವಜನಿಕ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಹಾಗೂ ಹುಣಸೂರು ಟ್ಯಾಲೆಂಟ್ ವಿದ್ಯಾಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿಭಾಗದ ಮೈಸೂರು ವಿಭಾಗ ಮಟ್ಟದ ವಾಲಿಬಾಲ್ ಪಂದ್ಯಾವಳಿ ಸೆ.14ರಿಂದ ಸೆ.16ರ ವರೆಗೆ ನಗರದ ಟ್ಯಾಲೆಂಟ್ ವಿದ್ಯಾಸಂಸ್ಥೆ ಕ್ರೀಡಾಂಗಣದಲ್ಲಿ ನಡೆಯಲಿದೆ. ಸೆ.14ರ ಸಂಜೆ 4 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಪಂದ್ಯಾವಳಿಗೆ ಚಾಲನೆ ನೀಡಲಿದ್ದಾರೆ.

ಪಂದ್ಯಾವಳಿಯ ಧ್ವಜಾರೋಹಣವನ್ನು ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್‌ರವರು ನೆರವೇರಿಸಲಿದ್ದು, ಸಮಾರಂಭದ ಅಧ್ಯಕ್ಷತೆಯನ್ನು ಶಾಸಕ ಜಿ.ಡಿ.ಹರೀಶ್‌ಗೌಡ ವಹಿಸಲಿದ್ದಾರೆ. ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮತ್ತು ಟ್ಯಾಲೆಂಟ್ ವಿದ್ಯಾಸಂಸ್ಥೆಯ ಅಧ್ಯಕ್ಷ ನಾರಾಯಣ ರೈ ಭಾಗವಹಿಸಲಿದ್ದಾರೆ.

ಮುಖ್ಯಅತಿಥಿಗಳಾಗಿ ಸಂಸದರಾದ ಪ್ರತಾಪ್‌ಸಿಂಹ, ವಿ.ಶ್ರೀನಿವಾಸಪ್ರಸಾದ, ಸುಮಲತಾ ಅಂಬರೀಶ್ ಭಾಗವಹಿಸಲಿದ್ದಾರೆ.

ಪಂದ್ಯಾವಳಿಯಲ್ಲಿ ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು, ಹಾಸನ, ಚಿಕ್ಕಮಂಗಳೂರು, ಉಡುಪಿ, ದಕ್ಷಿಣ ಕನ್ನಡ, ಸೇರಿದಂತೆ 8 ಜಿಲ್ಲೆಗಳಿಂದ 380 ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಪ್ರೌಢಶಾಲಾ ವಿಭಾಗದಿಂದ 8 ಬಾಲಕರ ತಂಡ 8 ಬಾಲಕಿಯರ ತಂಡ ಹಾಗೂ ಪ್ರಾಥಮಿಕ ಶಾಲಾ ವಿಭಾಗದಿಂದ 8 ಬಾಲಕರ ತಂಡ, 8 ಬಾಲಕಿಯರ ತಂಡಗಳು ಈ ಪಂದ್ಯಾಳಿಯಲ್ಲಿ ಭಾಗವಹಿಸಲಿವೆ ಎಂದು ಟ್ಯಾಲೆಂಟ್ ವಿದ್ಯಾಸಂಸ್ಥೆಯ ಪ್ರಾಂಶುಪಾಲರಾದ ಮಂಜುನಾಥ್ ತಿಳಿಸಿದರು.

ಹೆಚ್.ಡಿ.ಕೋಟೆ ತಾಲೂಕಿನ ರಾಮೇನಹಳ್ಳಿ ಕೆರೆ ಅಭಿವೃದ್ಧಿ

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಕೆರೆ ಹಸ್ತಾಂತರ




ಹೆಚ್.ಡಿ.ಕೋಟೆ, ಸೆ.12– ರಾಮೇನಹಳ್ಳಿ ಕೆರೆ ಅಭಿವೃದ್ಧಿಪಡಿಸಲಾಗಿದ್ದು, ಸುತ್ತಮುತ್ತ ಸುಮಾರು 250 ಕುಟುಂಬಗಳಿಗೆ ಉಪಯೋಗವಾಗಲಿದ್ದು 200 ಎಕರೆಗೆ ಮೇಲ್ಪಟ್ಟು ನೀರಾವರಿ ಒದಗಿಸುವ ಕೆರೆಯಾಗಿದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಪ್ರಾದೇಶಿಕ ನಿರ್ದೇಶಕ ಬಿ. ಜಯರಾಮ ನೆಲ್ಲಿತ್ತಾಯ ತಿಳಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹೆಚ್.ಡಿ.ಕೋಟೆ ಮತ್ತು ರಾಮೇನಹಳ್ಳಿ ಕೆರೆ ಸಮಿತಿ ಸಂಯುಕ್ತಾಶ್ರಯದಲ್ಲಿ 471 ನೇ ನಮ್ಮೂರು ನಮ್ಮ ಕೆರೆ ಯೋಜನೆಯಡಿ ರಾಮೇನಹಳ್ಳಿ ಕೆರೆಯನ್ನು ಅಭಿವೃದ್ಧಿಗೊಳಿಸಿ ಹಸ್ತಾಂತರ ಮಾಡುವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಮೇನಹಳ್ಳಿಕೆರೆ 6.20ಎಕರೆಯಷ್ಟು ಇದ್ದು ಸಂಪೂರ್ಣ ಹೂಳನ್ನು ತೆಗೆಯಲಾಗಿದೆ. ಪುರಾತನ ಇತಿಹಾಸವುಳ್ಳ ಕೆರೆಯಾಗಿದ್ದು, ಯೋಜನೆ ವತಿಯಿಂದ ಸುಮಾರು 6.47 ಲಕ್ಷ ಹಾಗೂ ಗ್ರಾಮಸ್ಥರು ನೀಡಿದ 6 ಲಕ್ಷ ರೂ. ಸೇರಿ ಒಟ್ಟು 12.47ಲಕ್ಷ ವೆಚ್ಚದಲ್ಲಿ ರಾಮೇನಹಳ್ಳಿಕೆರೆ ಅಭಿವೃದ್ಧಿಗೊಳಿಸಲಾಗಿದೆ ಎಂದರು. ಪ್ರಾಣಿ ಪಕ್ಷಿಗಳಿಗೆ ಕುಡಿಯಲು ನೀರು ಪ್ರಯೋಜನವಾಗುವ ನಿಟ್ಟಿನಲ್ಲಿ, ಕೃಷಿ ಭೂಮಿಗೆ ಅಂತರ್ಜಲ ಮಟ್ಟ ಹೆಚ್ಚಲು ಸಹಕಾರಿಯಾಗಿದೆ, ಆದ್ದರಿಂದ ಈ ಕೆರೆ ಸಮಿತಿಯ ಪದಾಧಿಕಾರಿಗಳಿಗೆ ಕೆರೆಯ ಸುತ್ತ ಇರುವ ಗಿಡಗಳ ಸಂರಕ್ಷಣೆ ಮಾಡುವುದರ ಬಗ್ಗೆ ತಿಳಿಸಿದರು.


ಕಾರ್ಯಕ್ರಮದಲ್ಲಿ ಯೋಜನಾಧಿಕಾರಿ ವಿ. ಭಾಸ್ಕರ್, ಕೃಷಿ ಅಧಿಕಾರಿ ಬಿ. ಜೆ. ರಾಜು, ಕೆರೆ ಅಭಿಯಂತರರು ಸುರೇಶ್, ಒಕ್ಕೂಟದ ಅಧ್ಯಕ್ಷರು ಉಮೇಶ್, ಮಾಜಿ ಎಪಿಎಂಸಿ ಅಧ್ಯಕ್ಷ ಜವರನಾಯಕ, ಬಸವನಾಯಕ, ಚಿಕ್ಕನಾಯಕ, ಪುಟ್ಟನಾಯಕ, ಭೋಜನಾಯಕ, ಪ್ರಕಾಶ್, ಶಿವಯ್ಯ, ಮಹಾದೇವಯ್ಯ, ಪುಟ್ಟಸೋಮಚಾರಿ, ರಾಮೇನಹಳ್ಳಿ ಕೆರೆ ಸಮಿತಿಯ ಎಲ್ಲಾ ಪದಾಧಿಕಾರಿಗಳು ಮತ್ತು ಗ್ರಾಮಸ್ಥರು ಮತ್ತು ಸ್ವ–ಸಹಾಯ ಸಂಘದ ಸದಸ್ಯರುಗಳು ಭಾಗವಹಿಸಿದ್ದರು.

ಎಂ.ಕೃಷ್ಣ ನಿಧನ



ಹೆಚ್.ಡಿ.ಕೋಟೆ: ಪಟ್ಟಣದ ವಿಶ್ವನಾಥ ಕಾಲೋನಿ ನಿವಾಸಿ ಎಂ.ಕೃಷ್ಣ(80) ಮಂಗಳವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಪಟ್ಟಣದ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬವರ್ಗ ತಿಳಿಸಿದೆ.

ನಿಂಗಮ್ಮ



ಹೆಚ್.ಡಿ.ಕೋಟೆ: ತಾಲೂಕಿನ ಚೆನ್ನೇಗೌಡನಹುಂಡಿ ಗ್ರಾಮದ ನಿವಾಸಿ, ತುಂಬಸೋಗೆ ಗ್ರಾಮ ಪಂಚಾಯಿತಿ ಸದಸ್ಯ ಬಂದಿಗೆ ಗೌಡ ಅವರ ತಾಯಿ ನಿಂಗಮ್ಮ(85) ಮಂಗಳವಾರ ನಿಧನರಾಗಿದ್ದಾರೆ. ಮೃತರು ನಾಲ್ವರು ಪುತ್ರರು, ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಚೆನ್ನೇಗೌಡನಹುಂಡಿ ಗ್ರಾಮದ ಅವರ ತೋಟದಲ್ಲಿ ಮಂಗಳವಾರ ನೆರವೇರಿಸಲಾಯಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಮೊರಾಕ್ಕೊ ಭೂಕಂಪದಲ್ಲಿ ಮೃತರ ಸಂಖ್ಯೆ 3000ಕ್ಕೆ ಏರಿಕೆ; ಮುಂದುವರೆದ ರಕ್ಷಣಾ ಕಾರ್ಯಾಚರಣೆ

ರಬಾತ್: ಕಳೆದ ಶುಕ್ರವಾರ (ಸೆ. 8) ಮೊರಾಕ್ಕೊದ ಮರ್ರಾಕೇಶ್‌ನಲ್ಲಿ ಸಂಭವಿಸಿದ ಭೂಕಂಪದಿಂದ ಸಾವನ್ನಪ್ಪಿದವರ ಸಂಖ್ಯೆ 3000ಕ್ಕೆ ಏರಿಕೆಯಾಗಿದ್ದು ಜೊತೆಗೆ ಗಾಯಾಳುಗಳ ಸಂಖ್ಯೆಯೂ 2,500 ದಾಟಿದೆ ಎಂದು ಸುದ್ದಿ ಸಂಸ್ಥೆ ಅಲ್ ಜಜೀರಾ ವರದಿ ಮಾಡಿದೆ.

ಕಳೆದ ಶುಕ್ರವಾರ ಮೊರಾಕೊದ ಮರ್ರಾಕೇಶ್‌ನಲ್ಲಿ 6.8 ತೀವ್ರತೆಯ ಭೂಕಂಪ ಸಂಭವಿಸಿತ್ತು. ಭೂಕಂಪದ ಕೇಂದ್ರಬಿಂದುವು ನೈಋತ್ಯ ಪ್ರದೇಶದಲ್ಲಿ ಮರ್ರಾಕೇಶ್‌ನಿಂದ 72 ಕಿಲೋಮೀಟರ್ ದೂರದಲ್ಲಿದೆ ಎಂದು ಹೇಳಲಾಗಿದೆ.

ಅಟಲ್ ಪರ್ವತಗಳಲ್ಲಿ ಈ ಭೂಕಂಪಗಳು ಸಂಭವಿಸಿದ್ದು ಪ್ರದೇಶದಲ್ಲಿದ್ದ ಕಟ್ಟಡಗಳು ನೆಲಸಮಗೊಂಡಿದೆ ಎಂದು ವರದಿಯಾಗಿದೆ. ರಕ್ಷಣಾ ತಂಡ ಕಾರ್ಯಾಚರಣೆ ನಡೆಸುತ್ತಿದ್ದು ಭೂಕಂಪದ ಸಾವಿನ ಸಂಖ್ಯೆ 3000 ಮೀರಿದೆ. ಗಾಯಾಳುಗಳ ಸಂಖ್ಯೆಯಲ್ಲಿಯೂ ಏರಿಕೆಯಾಗಿದೆ ಎಂದು ಹೇಳಲಾಗಿದೆ.

ಭೂಕಂಪ ಪ್ರದೇಶದಲ್ಲಿ ಪರಿಹಾರ ಕಾರ್ಯವನ್ನು ಚುರುಕುಗೊಳಿಸಲಾಗಿದೆ. ಬದುಕುಳಿದವರನ್ನು ಹುಡುಕಲು ಇನ್ನೂ ರಕ್ಷಣಾ ಕಾರ್ಯಾಚರಣೆಗಳು ನಡೆಯುತ್ತಿವೆ. ರಕ್ಷಣಾ ಕಾರ್ಯಕ್ಕೆ ಸ್ಪೇನ್, ಯುನೈಟೆಡ್ ಕಿಂಗ್‌ಡಮ್ ಮತ್ತು ಕತಾರ್‌ನ ತಂಡಗಳು ಪರಿಹಾರ ಕಾರ್ಯದಲ್ಲಿ ಸೇರಿಕೊಂಡಿವೆ ಎನ್ನಲಾಗಿದೆ.

ಮೂರು ದಿನಗಳ ಶೋಕಾಚರಣೆ: ಮೊರಾಕ್ಕೊದಲ್ಲಿ ಸಂಭವಿಸಿದ ಭೂಕಂಪದಿಂದಾಗಿ, ಮಾರಾಕೇಶ್‌ನಿಂದ 60 ಕಿಲೋಮೀಟರ್ ದೂರದಲ್ಲಿರುವ ಪರ್ವತ ಹಳ್ಳಿಯ ಪ್ರತಿಯೊಂದು ಕಟ್ಟಡವೂ ನಾಶವಾಗಿದೆ. ಕಳೆದ ಶುಕ್ರವಾರದಿಂದ ರಕ್ಷಣಾ ತಂಡಗಳು ಹಗಲಿರುಳು ಶ್ರಮಿಸುತ್ತಿವೆ. ಈ ಘಟನೆಯ ನಂತರ, ಮೊರಾಕ್ಕೊ ಅಧಿಕಾರಿಗಳು ಮೂರು ದಿನಗಳ ರಾಷ್ಟ್ರೀಯ ಶೋಕಾಚರಣೆಯನ್ನು ಘೋಷಿಸಿದ್ದಾರೆ. ಮೊರಾಕೊದ ರಾಜ ಮೊಹಮ್ಮದ್ VI ಅವರು ವಿಶೇಷ ಶೋಧ ಮತ್ತು ಪಾರುಗಾಣಿಕಾ ತಂಡಗಳನ್ನು ಮತ್ತು ಶಸ್ತ್ರಚಿಕಿತ್ಸಾ ಕ್ಷೇತ್ರ ಆಸ್ಪತ್ರೆಯನ್ನು ನಿಯೋಜಿಸಲು ಸಶಸ್ತ್ರ ಪಡೆಗಳಿಗೆ ನಿರ್ದೇಶನ ನೀಡಿದ್ದಾರೆ ಎನ್ನಲಾಗಿದೆ.

ಚಂದ್ರಬಾಬು ನಾಯ್ಡು ಗೃಹಬಂಧನ ಅರ್ಜಿ ತಿರಸ್ಕರಿಸಿದ ಎಸಿಬಿ ಕೋರ್ಟ್

ವಿಜಯವಾಡ: ಮಾಜಿ ಮುಖ್ಯಮಂತ್ರಿ ಹಾಗೂ ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು ಅವರ ಗೃಹ ಬಂಧನ ಅರ್ಜಿಯನ್ನು ವಿಜಯವಾಡ ಎಸಿಬಿ ಕೋರ್ಟ್ ವಜಾಗೊಳಿಸಿದೆ. ಚಂದ್ರಬಾಬು ಅವರ ಪರ ವಕೀಲರು ಸಲ್ಲಿಸಿದ್ದ ಅರ್ಜಿ ಕುರಿತು ಎರಡು ದಿನಗಳ ಕಾಲ ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಾಲಯ ಅರ್ಜಿಯನ್ನು ತಿರಸ್ಕರಿಸಿದೆ.



ರಾಜಮಂಡ್ರಿ ಕೇಂದ್ರ ಕಾರಾಗೃಹದಲ್ಲಿ 14 ದಿನಗಳ ಬಂಧನದಲ್ಲಿರುವ ಚಂದ್ರಬಾಬು ನಾಯ್ಡು ಅವರನ್ನು ಗೃಹಬಂಧನದಲ್ಲಿರಿಸಲು ಅನುಮತಿ ಕೋರಿ ಮಾಜಿ ಸಿಎಂ ಪರ ವಕೀಲರು ಸಲ್ಲಿಸಿದ್ದ ಅರ್ಜಿಯನ್ನು ಎಸಿಬಿ ವಿಶೇಷ ನ್ಯಾಯಾಲಯ ತಿರಸ್ಕರಿಸಿದೆ. ಚಂದ್ರಬಾಬು ನಾಯ್ಡು ಪರ ವಕೀಲ ಸಿದ್ಧಾರ್ಥ ಲೂತ್ರಾ ಭಾನುವಾರ ರಾತ್ರಿ ಭದ್ರತೆ ದೃಷ್ಟಿಯಿಂದ ಗೃಹಬಂಧನಕ್ಕೆ ಅನುಮತಿ ನೀಡಬೇಕು ಎಂದು ಕೋರಿ ಅರ್ಜಿ ಸಲ್ಲಿಸಿದ್ದರು.

ಸೋಮವಾರ ಬೆಳಗ್ಗೆಯಿಂದಲೇ ಪ್ರಾರಂಭಗೊಂಡ ಅರ್ಜಿಯ ಸುದೀರ್ಘ ವಿಚಾರಣೆ ಮಂಗಳವಾರವೂ ಮುಂದುವರಿದಿತ್ತು ಎರಡೂ ಕಡೆಯ ವಾದ ಪ್ರತಿವಾದಗಳನ್ನು ಆಲಿಸಿದ ನ್ಯಾಯಾಧೀಶರು ಚಂದ್ರಬಾಬು ಅವರ ಅರ್ಜಿಯನ್ನು ತಿರಸ್ಕರಿಸಿ, ಚಂದ್ರಬಾಬು ಅವರ ಆರೋಗ್ಯ ಉತ್ತಮವಾಗಿದ್ದು, ಜೈಲಿನಲ್ಲಿ ಸಂಪೂರ್ಣ ಭದ್ರತೆ ಒದಗಿಸಲಾಗಿದೆ ಎನ್ನುವ ಮಾತನ್ನು ಹೇಳಿದೆ.

ಎಸಿಬಿ ನ್ಯಾಯಾಲಯದಲ್ಲಿ ಸೋಮವಾರ ಎರಡೂ ಕಡೆಯ ವಕೀಲರು ಸುದೀರ್ಘವಾದ ವಾದ ಮಂಡಿಸಿದ್ದಾರೆ. ಮುದಾಟ ಜೈಲಿನಲ್ಲಿರುವ ಚಂದ್ರಬಾಬು ನಾಯ್ಡು ಅವರ ಭದ್ರತೆ ಬಗ್ಗೆ ಅನುಮಾನವಿದೆ ಎಂದು ಬಾಬು ಪರ ವಕೀಲ ಸಿದ್ಧಾರ್ಥ ಲೂತ್ರಾ ಅವರು ವಾದ ಮಂಡಿಸಿದರು. ಸಿಐಡಿ ಪರವಾಗಿ ಹೆಚ್ಚುವರಿ ಅಡ್ವೋಕೇಟ್ ಜನರಲ್ ಪೊನ್ನವೋಲು ಸುಧಾಕರ್ ರೆಡ್ಡಿ ವಾದ ಮಂಡಿಸಿದರು. ರಾಜಮಂಡ್ರಿ ಕೇಂದ್ರ ಕಾರಾಗೃಹ ಮನೆಗಿಂತ ಸುರಕ್ಷಿತ ಸ್ಥಳವಾಗಿದೆ. ಹಾಗೂ ಕಾರಾಗೃಹದ ಸಂಪೂರ್ಣ ಸ್ನೇಹಾ ಬ್ಲಾಕ್ ಅನ್ನು ಚಂದ್ರಬಾಬು ನಾಯ್ಡು ಅವರಿಗೆ ನೀಡಲಾಗಿದೆ. ಅಲ್ಲದೆ ಸಿಸಿಟಿವಿ ಕ್ಯಾಮರಾ ಸೇರಿದಂತೆ ವಿಶೇಷ ಭದ್ರತಾ ವ್ಯವಸ್ಥೆಗಳನ್ನು ಸಹ ಮಾಡಲಾಗಿದೆ ಎಂದು ವಾದ ಮಂಡಿಸಿದರು.

ಚಂದ್ರಬಾಬು ಅವರಿಗೆ ಜೈಲಿನಲ್ಲಿ ಸಂಪೂರ್ಣ ಭದ್ರತೆ ಇದ್ದು, ಅವರು ಹೊರಗೆ ಇದ್ದರೆ ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಅವಕಾಶವಿದೆ ಎಂದು ಎಎಜಿ ಸುಧಾಕರ್ ರೆಡ್ಡಿ ಹೇಳಿದರು. ಕೌಶಲಾಭಿವೃದ್ಧಿ ಪ್ರಕರಣದಲ್ಲಿ ಬಂಧಿತರಾಗಿರುವ ಜೈಲಿನಲ್ಲಿರುವ ಚಂದ್ರಬಾಬು ನಾಯ್ಡು ಅವರಿಗೆ ಬೆದರಿಕೆ ಇದೆ ಎನ್ನುವ ಆರೋಪವನ್ನು ವಿಜಯವಾಡ ಎಸಿಬಿ ಕೋರ್ಟ್ ತಿರಸ್ಕರಿಸಿದೆ ವಿಚಾರಣೆಯ ಎರಡನೇ ದಿನವಾದ ಇಂದು ಗೃಹ ಬಂಧನಕ್ಕೆ ಅನುಮತಿ ನೀಡಲು ಸಾಧ್ಯವಿಲ್ಲ ಎಂದು ಹೇಳಿದೆ.

3ನೇ ವರ್ಷದ ಪುಣ್ಯಸ್ಮರಣೆ



ಸದಾ ಹಸನ್ಮುಖಿಯಾಗಿ ನಮ್ಮಗಳ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ನೆಲೆಸಿರುವ ಅಮ್ಮ ನಿಮ್ಮ ನೆನಪಿನಲ್ಲಿರುವ ಟಿ.ಮಹದೇವ್ ಪ್ರಸಾದ್ ಲೆಕ್ಕ ಪರಿಶೋಧಕರು ಮತ್ತು ಕುಟುಂಬ ವರ್ಗದವರು

ಶ್ರೀಮತಿ **ಅಂಜನಮ್ಮ**

3ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 3 ವರ್ಷವಾದರೂ ನಿಮ್ಮ ನೆನಪು ಅಮರ – ಗೋವಿಂದರಾಜು, PWD ಕ್ಲಾಸ್ 1 ಕಂಟ್ರಾಕ್ಟರ್, ಜಯನಗರ, ಕೆ.ಜಿ.ಕೊಪ್ಪಲು ಹಾಗೂ ಕುಟುಂಬದವರು.

ಶ್ರೀಮತಿ ಚನ್ನಮ್ಮ
ದಿ: ಕರಿಯಪ್ಪನವರ ಧರ್ಮಪತ್ನಿ (ಚಾಮಯ್ಯನ ದೇವಣ್ಣ)

PUBLIC NOTICE

It is hereby notified that intends the owner of the schedule property **Smt M S Prabha** W/o Srinivasa murthy residing at 2923/1 7th cross Fortm Mohalla Chamundi puram Mysuru intends to avail loan from our client banking institute and during the proposes of verification of the records it is found that the parental document namely the sale deed being a Registered Sale deed executed by Sri Cheuluvaraju and others in favour of Sri C R Dwarakanath vide registered document no 2383 volume no 4929 page no 58-63 of book no 1 dated 11-08-1998 have been lost by them and to this effect they have also preferred a police complaint as on 07-09-2023 before the Vidyaranaya police station Mysuru under reference number GP-No-94/2023

So Any person or persons or society or any finanacail institutes or any organisation holding any kind of claiming or ascertaining any rights, title, interest, claim or whatsoever in the schedule property or any part there of in any manner holding any claims against the schedule property under any law or has secured attachment from courts or intends to object for creation of mortgage in favour of my client on any legal grounds or by holding the Physical possession over the property are hereby notified to submit their objections along with documents to the undersigned within 10 days of the issuance of this public notice with all documentary proof.

If no response is received within the said time my client shall proceed with the mortgage process will be concluded and there after no body whom-so-ever would have any claim what-so-ever and how-so-ever.

SCHEDULE

All that piece and parcel of the property bearing Property No. **910/1 F-9 Situated 2nd Main, 1st Cross, Vidayaranayapuram, Fort Mohalla, Mysore** Measuring East to West 25.00 feet and North to South 50.00 feet and with residential building thereon.

Bounded on: East by: House belong to Meenakshamma, West by: Property belong to Prabhakar, North by: Conservancy Lane, South by: Road

S. SURESH B.B.M LL.,B
ADVOCATE
No, 974, 7th Main, 3rd Stage,
Gokulam, Mysore - 570 002

Place: Mysore
Date: 12.09.2023

ಸಾರ್ವಜನಿಕ ಪ್ರಕಟಣೆ

[illegible]

ಹೇಮಲತಾ ಆರ್. ವಕೀಲರು
ಬೆಂಗಳೂರು

CHANGE OF NAME

I, **Abhishek**, S/o B.M. Nataraju, aged about 23 years, residing at # 54, Kaveri Main Road, Gururaja Layout, Mysuru - 570029 had changed my name from **Abhishek** to **YASHAS NATARAJU** vide affidavit dt 12-09-2023 sworn before Notary Y.M. Kiran, Mysuru.

ಮೂರನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ
ಬಿ.ಪಿ.ಶಾರದಮ್ಮ
ನಿಧನ: 13.09.2020
ದುಃಖತಪ್ತರು: ಪತಿ ಕೆ ಮಂಜುನಾಥ್ (ನಿವೃತ್ತರು KSRTC), ಮಕ್ಕಳು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು, ಕುಟುಂಬವರ್ಗದವರು, ಬನ್ನಿಮಂಟಪ

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರ ರವರ ಕಛೇರಿ (ವಿದ್ಯುತ್ ವಿಭಾಗ) ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಸಂಖ್ಯೆ:ಮೈನಪಾ/ಕಾ.ಇಂ(ವಿ)/ಟಿ.ಎನ್–06/2023–24 ದಿನಾಂಕ: 08.09.2023

ಅಲ್ಪಾವಧಿ ಟೆಂಡರ್ ಪ್ರಕಟಣೆ–06 (ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರುಗಳ ಕೋರಿಕೆ ಮೇರೆಗೆ 2023–24ನೇ ಸಾಲಿನ ಪಾಲಿಕೆ ಅನುದಾನ ಲೆಕ್ಕ ಶೀರ್ಷಿಕೆ ಅನುದಾನದಡಿ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.


ಕ್ರ ಸಂ.	ವಿವರ	ಒಟ್ಟು ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1.	ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ)	03	14.86	13.09.2023	27.09.2023	29.09.2023

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು(ವಿದ್ಯುತ್ ವಿಭಾಗ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು

DIPR/MYS/KAVITA/339/23-24

ಮೂರನೇ ವರ್ಷದ ಸವಿನೆನಪು



ಶ್ರೀ.ಕೆ.ಎಸ್.ಬಸವರಾಜಪ್ಪನವರು
(ಮಾಜಿ ಜಿಲ್ಲಾ ಪಂಚಾಯಿತ್ ಸದಸ್ಯರು, ಕಲ್ಲಹಳ್ಳಿ)
ನೀವು ನಮ್ಮನ್ನಗಲಿ ಇಂದಿಗೆ 3 ವರ್ಷವಾದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಪತ್ನಿ ರತ್ನಮ್ಮ, ಮಾಯಾದೇವಿ ಗಂಗಪ್ಪ, ವಿಜಯ ಕುಮಾರ್.ಕೆ.ಬಿ, ಶಿಲ್ಪ, ನಿರಂಜನಕುಮಾರ್.ಕೆ.ಬಿ, ರಶ್ಮಿ.ಕೆ.ಬಿ, ಸಂತೋಷ್ ಪಾಟೀಲ್, ಅಥರ್ವ ಎಸ್.ಪಾಟೀಲ್, ಶ್ರೇಯಸ್, ಪನ್ನಗಭೂಷಣ ಮತ್ತು ಬಂಧುಮಿತ್ರರು.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು, ಅದರ ಮಾಲೀಕರಾದ ಮೈಸೂರು ನಗರ, ವಿನಾಯಕನಗರ, 7ನೇ ಅಡ್ಡ ರಸ್ತೆ, 8ನೇ ಮುಖ್ಯ ರಸ್ತೆ, ಮನೆ ನಂ. 25/1ಸಿ ರಲ್ಲಿ ವಾಸವಾಗಿರುವ ಶ್ರೀ ಮಂಜುನಾಥ ಬಿ. ರವರ ಧರ್ಮಪತ್ನಿಯಾದ ಶ್ರೀಮತಿ ವಿಜಯ, ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಹೊಸಹಳ್ಳಿ ಮನೆ ನಂ. 39 ರಲ್ಲಿ ವಾಸವಾಗಿರುವ ಶ್ರೀ ಪುಟ್ಟರಾಜು ರವರ ಮಗ ಶ್ರೀ ಸುನೀಲ್ ಕುಮಾರ್ ಹೆಚ್.ಪಿ. ಹಾಗೂ ಮಂಡ್ಯ ತಾಲ್ಲೂಕು, ಕೀಲರ ಗ್ರಾಮದಲ್ಲಿ ವಾಸವಾಗಿರುವ ಶ್ರೀ ಕಾಳೇಗೌಡರವರ ಮಗನಾದ ಶ್ರೀ ಕೆ. ರವೀಂದ್ರ ರವರುಗಳಿಂದ ಶುದ್ಧ ಕ್ರಯಪತ್ರದ ಮೂಲಕ ಖರೀದಿಸಲು ತೀರ್ಮಾನಿಸಿರುತ್ತಾರೆ. ಈ ಬಗ್ಗೆ ಸಾರ್ವಜನಿಕರಲ್ಲಿ ಏನಾದರೂ ತಕರಾರು ಇದ್ದಲ್ಲಿ, ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಕೆಳಕಂಡವರನ್ನು ಈ ಪ್ರಕಟಣೆಯ 7 (ಏಳು) ದಿನಗಳ ಒಳಗಾಗಿ ಭೇಟಿ ಮಾಡಿ ತಿಳಿಸತಕ್ಕದ್ದು, ತಪ್ಪಿದಲ್ಲಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲು ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲಾಗುತ್ತದೆ. ತದನಂತರ ಬರುವಂತಹ ಯಾವುದೇ ತಕರಾರುಗಳಿಗೆ ಯಾ ಕ್ಲೈಮುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ: ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಹೊಂಗಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 130 ರ ವಿಸ್ತೀರ್ಣ 1 ಎಕರೆ 06 ಗುಂಟೆ, ಸರ್ವೆ ನಂ. 132 ರ ವಿಸ್ತೀರ್ಣ 2 ಎಕರೆ 5 ಗುಂಟೆ, ಸರ್ವೆ ನಂ. 133 ವಿಸ್ತೀರ್ಣ 5 ಎಕರೆ 4 ಗುಂಟೆ, ಸರ್ವೆ ನಂ. 142 ರ ವಿಸ್ತೀರ್ಣ 8 ಎಕರೆ 07 ಗುಂಟೆ ಹಾಗೂ ಸರ್ವೆ ನಂ. 143/5 ರ ವಿಸ್ತೀರ್ಣ 24 1/2 ಗುಂಟೆ ಒಟ್ಟು ವಿಸ್ತೀರ್ಣ 17 ಎಕರೆ 6 1/2 ಗುಂಟೆ ಜಮೀನಿಗೆ ಚೆಕ್ಕುಬಂಧಿ:– ಪೂರ್ವಕ್ಕೆ : ರಸ್ತೆ ಹಾಗೂ ನಾಲೆ, ಪಶ್ಚಿಮಕ್ಕೆ : ಸರ್ವೆ ನಂ. 142 ಕ್ಕೆ ಹೊಂದಿಕೊಂಡಂತೆ ನಾಲೆ ಹಾಗೂ ರಸ್ತೆ. ಉತ್ತರಕ್ಕೆ: ಸರ್ವೆ ನಂ. 133 ಕ್ಕೆ ಹೊಂದಿಕೊಂಡಂತೆ ನಾಲೆ ಹಾಗೂ ರಸ್ತೆ, ದಕ್ಷಿಣಕ್ಕೆ: ಸರ್ಕಾರಿ ರಸ್ತೆ.

Sd/- RAVI KIRAN. B.Sc., LL.B. ADVOCATE
OFFICE: #1143/1E Chanakya Circle, Geetha Road Chamarajapuram, Mysuru - 570 004
Ph: Off: 0821-4287199, M: 9980776068

ದಿನಾಂಕ: 12-09-2023 ಸ್ಥಳ: ಮೈಸೂರು.

ಉಪಾಧ್ಯಾಯರುಗಳ ಸಹಕಾರ ಸಂಘ ನಿಯಮಿತ

ನಂಜನಗೂಡು ತಾಲ್ಲೂಕು
ಮಹದೇಶ್ವರ ಲೇಔಟ್, ಹುಲ್ಲಹಳ್ಳಿ ರಸ್ತೆ, ನಂಜನಗೂಡು – 571301
ರಿ.ನಂ.ಎ.ಆರ್.ಎಂ 1020/52 ದಿನಾಂಕ: 20–10–1952

ಕ್ರಮ.ಸಂಖ್ಯೆ: 41/2023–24 ತಾ: 12.09.2023

ಮಾನ್ಯ ಸದಸ್ಯರುಗಳಲ್ಲಿ ವಿನಂತಿ,

ಮೇಲ್ಕಂಡ ಸಹಕಾರ ಸಂಘದ 2022–23ನೇ ಸಾಲಿನ 70ನೇ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷರು ಹಾಗೂ ತಾಲ್ಲೂಕಿನ ಕ್ಷೇತ್ರಶಿಕ್ಷಣಾಧಿಕಾರಿಗಳಾದ ಶ್ರೀಮಾನ್ ಎ.ಟಿ.ಶಿವಲಿಂಗಯ್ಯರವರ ಘನಅಧ್ಯಕ್ಷತೆಯಲ್ಲಿ ದಿನಾಂಕ: 16/09/2023 ನೇ ಶನಿವಾರ ಬೆಳಗ್ಗೆ 11.00 ಘಂಟೆಗೆ ನಂಜನಗೂಡು ಟೌನ್ ಹುಲ್ಲಹಳ್ಳಿ ವೃತ್ತದಲ್ಲಿರುವ (ಕೌಸಲ್ಯ ಕಾಂಪ್ಲೆಕ್ಸ್) ಶ್ರಾವಣ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರುಗಳಿಗೆ ಮಹಾಸಭೆ ನೋಟೀಸ್‌ಗಳನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದ್ದು, ಕಾರಣಾಂತರಗಳಿಂದ ತಲುಪದೇ ಇದ್ದಲ್ಲಿ ಇದನ್ನೇ ಮಹಾಸಭೆಗೆ ಆಹ್ವಾನ ಎಂದು ಭಾವಿಸಿ ಸಭೆಗೆ ಆಗಮಿಸಿ ತಮ್ಮ ಪೂರ್ಣ ಸಹಕಾರವನ್ನು ನೀಡಬೇಕಾಗಿ ಈ ಮೂಲಕ ಕೋರಿದೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ, ಸಹಿ/–(ಜಿ.ಶಿವಕುಮಾರ್) ಕಾರ್ಯದರ್ಶಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ,
ಮೈಸೂರು ಅರಮನೆ ಮಂಡಳಿ, ಮೈಸೂರು
Ph: 0821-2421051, Fax:2434425, e-mail: ddmysorepalace@gmail.com, GST: 29AAAGM0484M1ZX
ಟೆಂಡರ್ ಸಂಖ್ಯೆ: ಕಾನಿಅ/ಮೈಅಮಂ/ಉನಿ/ಸಿವಿಲ್/ಟೆಂಡರ್–07(2ನೇ ಕರೆ)/2023–24, ದಿನಾಂಕ: 08.09.2023

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ಇವರಿಂದ ಮೈಸೂರು ಅರಮನೆಯ ಆವರಣದಲ್ಲಿ ಸಿವಿಲ್ ವಿಭಾಗದಿಂದ ಕ್ರಸಂ 02ರ ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ಒಟ್ಟು ರೂ.23.70/– ಲಕ್ಷಗಳ ಕೆಲಸಕ್ಕೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿರುವ ಹಾಗೂ ಮೈಸೂರು ಅರಮನೆ ಮಂಡಳಿ ಅಥವಾ ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ ಕೇಂದ್ರ ಪ್ರಾಚ್ಯವಸ್ತು ಇಲಾಖೆಯಲ್ಲಿ ಕಾಮಗಾರಿಗಳನ್ನು ನಿರ್ವಹಿಸಿ ಹಾಗೂ ಸದರಿ ಕೆಲಸದಲ್ಲಿ ಅನುಭವವಿರುವ ಅರ್ಹ ಗುತ್ತಿಗೆದಾರರು/ಏಜೆನ್ಸಿ/ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿವುಳ್ಳ ಅರ್ಜಿದಾರರು 1) ವಿದ್ಯುನ್ಮಾನ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್) ವ್ಯವಸ್ಥೆ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 15.09.2023 17:30 ಗಂಟೆ ಯವರೆಗೆ, 2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 16.09.2023 17:30 ಗಂಟೆಗೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಅಂತರ್‌ಜಾಲದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು.

ಸಹಿ/– ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು

DIPR/DDMYS/KSMCA/328/2023-24

